THE BOOK WAS DRENCHED

UNIVERSAL
LIBRARY
OU_202116
UNIVERSAL
LIBRARY

ಅಳಿಲಸೇವಾ ಗ್ರಂಥಮಾಲೆಯ ಏಳನೆಯ ಕುಸುಮ.

# ಸಂಸಾರ

(ಆರು ಏಕಾಂಕ ನಾಟಕಗಳು)

ಮಿತ್ರಮಂಡಳಿ, ಮಂಗಳೂರು.

ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಮಂಗಳೂರು.

1934

ಬೆಲೆ: ಹನ್ನೆರಡಾಣೆ.

# ಮೂರು ಮಾತು

ಕಿರಿಯರ ಬೆಂಬಲದಿಂದಲೂ ಹಿರಿಯರ ಪ್ರೋತ್ಸಾಹದಿಂದಲೂ ಮಿತ್ರ ಮಂಡಳಿಯು ಇನ್ನೊಂದು ಹೂವನ್ನು ಅಳಿಲಸೇವಾ ಗ್ರಂಥಮಾಲೆಯಲ್ಲಿ ಪೋಣಿಸಿ, ತನ್ನ ಅಂಶದ ಸಾಹಿತ್ಯ ಸೇವೆಯನ್ನು ಕೈಕೊಂಡಿರುವುದು. ಕೇವಲ ಪುಸ್ತಕ ಪ್ರಕಟಣವು ಸಾಹಿತ್ಯಸೇವೆಯಲ್ಲ, ಎಂದು ಹೇಳುವವರಿಗೆ ಪುಸ್ತಕ ಪ್ರಕಟಣದಷ್ಟು ಶೀಘ್ರಕಾರಿಯೂ, ಫಲದಾಯಕವೂ, ಪ್ರಯೋಜನಕಾರಿಯೂ ಆದ ಉಪಾಯವು ಸಾಹಿತ್ಯಕ್ಷೇತ್ರದಲ್ಲಿ ಇನ್ನೊಂದು ಇಲ್ಲವೆಂದೇ ನಾವು ಧೈರ್ಯದಿಂದ ಹೇಳುವೆವು. ಜಿಜ್ಞಾಸೆಯು ಕುಡಿಗೊಂಡು ಲೇಖನಕಲೆಯಾಗುವುದು, ಅದೇ ಅರಳಿ, ಸಂಸ್ಕೃತಿಯು ಪ್ರಚಾರಗೊಳ್ಳುವುದು ಅಂತಹ ಪ್ರಚಾರಕ್ಕೆ ಪುಸ್ತಕಗಳೆ ಮೂಲಾಧಾರವು.

ಶ್ರೀಯುತ ಗೋವಿಂದಪೈಗಳು ಸುಪ್ರಸಿದ್ಧ ಇತಿಹಾಸ ಸಂಶೋಧಕರೂ ಕವಿಗಳೂ ಆಗಿರುತ್ತಾರೆ. ಇಲ್ಲಿ ಆರಿಸಿದ ಇವರ ನಾಟಕದಲ್ಲಿ ಅವರಿಗೆ ಕನ್ನಡ ಭಾಷೆಯ ಮೇಲಿರುವ ಅಧಿಕಾರವನ್ನು ಮನಗಾಣಬಹುದು. ಅವರ ಭಾಷೆಯಲ್ಲಿ ಬಿಗುವಿದೆ. ವಾಕ್ಯರಚನೆಯಲ್ಲಿ ಚೈತನ್ಯವಿದೆ ಗಂಡ-ಹೆಂಡತಿ, ತಾಯಿ-ಮಗು ಮೊದಲಾದ ಸಂಬಂಧಗಳೊದಗಿದರೆ ತಾನೆ ಲೋಕಾನುಭವ ಉಂಟಾಗುತ್ತದೆಂಬ ಮಾತನ್ನು ಈ ಸಣ್ಣ ನಾಟಿಕೆಯಲ್ಲಿ ಅಲ್ಲಗಳೆದಿದ್ದಾರೆ. ಮಲ್ಲಿಗ ಮತ್ತು ಸಂಪಗೆ ಇವರಲ್ಲಿ ಸಂಪಗೆ ಲೋಕಾನುಭವವಿಲ್ಲದವಳು, ಅವಳಕ್ಕ ಮಲ್ಲಿಗೆ ಸಂಸಾರವನ್ನು ಚನ್ನಾಗಿ ತುಲನೆ ಮಾಡಿದವಳು ಆದುದರಿಂದಲೇ ಸಂಪಗೆಯ ಮಗು ತೀರುವಾಗ ಬಳಿಯಲ್ಲಿ ಮಲ್ಲಿಗೆ ಮಾತ್ರ, ಸಂಪಗೆಯು ಜಾತ್ರೆಗೆ ತೆರಳಿದ್ದಳು.

**ಅಹಿಂತಕ**ವೆಂಬ ಎರಡನೆಯ ನಾಟಕವನ್ನು ಬರೆದವರು ಶ್ರೀ ನಂದರು. ಅವರು ಕನ್ನಡ ರಂಗಭೂಮಿಗೂ ಕನ್ನಡ ಪಾಠಕರಿಗೂ ಚಿರಪರಿಚಿತರೆ. ಹಾಗಿದ್ದರೂ ಈ ಸಲ ಗುಪ್ತನಾಮದಿಂದ ಇರಲು ಇಚ್ಛಿಸುತ್ತಿದ್ದಾರೆ. ಅಹಿಂತಕನೆಂಬವನು ಪದಭ್ರಷ್ಟನಾಗಿ ಮೂರು ಸತ್ಯಗಳನ್ನು ತಿಳಿಯಲು ಭೂಲೋಕಕ್ಕೆ ಬರುವನು. ಆ ಮೂರು ಸತ್ಯಗಳನ್ನು ಒಬ್ಬ ಸಮಗಾರನ ಮನೆಯಲ್ಲಿದ್ದು ತಿಳಿಯುವನು. ಈ ನಾಟಕವು ನಾಟ್ಯಕಲೆಯ ದೃಷ್ಟಿಯಿಂದ ವಿಶಿಷ್ಟವಾಗಿದೆ, ಭಾಷೆಯು ಸಾಮಾನ್ಯರ ಭಾಷೆಯಾಗಿದ್ದು, ಯಥಾರ್ಥತೆಯ ಬಿಂಬವಾಗಿದೆ ನಾಟಕದ ಮೊದಲಿಂದ ಕಡೆಯವರೆಗೆ ರಂಗಭೂಮಿಯನ್ನು ಗಹನವಾಗಿರಿಸುವುದರಲ್ಲಿ ಇವರು ಶಕ್ತರಾಗಿದ್ದಾರೆ.

ಮತ್ತಿನ್ನೆರಡು ನಾಟಕಗಳ ಕರ್ತರು ಶ್ರೀಯುತ ಕೋಟ ಶಿವರಾಮ ಕಾರಂತರು ಮತ್ತು ಶ್ರೀ। ಎಮ್. ಎನ್. ಕಾಮತರು. ಇವರಿಬ್ಬರೂ ದಕ್ಷಿಣ ಕನ್ನಡದ ಸುಪ್ರಸಿದ್ಧ ನಾಟಕಕಾರರು. ಕಾರಂತರೂ ಕಾಮತರೂ ಬರೆದ ನಾಟಕಗಳಿಗೆ ಕಡಿಮೆಯಿಲ್ಲ, ಪ್ರತಿವರ್ಷ ಒಂದೆರಡು ನಾಟಕಗಳು ಹೊರಬೀಳಲೇಬೇಕೆಂಬುದು ಅವರದೊಂದು ಧರ್ಮ. **ಹಿರಿಯಕ್ಕನ ಚಾಳಿ** ಯೆಂಬುದು ಹಳ್ಳಿಯುವನೊಬ್ಬನ ವ್ಯಂಗಚಿತ್ರ, **ಪುನರ್ಜನ್ಮ**ವೆಂಬುದು ಪಟ್ಟಣದ ಸಾಹುಕಾರನ ವ್ಯಂಗಚಿತ್ರ. ಎರಡೂ ಪ್ರಹಸನಗಳೆ. ಎರಡರ ಭಾಷೆಯೂ ವ್ಯವಹಾರೋಚಿತವಾದುದು

ಅಂತ್ಯದೆರಡು ನಾಟಕಗಳನ್ನು ಬರೆದವರಿಬ್ಬರೂ ಭಟ್ಟರು. ಎರಡೂ ಪೌರಾಣಿಕ ನಾಟಕಗಳು ಶ್ರೀಯುತ ಕಡಂಗೋಡ್ಲು ಶಂಕರಭಟ್ಟರು ಕವಿಗಳು ಮತ್ತು ಪತ್ರಿಕಾಕರ್ತರು ಈ ನಾಟಕದಲ್ಲಿ ರಾಜಕೀಯ ವಿಷಯವಾಗಿ ಅವರ ಅಭಿಪ್ರಾಯಗಳನ್ನೆಲ್ಲಾ ತಿಳಿಯಬಹುದು. **ಗುರುದಕ್ಷಿಣೆ**ಯು ತೀರ ಹೊಸ ನಾಟಕ. ರಾಜಕೀಯವಾದುದು. ಪಾಂಚಾಲದರಸನನ್ನು ಸೋಲಿಸಿ ಅರ್ಜುನನು ಗುರುದಕ್ಷಿಣೆಯನ್ನು ಸಲ್ಲಿಸುವುದೆ ಕಥಾವಸ್ತು. ಕಡೆಯದಾಗಿರುವ ನಾಟಕವು **ತಾಂಡವನ ಮರಣ**ವು. ಇದು ರಾಮಾಯಣದ ಕಥೆ. ಬರೆದವನೇನೂ ಕನ್ನಡದಲ್ಲಿ ಸುರಿತವನಲ್ಲ, ವಿಶಿಷ್ಟ ಗುಣಭರಿತವಾಗಿದೆಯೆಂದೂ ಹೇಳಲಾಗದು. ಆದರೂ ಇಲ್ಲಿ ಪ್ರಕಟಿಸಿರುವೆವು.

ಇದರಲ್ಲಿರುವ **ತಾಯಿ** ಎಂಬುದು ಮುಂಚೆ "ರಾಷ್ಟ್ರಬಂಧು"ವಿನಲ್ಲಿಯೂ ಗುರುದಕ್ಷಿಣೆಯು "ದೇಶರಂಜನ"ದಲ್ಲಿಯೂ ಪ್ರಕಟಗೊಂಡವು ಸಂಬಂಧಪಟ್ಟ ಸಂಪಾದಕರಿಗೆ ನಮ್ಮ ಕೃತಜ್ಞತೆಗಳಿರುವವು.

ಎಂದಿನಂತೆ ಕನ್ನಡಿಗರೆಲ್ಲರ ಸಹಾನುಭೂತಿಯನ್ನು ಕೋರುವೆವು. ಎಂದಿನಂತೆ ಕಿರಿಯರ ಬೆಂಬಲವನ್ನು ಹಾರೈಸುವೆವು. ಎಂದಿನಂತೆಯೆ ಹಿರಿಯರ ಆಶೀರ್ವಾದವನ್ನು ಬಯಸುವೆವು. ಇನ್ನು, ದಸರಾಸಮಯದಲ್ಲಿ ಒಂದು ಕಾದಂಬರಿಯನ್ನಾಗಲಿ ರಾಜನೀತಿಯ ಗ್ರಂಥವನ್ನಾಗಲಿ ಪ್ರಕಟಿಸಬೇಕೆಂದಿರುವೆವು. ಪ್ರೋತ್ಸಾಹವು ತೊರೆಯಂತೆ ಹರಿಯುವುದೆಂದ ಮೇಲೆ ಅಖಿಲ ಸೇವಾಗ್ರಂಥ ಮಾಲೆಯು ಅದರಲ್ಲೆ ತೇಲುತ್ತಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಮಿತ್ರಮಂಡಳಿ, ಮಂಗಳೂರು,
5—4—1934.

**ಜೆ. ವಾಮನ ಭಟ್ಟ,** ಬಿ. ಎ.
ಅಧ್ಯಕ್ಷ.

# ವಿಷಯ ಸೂಚಿಕೆ.


| | | | ಪುಟ |
|---|---|---|---|
| 1. | **ತಾಯಿ**— | ಶ್ರೀ। ಗೋವಿಂದ ಪೈ, ಮಂಜೇಶ್ವರ. | 1 |
| 2. | **ಅಹಿಂತಕ**— | ಶ್ರೀನಂದ. | 11 |
| 3. | **ಹಿರಿಯಕ್ಕನ ಚಾಳಿ**— | ಶ್ರೀ। ಕೋಟ ಶಿವರಾಮ ಕಾರಂತ. | 43 |
| 4. | **ಪುನರ್ಜನ್ಮ**— | ಶ್ರೀ। ಎಮ್. ಎನ್. ಕಾಮತ್. | 67 |
| 5. | **ಗುರುದಕ್ಷಿಣೆ**— | ಶ್ರೀ। ಕಡಂಗೋಡ್ಲು ಶಂಕರ ಭಟ್ಟ, ವಿದ್ವಾನ್. | 92 |
| 6. | **ತಾಂಡವನ ಮರಣ**— | ಶ್ರೀ। ಜಿ. ವಾಮನ ಭಟ್ಟ, ಬಿ. ಎ. | 132 |

# ಸಂಸಾರ

# ತಾಯಿ

(ಅನುವಾದ)

## ಪಾತ್ರಗಳು.

ಸಂಪಗೆ—ಒಬ್ಬ ತರುಣ ವಿಧವೆ.

ತುಂಬಿ—ಸಂಪಗೆಯ ಗಂಡುಮಗು.

ಮಲ್ಲಿಗೆ—ಸಂಪಗೆಯ ಅಕ್ಕ.

## ಸ್ಥಾನ.

ಬೆಟ್ಟದ ತಪ್ಪಲಲ್ಲಿ ಒಂಟಿಯೊಂದು ಗುಡಿಸಲು, ನೆರೆಯಲ್ಲಿ ಮನೆಗಳಿಲ್ಲ, ಮನುಷ್ಯರ ಸುಳಿವಿಲ್ಲ. ಮುಂಜಾವದ ಹೊತ್ತು. ಮಗು ಜ್ವರಗ್ರಸ್ತವಾಗಿ ಹಾಸಿಗೆಯಲ್ಲಿ ಮಲಗಿದೆ. ಮಲ್ಲಿಗೆ ಒಲೆ ಹೊತ್ತಿಸುತ್ತಿರುವಳು. ಸಂಪಗೆ ಜಾತ್ರೆಗೆ ಹೋಗುವರೆ ಸೊಗಸಾದ ಉಡುಪು ಹಾಕಿಕೊಂಡು ಬೇರೊಂದು ಕೋಣೆಯಿಂದ ಹೊರಬರುವಳು.

**ಮಲ್ಲಿಗೆ**— ನಿಜವಾಗಿಯೂ ನೀನು ಈಹೊತ್ತು ಹೊರಹೋಗಲೊಲ್ಲೆ?

**ಸಂಪಗೆ**— ಏತಕ್ಕೆ ಹೋಗಲೊಲ್ಲೆ? ತುಂಬಿ ನೆಟ್ಟಗಿರುವನಷ್ಟೆ

**ಮಲ್ಲಿಗೆ**— ನೆಟ್ಟಗಿರುವನೆಂದೆಯಾ?

**ಸಂಪಗೆ**— ಹೇಗೂ ನಿನ್ನೆಗಿಂತ ಕೆಡುಕಾಗಿಲ್ಲವಷ್ಟೆ.

**ಮಲ್ಲಿಗೆ**— ನಿನ್ನೆಗಿಂತ ಆತನ ಜ್ವರವು ಈಹೊತ್ತು ಹೆಚ್ಚಿದೆಂದು ನನ್ನೆಣಿಕೆ.

**ಸಂಪಗೆ**— ನಿನ್ನೆಣಿಕೆಯೇ? ನೀನು ಯಾವಾಗಲೂ ಕೆಡುಕನ್ನೇ ಶಂಕಿಸುವಿ. ನೆನಪಿಲ್ಲವೇ . . . .

**ಮಲ್ಲಿಗೆ**— ನೆನಪು ತುಂಬಾ ಇದೆ.

**ಸಂಪಗೆ**—ಹಾಗಾದರೆ ಇಷ್ಟುವರೆಗೆ ನೀನೆಷ್ಟು ಸಲ ಹುಲಿ ಎಂದು ಕೂಗುಹಾಕಿದೆ ಎಂಬದೂ ನಿನಗೆ ನೆನಪಿರಬೇಕು. ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ನಿನಗಿರುತ್ತಿದ್ದರೆ, ಎಷ್ಟು ಅಲ್ಪಕಾರಣದಿಂದ ಅವು ಅಸ್ವಸ್ಥದಲ್ಲಿ ಬೀಳುತ್ತವೆಂಬುದನ್ನೂ ಎಷ್ಟು ಬೇಗನೆ ಅವುಗಳ ಕುತ್ತ ಮಾಯುತ್ತದೆಂಬುದನ್ನೂ ನೀನು ಅರಿಯುತ್ತಿದ್ದಿ, ಮತ್ತು ಮಗು ಒಂದು ಸಲವೇನೋ ಕೆಮ್ಮಿತೆಂದರೆ ಕಳವಳಿಸುತ್ತಿದ್ದಿಲ್ಲ, ಅಥವಾ ಅದಕ್ಕೆ ಚಿಕ್ಕ ದೊಂದು ಮುಳ್ಳು ಚುಚ್ಚಿತೆಂದರೆ ಕೂಡಲೆ ಮರಣವನ್ನು ಮುಂಗಾಣು ತ್ತಿದ್ದಿಲ್ಲ. ಇಗೋ, ತುಂಬಿ ಮಲಗಿ ನಿದ್ದಿಸುತ್ತಲಿದೆ, ನಿದ್ದೆ ಹತ್ತಿದ ಮಗುವಿಗೆ ರೋಗವಿದೆಯೇ?

**ಮಲ್ಲಿಗೆ**—ಆದರೆ ತುಂಬಿ ಹಾಸಿಗೆಯಲ್ಲಿ ಹೇಗ ಹೊರಳಾಡುತ್ತಾ ನೆಂದು ನೋಡು. ಇದು ಆರೋಗ್ಯದ ನಿದ್ದೆಯಲ್ಲ. ಕೈಗಳು ಬೆಚ್ಚಗಿವೆ, ಇಟ್ಟಲ್ಲಿ ಇಟ್ಟುಕೊಂಡಿಲ್ಲ. ನೆತ್ತಿ ಬೇಯುತ್ತಿದೆ. ಬಾ, ಒಂದು ತಡವೆ ಮುಟ್ಟಿನೋಡು.

**ಸಂಪಗೆ**—ಮಲ್ಲಿ, ಹೀಗೆಲ್ಲ ಏಕೆನ್ನುವೆ? ಇದೇನೂ ಹೊಸತಲ್ಲ, ಹಳೆಯ ಕತೆಯೇ—ಮುದುಗನ್ನೆಯ ಮಕ್ಕಳು . . . ಮಿಕ್ಕದನ್ನು ನೀನು ಬಲ್ಲಿಯಷ್ಟೆ.

**ಮಲ್ಲಿಗೆ**—ಅಹುದು, ಚನ್ನಾಗಿ ಬಲ್ಲೆ.

**ಸಂಪಗೆ**—ಸರಿ, ಹಾಗಾದರೆ ತನ್ನ ತುಂಟ ಕೂಸು ಚಂಡಿ ಹಿಡಿದು ಅತ್ತಿತೆಂದರೆ ತಾಯಿ ಅದನ್ನು ಬಿಟ್ಟು ಅತ್ತಿತ್ತ ಕದಲದೆ ಅದನ್ನೆತ್ತಿಕೊಂಡು ತನ್ನೆದೆ ಮುರಕೊಳ್ಳುವುದೂ, ಮಗುವಿಗೆ ಅಸೌಖ್ಯ ವೆಂದು ಕನಸು ಕಂಡಳೆಂದರೆ ಅತ್ತತ್ತು ತನ್ನ ಕಣ್ಣುಗಳನ್ನು ಸೋರಿಸಿ ಕೊಳ್ಳುವುದೂ ಇವಷ್ಟೇ ಆಕೆಯ ಕೆಲಸವಲ್ಲ—ತಾಯಿಗೆ ಬೇರೆಷ್ಟೋ ಕೆಲಸವಿದೆ. ಮಕ್ಕಳ ಅಳುಕುಳಿತಕ್ಕೆ ಅಷ್ಟೊಂದು ಬೆಲೆ ತೆತ್ತರೆ, ಇಲ್ಲಿಂದ ಪಾರಾಗುವ ಬಗೆ ಹೇಗೆ? ಜೀವಕಾಲದಲ್ಲಿ ಸುಖಿಸಲಿಕ್ಕೆ

ರವಷ್ಟಾದರೂ ಅವಕಾಶ ಸಿಕ್ಕೀತೇ? ನೀನಾದರೂ ಇದನ್ನು ಬೇಗನೆ ಕಲಿತುಕೊಳ್ಳುವಿ, ಮತ್ತು . . . .

**ಮಲ್ಲಿಗೆ**— ನಾನಾದರೂ ಕಲಿತುಕೊಳ್ಳುವೆನೆ?

**ಸಂಪಗೆ**— ಅಹುದು. ನೀನಾದರೂ ಕಲಿತುಕೊಳ್ಳುವಿ ನನ್ನಲ್ಲಿ ಸಿಟ್ಟಾಗಬೇಡ. ಅಥವಾ ನನ್ನ ಮಗುವಲ್ಲಿ ನನಗೆ ಅಕ್ಕರೆ ಇಲ್ಲವೆಂದೂ ಎಣಿಸಬೇಡ. ತುಂಬಿ ಇಷ್ಟು ತುಂಟನಾದರೂ ಆತನಲ್ಲಿ ನನಗೆಷ್ಟು ಪ್ರೀತಿ ಇದೆ ಎಂದು ನೀನೇ ಬಲ್ಲಿ. ಆತನ ತಂದೆ ತೀರಿಹೋದಂದಿನಿಂದ, ಆತನಿಗಾಗಿ ನನ್ನ ಬೆರಳುಗಳನ್ನು ಎಲುಬನಕಾ ತೇದೆ. ನನ್ನ ಬದುಕು ಎಷ್ಟು ಕಷ್ಟವೆಂಬುದನ್ನು ದೇವರೇ ಬಲ್ಲ. ಆದರೆ ಸಂಸಾರದಲ್ಲಿ ನಮಗೆ ಯಾವಂದೇನೋ ದೊರೆವ ಕೊಂಚ ವಿನೋದವನ್ನೂ ಅಲ್ಲಗಳೆಯಲೇ? ನನಗಾದರೋ ಸಂತೋಷಕ್ಕೆ ಎಡೆದೊರೆವುದೇ ಕಡಿಮೆ· ಈ ಜಾತ್ರೆಯಾದರೋ ಬರುವುದೆಂದರೆ ವರ್ಷಕ್ಕೆ ಒಂದೇ ಬಾರಿ. ನಿನಗೇನೋ ಜಾತ್ರೆ ಒಲ್ಲದು. ನೀನು ಮನಸ್ಸನ್ನು ಗಟ್ಟಿ ಹಿಡುಕೊಳ್ಳಬಲ್ಲೆ. ಈಗ ನನಗೂ ಅಡ್ಡಗಟ್ಟುವಿ. ಚಿಂತೆ ಇಲ್ಲ— ನಾನು ಹೋಗಲೊಲ್ಲೆ. ಇಲ್ಲೇ ಉಳಕೂಳ್ಳುವೆ.

**ಮಲ್ಲಿಗೆ**— ಕೂಸೇ, ನಾನು ನಿನಗೆ ಯಾವುದರಲ್ಲಿಯೂ ತಡೆಗಟ್ಟೆನು.

**ಸಂಪಗೆ**— ಇಗೋ, ನನ್ನನ್ನು ಕೂಸೇ ಎಂದೂ ಮುದ್ದು ಮುದ್ದಾಗಿ ಕರೆಯುವಿ, ಹಾಗೆಯೇ ನನ್ನಲ್ಲಿ ರೇಗಿಕೊಳ್ಳುವಿ. ಆದರೆ ನಾನು ನಿನ್ನೊಂದಿಗೆ ಜಗಳಾಡಲೊಲ್ಲೆ. ಅಹುದು, ನಾನಿನ್ನೂ ಹರೇದವಳು; ಹರೆಯದಲ್ಲೇ ಮದುವೆಯಾದೆ, ಹರೆಯದಲ್ಲೇ ತಾಯಿಯಾದೆ. ನೀನೆಂದರೆ ಹಿರಿಯವಳು, ನಿನಗೆ ಬುದ್ಧಿ ಇದೆ. ಸಂತೆ ಜಾತ್ರೆಗಳ ತಿರುಗಾಟವನ್ನು ನೀನೊಲ್ಲಿ, ನಮ್ಮಿಬ್ಬರೊಳಗಣ ಪ್ರಾಯದ ಹೆಚ್ಚುಕಡಿಮೆ ಬರೇ ಹನ್ನೆರಡು ತಿಂಗಳೇ. ಆದರೂ, ನಮ್ಮ ಬುದ್ಧಿಯ ನಡುವೆ ಎಷ್ಟೋ ವರ್ಷಗಳು ಕಳೆದುಹೋಗಿವೆ! ನಾನು ವಿಧವೆಯೂ

ಅಹುದು, ತಾಯಿಯೂ ಅಹುದು, ಆದರೆ ನಿನ್ನ ಅರೆವಾಸಿ ಪ್ರಾಯ ವನ್ನು ಇನ್ನೂ ಕಂಡಿಲ್ಲ. ನಾನು ಎಂದಿಗಾದರೂ . . . .

**ಮಲ್ಲಿಗೆ**—ಇಲ್ಲ, ನೀನು ಎಂದಿಗಾದರೂ ನನ್ನಷ್ಟು ಪ್ರಾಯ ತುಂಬಲಾರೆ . . . .

**ಸಂಪಗೆ**—ಎಂದಿಗೂ ತುಂಬಲಾರೆನೆ? ಏಕೆ? ನೀನದನ್ನು ಹೇಗೆ ಬಲ್ಲಿ? ನನ್ನ ಮರಣವನ್ನು ಮುಂಗಂಡು ಬಲ್ಲೆಯಾ? ಈ ವರ್ಷ ಸಲುವುದನ್ನಾದರೂ ನೋಡಲಿಕ್ಕೆ ಉಳಿಯೆನೆ?

**ಮಲ್ಲಿಗೆ**—ಇನ್ನೂ ನೂರು ವರ್ಷಗಳನ್ನು ನೋಡುವಂತೆ ದೇವರು ನಿನ್ನನ್ನು ಉಳಿಸಲಿ! ಆದರೆ ನೀನೆಂದಿಗೂ ಹರೆಯದವಳೇ ಇರುವಿ.

**ಸಂಪಗೆ**—ಈಗ ತಿಳಿದೆ. ಈ ಮುಂಚೆ ನಿನ್ನ ಉದ್ವಿಗ್ನ ಮೋರೆ ಯನ್ನು ನೋಡಿ, ಉರುಟುರುಟು ಮಾತುಗಳನ್ನು ಕೇಳಿ, ನನ್ನ ಎದೆ ಹವ್ವನೆ ಹಾರಿತು. ಈಗ ತಿಳಿದೆ—ನೀನನ್ನುವುದೇನು? ನಾನು ಇನ್ನೂ ಒಂದು ಕೈಗೂಸು, ಇನ್ನೂ ಬರೇ ಪೆದ್ದತಿ, ಇಷ್ಟೇ ಅಲ್ಲವೆ? ಆದರೂ ನಾನು ನುರಿತಂತೆ ನುರಿತ ಯಾವೊಬ್ಬ ಹೆಣ್ಣು ಹುಡುಗಿಯಾದರೂ, ಆ ಮೇಲೆ ಪೆದ್ದತಿಯಾಗಿರಲಾರಳು. ಮಲ್ಲಿ, ನಾನರಿತಂತೆ ಸಂಸಾರವನ್ನು ನೀನರಿಯೆ. (ಗಂಟೆ ಹೊಡೆಯುವುದು.) ಹೊಡೆದುದೆಷ್ಟು? ಐದಲ್ಲವೇ? ಇನ್ನು ನಾನು ಹೊರಡಲೇ ಬೇಕು, ಇಲ್ಲವಾದರೆ ದೋಣಿ ದೊರೆಯದು. ಇಲ್ಲಿಂದ ಕಡವಿಗೆ ಮೊಟ್ಟಗೆ ಮೂರು ತಾಸುಗಳ ದಾರಿ ಇದೆ. ನಾನು ಶಾನೆ ಹೊತ್ತು ಗಳಹುತ್ತಾ ಇಲ್ಲಿಯೆ ತಳುವಿದೆ. ಆಗಲಿ, ಹುಡುಗೀ, ಹೋಗಿ ಬರುವೆ.

**ಮಲ್ಲಿಗೆ**—ನೀನು ತುಂಬಿಗೆ ಇನ್ನೂ ಮುತ್ತಿಡಲಿಲ್ಲ, ಹೋಗಿ ಬರುವೆ ಎಂದು ಆತನೊಂದಿಗೆ ಹೇಳಿಲ್ಲ.

**ಸಂಪಗೆ**—ಆತಗೆ ಸೊಂಪಗೆ ಸಿದ್ದೆಹತ್ತಿದೆ-ಎಚ್ಚರಿಸಲೊಲ್ಲೆ. ನನ್ನಲ್ಲಿ ತಾಯಿತನದ ಅಕ್ಕರೆ ಇದೆ ಎಂಬುದನ್ನು ಈಗಲಾದರೂ ಅರಿತೆ

ಯಲ್ಲವೆ? ಆತನಿಗಾಗಿ ನನ್ನನ್ನೇ ನಾನು ಮರತಿರುವೆ. ನೋಡು, ಯಾವ ಸೊಗಸಿನ ನಿದ್ದೆ! ಸಂತೆಯಿಂದ ಆತನಿಗೆ ಯಾವ ಬಗೆಯ ಆಟಿಕೆಗಳನ್ನು ಕೊಂಡುಬರುವೆನೆಂದು ಬಲ್ಲಿಯಾ? ಅವನ್ನು ನೋಡಿದೊಡನೆ ಆತನ ನಿನ್ನ ಮುದ್ದಾಟವೆಲ್ಲನನ್ನು ತಳ್ಳಿ ಬಿಡುವನು. ನಾನೂ ಏನೂ ಬಗೆದಿಲ್ಲವಾದರೂ, ನೀನೀಗ ನನ್ನಲ್ಲಿ ಸಿಟ್ಟಾಗಿರುವಿ. ಮಲ್ಲಿ, ನೀನು ನನ್ನನ್ನು ಹೀಗೆ ಕಾಡಲಾಗದು. ತುಂಬಿಯಲ್ಲಿ ನನಗೆ ಪ್ರೀತಿ ಇದೆ ಎಂದು ನೀನು ಬಲ್ಲೆ, ಹಾಗೆಯೇ ಆತನಲ್ಲಿ ನನಗಿಂತ ಹೆಚ್ಚಿನ ಎಚ್ಚರ ನಿನಗಿದೆ ಎಂಬುದನ್ನು ನಾನು ಅರಿತಿಲ್ಲವಾದರೆ, ನಾನಿಲ್ಲಿಂದ ಮೆಟ್ಟು ಮಿಸುಕಲೊಲ್ಲೆ ಎಂದೂ ನೀನು ಬಲ್ಲ. ಆದರೂ ನಿನ್ನ ಮನಸ್ಸಿನಲ್ಲಿ ಇನ್ನೂ ಹಾಗಿದ್ದರೆ . . . .

**ಮಲ್ಲಿಗೆ—** ನನ್ನ ಮನಸ್ಸಿನಲ್ಲಿ ಹಾಗೇನೂ ಇಲ್ಲ. ನಿನ್ನನ್ನು ಮಿಕ್ಕಿ . . .

**ಸಂಪಗೆ—** ಹಾಗಾದರೆ ಹೋಗಿ ಬರುವನು. ನಿನ್ನನ್ನು ಮಿಕ್ಕಿ ಆತನಲ್ಲಿ ಎಚ್ಚರುಳ್ಳವರನ್ನು ನಾನರಿಯೆ. (ಹೊರಟು ಹೋಗುವಳು.)

**ಮಲ್ಲಿಗೆ—** ಸರಿ, ಈಕ ಎಲ್ಲಾ ಅನುಭವವನ್ನು ಕಂಡಿರುವಳು—ಆದರೂ ಏನನ್ನೂ ಅರಿಯಳು ಆತನು ತನ್ನ ಹೃದಯಸರ್ವಸ್ವದ ಪ್ರೇಮವನ್ನು ಈಕೆಯಲ್ಲಿ ತಳಿಮಬಿಟ್ಟನಾದರೂ, ಈಕೆ ಸಂಸಾರದ ಸ್ಪರ್ಶವನ್ನಾದರೂ ಪೊಂದಲಿಲ್ಲ. ತನ್ನ ಗಂಡನ ಮರಣಶಯ್ಯೆಯ ಬಳಿಯಲ್ಲಿ ಈಕ ಕುಳಿತಿದ್ದುದು ನಿಜ, ಆತನ ಮಗುವನ್ನು ತನ್ನ ಹೊಟ್ಟೆಯಲ್ಲಿ ಹೊತ್ತುಕೊಂಡುದೂ ನಿಜ, ಅದರೂ ಈಕೆಯು ಈ ಬಡವಾಯಿ ಮಗುವಿನಂತೆ, ಈಕ ಇನ್ನೂ ಒಂದು ಚಿಕ್ಕ ಕೂಸೇ ಸರಿ. ನಾನಾದರೋ, ಈ ಸಂಸಾರವೆಲ್ಲವನ್ನೂ ಅಲ್ಲಗಳೆದು ಹೃದಯದಲ್ಲಿ ಮುದುಕಿಯಾಗಿರುವೆನು. ಸಂಸಾರವು ಈಕೆಯನ್ನು ಎದೆಯಾರೆ ಊಡಿಸಿದೆ, ನಾನು ಅಲ್ಲಲ್ಲಿ ಕೆಳಗುದುರಿದ ತಟಕುಗಳನ್ನು ನೆಕ್ಕಿ ಹಸಿವು ಕಳೆದೆ. ನಾನಿಗಲೇ ಬರಗೆಟ್ಟ ಮುದುಕಿ, ಈಕೆ ಯೋಚನೆ ಇಲ್ಲದ ಯುವತಿ. ಈ

ಅನುರಾಗದಿಂದ ಕರುಣೆಯನ್ನು ಕಲಿತಿಲ್ಲ, ಪ್ರೇಮವನ್ನು ಈವರೆಗೆ ಅರಿತಿಲ್ಲ. ಇಷ್ಟೇ ಅಲ್ಲ; ಈಕೆ ಧೀರನಾತನ ಪ್ರೇಮವನ್ನು ಕುಡಿದಳಾದರೂ—ಅಲ್ಲ, ಆತನ ಜೀವನರಸವನ್ನೇ ಹೀರಿದಳಾದರೂ—ತಾನೇನನ್ನು ಕುಡಿದೆನೆಂದು ಈಕೆ ಇನ್ನೂ ತಿಳಿದಿಲ್ಲ. ಆತನ ಪ್ರೇಮವನ್ನು ಬರೇ ನೀರಂತೆ ನುಂಗಿಬಿಟ್ಟಳು; ಮತ್ತು ಕೈಗೆ ಎತ್ತಿದ ಪಾತ್ರವು ಬರಿದಾಗಿ ತನ್ನ ಕಾಲ ಬುಡದಲ್ಲಿ ಒಡೆದೊಡನೆ ಅದನ್ನು ಮರೆತುಬಿಟ್ಟಳು. ಈಗಲೀ ಪುತ್ರಸ್ನೇಹವೆಂಬ ತಿಳಿಬುಗ್ಗೆ ಈಕೆಯ ಮುಂದೆ ವೃಥಾ ಚಲ್ಲಾಡುತ್ತಿದೆ—ನಾನಾದರೋ ಎದೆಬತ್ತಿ ಬೆಂದು ಅದರ ಹನಿಹನಿಗೆ ನೀರಡಸುತ್ತಿರುವೆ. ಒಡೆಯಾ, ನಾನು ತೃಷಿಸುತ್ತಿರುವೆನಲ್ಲವೆ? ಆದರೂ, ಅದೇಕೆ ಪಾನಪಾತ್ರವು ನನ್ನ ತುಟಿಗಳಿಗೆ ಬಾರದೆ, ನನ್ನ ದಾಹವನ್ನು ತಣಿಸದೆ ಹೋಯಿತು? ಇನ್ನು ನನಗೆ ಈ ಬಾಳ್ವೆಯ ಪಾನ ಬೇಡ. ಯಾವೆದೆಯಿಂದ ನಾನವನನ್ನು ಪ್ರೀತಿಸಿದೆನೋ ಅಂತೆಯೇ ಅವನೂ ನನ್ನನ್ನು ಪ್ರೀತಿಸುವಂತೆ ಬದುಕು ನಡುವೆ ಬಾರದಿದ್ದರೆ, ಆತನ ಪ್ರೀತಿ ನನ್ನಲ್ಲಿ ನಿಲ್ಲುತಿದ್ದಿತು, ಆದರೆ ಆತನು . . . ಆ ತನ್ನ ಪ್ರೇಮದಿಂದ ಈಕೆಯಲ್ಲಿ ಎಷ್ಟೋ ಸುಖಿಯಾದನು. ಆತನಂತು ಈಕೆಯಲ್ಲಿ ಸುಖಿಯಾದುದನ್ನು ಕಂಡು ನಾನು ಸೈರಿಸಿಕೊಂಡೆನಾದರೂ, ಅದು ನನ್ನಲ್ಲಿ ಅಲ್ಲವೆಂದು ನನ್ನ ಸ್ವಾರ್ಥಹೃದಯವು ಬಾರಿಬಾರಿಗೂ ನೋಯುತಿತ್ತು. ಈ ಸಂಪಗೆಯೇ ತನ್ನ ಜಗತ್ತೆಂದು ಭಾವಿಸಿದ ಆತನಿಗೆ ನನ್ನೀ ಬೇಗುದಿಯಾವ ಗೊತ್ತು? ನಾನು—ನಾನು ಸಂಪಗೆಯ ಬರೇ ನೆರಳಷ್ಟೆ. ಈಕೆ—ಈಕೆ ಸದಾ ಪ್ರಫುಲ್ಲೆ, ಸದಾಸುಂದರಿ; ನಾನು ಕಂದುಮೋರೆಯವಳು. ಆತನಿಗೆ ಬೆಳಕಿನಲ್ಲಿ ಇಷ್ಟ; ಆದರೆ ತನ್ನಕ್ಕರೆಯ ಬೆಳುದಾರೆಯ ಹೃದಯ ಮಾತ್ರ ಹಿಮಮಯ ಎಂಬುದನ್ನು ಅರಿಯದೆ ಹೋದನು. ದೇವಾ, ಆತನಿದನ್ನು ತನ್ನ ಕಡೇ ಗಳಿಗೆ ವರೆಗೆ ಅರಿತಿಲ್ಲವೆಂಬುದು ನಿನ್ನ ದಯೆಯೇ! ಆತನ ಕಡೇ ಗಳಿಗೆಯಲ್ಲಿ ಆತನ ಕೈಯನ್ನು ನನ್ನ ಕೈಯಲಾಂತು, ಆತನ ಜೋಲುತಲೆಯನ್ನು ನನ್ನ ಎದೆಯಲ್ಲಿ ಮಡಗಲಿಕ್ಕೆ

ನನಗೆ ಒದಗಿದ್ದರೆ, ಅದಕ್ಕಾಗಿ ನಾನು ಏನನ್ನು ತಾನೆ ಕೊಡುತಿದ್ದಿಲ್ಲ? ಆತನ ಮೇಲಣ ಪ್ರೇಮದಿಂದ ನಾನು ಉರಿಯುತ್ತಿದ್ದೆ, ಆದರೆ ಆತನ ಕಡೆಗಾಲದಲ್ಲಿ ಆತನಿಗೆ ಶಾಂತಿಯ ಅಂಜನವನ್ನು ತೊಡೆಯಲಿಕ್ಕೆ ನನಗೆ ದೊರಕಿದ್ದರೆ—ನನಗೆ ಬೇರೇನೂ ಬೇಡ—ಆ ಅಸ್ತಮಯದ ದಿನಗಳಲ್ಲಿ ಆತನನ್ನು ಮಾತೃಸ್ನೇಹದಿಂದ ಆರಯಿಸಲಾದರೂ ನನಗೆ ದೊರೆತಿದ್ದರೆ, ನನಗೆಷ್ಟು ಸಮಾಧಾನವಾಗುತಿದ್ದಿತು! ಆದರೂ ನನ್ನೆದೆ ಆತನೆದೆಯ ಎಣೆವಕ್ಕಿಯಾಗಿರಲಿಲ್ಲವೆ? ಆ ಹಕ್ಕಿ ಅರಿತಿಲ್ಲವೆಂದರೆ ಈ ಹಕ್ಕಿ ಮರೆವುದುಂಟೆ? . . . . ಆತನಾದರೋ ನಾನಲ್ಲದ ಈಕೆ ತನಗೆ ಹೆತ್ತ ಈ ಮಗು ತನ್ನದೆಂದು ತಿಳಿವ ಮುಂಚೆಯೋ . . . . . ಈ ತುಂಬಿ ಆತನ ಮಗು—ಅಕಟಾ, ಈ ಮಗುವೊಂದಿಗಾದರೂ ಈಕೆಯ ಹೃದಯದಲ್ಲಿ ಸ್ನೇಹದ ಹಾಲು ಒಸರಬೇಕಿತ್ತು, ಈಕೆಯ ಮನಸ್ಸಿನಲ್ಲಿ ಬುದ್ಧಿಯ ಬೆಳಕು ಮೂಡಬೇಕಿತ್ತು . . . . ಇದು ಆತನ ಮಗು—ತಂದೆಯಿಲ್ಲದ ತಬ್ಬಲಿ ಈ ತುಂಬಿ . . . ಆದರೆ ತಾಯಿತನವೇನೆಂಬುದನ್ನು ಈಕ ಅರಿಯದೆ ಹೋದಳು. ಒಣಮನಸ್ಸಿನ ಹೆಂಡತಿ ಅಷ್ಟೇ ಒಣಗೆದೆಯ ತಾಯಿಯಾಗುವಳು. ಪ್ರೇಮವಿಲ್ಲದ ಪತ್ನಿ ಈಕೆ ಮಮತೆ ಇಲ್ಲದ ತಾಯಿಯಾದಳು. ಬೆಸಲ ಬೇನೆಯಿಂದ ಈಕೆ ಏನೂ ಮನೋಲಾಭ ಹೊಂದಿಲ್ಲ. ಆತನ ಮರಣ ಶಯ್ಯೆಯ ಬಳಿಯಿಂದ ಈಕೆ ಯಾವ ಅನಾಯಾಸದಿಂದ ಎದ್ದಳೋ, ಅದೇ ಅನಾಯಾಸದಿಂದ ಬೆಸಲ ಕೋಣೆಯಿಂದಲೂ ಹೊರ ಬಂದಳು. ಈ ತುಂಬಿಯನ್ನು ಜನನಕ್ಕೆ ತರುವ ಹೆರಿಗೆಯ ವೇದನೆಯನ್ನು ಹೊತ್ತವಳು ನಾನೇ. ಈಕೆಯ ಗಂಡನ ಮರಣದ ಭಾರವನ್ನಾದರೂ ಹೀಗೆಯೇ ಆ ಮುಂಚೆ ಹೊತ್ತವಳು ನಾನೇ. (ಮಗು ಎಚ್ಚತ್ತು ಹಾಸಿಗೆಯಲ್ಲಿ ಒದ್ದಾಡುತ್ತಿದೆ.)

**ತುಂಬಿ**—ಅಮ್ಮಾ!

**ಮಲ್ಲಿಗೆ**—ಮಗೂ, ಇದೊ ನಾನಿಲ್ಲಿ. ಅಕಟಾ, ತುಂಬಿ ನನ್ನನ್ನು ಅರಿಯ. ನಾನು ಆತನ ತಾಯಲ್ಲ. ಆದರೆ ಆಕೆ ಹೆತ್ತುದು ತುಂಬಿಯ ಒಡಲನ್ನೇ.

**ತುಂಬಿ**—ತಾಯಿಾ—ಬಾ—ಯಾ—ರಿ—

**ಮಲ್ಲಿಗೆ**—ಆಕೆ . . . . ಆಕೆ ಇಲ್ಲಿಲ್ಲ. ಕಂದಾ, ಇದನ್ನು ಕುಡಿ. ನೀನು ಆತನ ಮಗು . . . . ಮತ್ತು ನನ್ನ . . . ನಿನ್ನ ಚೇತನದ ತಂದೆ ಯಾವನೋ ಆತನಲ್ಲಿ ನನಗಿದ್ದ ಅತ್ಯಂತ ಪ್ರೇಮವೇ ನಿನ್ನೀ ಕೋಮಲ ಚೇತನದಲ್ಲಿ ಮೂಡಿದೆ. ಅದಕ್ಕೆ ನಾನೇ ತಾಯಾಗ ಲಿಲ್ಲವೆ? ಅದನ್ನು ನನ್ನ ಹೃದಯದ ಮಮತೆಯಿಂದ ಬೆಳಸಿ, ಅದಕ್ಕೆ ನನ್ನ ಕರುಣೆಯ ಹಾಲನ್ನು ಊಡಲಿಲ್ಲವೆ? ತುಂಬಿಗೆ—ನಮ್ಮ ಮಗು ವಿಗೆ—ಮರಳಿ ನಿದ್ದೆ ಹತ್ತಿದೆ. ತುಂಬಿಯ ಕಣ್ಣುಗಳು ಈತನ ತಾಯಿ ಯವು; ಆದರೆ ಈತನಿಗೆ ನಿದ್ದೆ ಹತ್ತಿದಾಗ ಈತನಲ್ಲಿ ಆಕೆಗೇನೂ ಪಾಲಿಲ್ಲ—ಆಗ್ಗೆ ಈತನು ತೀರ ತನ್ನ ತಂದೆಯೇ, ತೀರ ನಾನೇ. ತೀರ ನಾನು—ತೀರಾ ನಾನು; ತುಂಬಿ ತುಂಬಾ ನಾನು; ನನ್ನ ಮಗು—ನನ್ನದೇ ಮಗುವಿದು! ಈಗ ನಿದ್ದೆ ಬಂದಿದೆ . . . . ಆದರೂ . . . . ಹೀಗೇಕೆ ಸುಮ್ಮನೆ—ನನಗಂಜಿಕೆ . . . . ದೇವಾ, ನಾನು, ಈತನ ತಾಯಾಗಿರುವ ನಾನು, ಒಂಟಿ . . ಈ ನಿರ್ಜನ ಸ್ಥಳದಲ್ಲಿ . . . ನರೆಯಲ್ಲಿ . . . . . ಸುಳಿವಿಲ್ಲದಲ್ಲಿ . . . . . ಬೇರೆ ಯಾರೂ ಇಲ್ಲ . . . . ಏನು ಮಾಡಲಿ? ಆಕೆ ಹೋಗಿರದಿದ್ದರೆ . . . . ಆದರೆ ನಾನೊಬ್ಬಳು . . . . ಏನು ಮಾಡಲಿ? ಹೇಗೂ ಆತನನ್ನು ಬಿಟ್ಟು ಹೋಗಲಾರೆ, ಇಲ್ಲಿ ಉಳಕೊಳ್ಳಲೂ . . . ಒಬ್ಬನೇ ಒಬ್ಬ ನಾದರೂ ಇಲ್ಲಿ ಇದ್ದರೆ . . . . ಆದರೆ ಯಾರನ್ನೆಲ್ಲಿ ಹುಡುಕಲಿ? ಯಾರನ್ನು ಕರೆಯಲಿ? ತುಂಬಿಗಿನ್ನು ಇಲ್ಲಿ ಯಾರಿಂದಲಾದರೂ ನೆರವಾ ದೀತೆಂದಾದರೆ . . . . ಮರಳಿ ಮೈ ಕದಲುತ್ತಿದೆ. ಇಲ್ಲ, ಇಲ್ಲಿಂದ ಎಷ್ಟು ಮಾತ್ರಕ್ಕೂ ಕದಲಲೊಲ್ಲೆ, ಈತನನ್ನು ಬಿಟ್ಟು ಒಂದೇ ಒಂದು ಹೆಜ್ಜೆಯಾದರೂ ಎತ್ತೆ. ಮಗೂ, ನನ್ನ ಮಗೂ, ಅಂಜದಿರು. ನಾನು ನಿನ್ನನ್ನು ಎಂದಿಗೂ ತೊರೆದು ಹೋಗಲೊಲ್ಲೆ. ಈ ಕಡೆಯ ಗಳಿಗೆ ಯಲ್ಲಿ ನಿನ್ನ ನೆತ್ತಿಯನ್ನು ಒರಸಲಿಕ್ಕೆ ತಾಯ ಕೆಯ್ಯೂ, ನಿನ್ನ ತಲೆ

ಯನ್ನು ಇರಿಸಲಿಕ್ಕೆ ತಾಯ ಹೃದಯವೂ ನಿನಗಿಲ್ಲವೆಂದು ಎಂದಿಗೂ ಆಗದು.

**ತುಂಬಿ**—ಅವ್ವಾ—ಬಾ—ಯಾ—

**ಮಲ್ಲಿಗೆ**—ಇದೋ, ಕಂದಾ ಇದನ್ನು ಕುಡಿ

**ತುಂಬಿ**—ಅ—ಮ್ಮಾ—(ಮಗು ತೀರಿತು.)

**ಮಲ್ಲಿಗೆ**—ಬಾಯಾರಿಕೆ ಇನ್ನೆಂದಿಗೂ ನಿನಗಾಗದು; ಇನ್ನೆಂದಿಗೂ ನಿನ್ನ ಗಂಟಲಾರದು. ನಿನ್ನೀ ತುಟಿಗಳು ಬಾಯಾರಿಕೆ ಎಂಬ ಶಬ್ದವನ್ನು ಇನ್ನೆಂದಿಗೂ ಉಸುರವು . . . . ನಾನು ಜೀವನದಿಂದ ಎಷ್ಟನ್ನೋ ಬೇಡಿದೆ . . . ಆದರೆ ನನಗೆ ದಕ್ಕಿದುದಿಷ್ಟೆ—ನಿನ್ನ ಕಡೆಯ ದೃಷ್ಟಿಯನ್ನು ಈ ಕೈಗಳಿಂದ ಮುಚ್ಚುವುದೇ. ತುಂಬೀ—ಮಗು—ನನ್ನ ಮಗುವೇ! ಇನ್ನಾದರೂ ನೀನು ನಮ್ಮಿಬ್ಬರವನೇ-ತೀರ ನಮ್ಮಿಬ್ಬರವನೇ! ತೀರ ಆತನವನು-ತೀರಾ ನನ್ನವನೇ!

ತೀರಿಹೋದ ಮಗುವನ್ನೇ ನಿಟ್ಟಿಸಿ ಮಲ್ಲಿಗೆ ಅದರ ಮಗ್ಗುಲಲ್ಲಿ ಕುಳಿತಿರುವಳು. ಹೊತ್ತು ಮೆಲ್ಲನೆ ಇಳಿಯುತ್ತಿದೆ. ಸಂಜೆಗೆ ಕೊಂಚ ಮುಂಚೆ ಕೋಣೆಯ ಕದ ತೆರೆದು ಸಂಪಗೆ ಒಳಬರುವಳು.

**ಸಂಪಗೆ**—ಇನ್ನಾದರೂ ನಾನು ಅಕ್ಕರೆಯ ತಾಯಲ್ಲವೆ? ಜಾತ್ರೆ ಇನ್ನೂ ಅರೆವಾಸಿ ಆಗಿಲ್ಲ, ನಾನು ಅಲ್ಲಿಂದ ಹೊರಟೆ. ಏನೋ ಯೋಚನೆಗಳು ಮನಸ್ಸಿನಲ್ಲಿ ಕವಿಯತೊಡಗಿದುವು—ಇನ್ನಲ್ಲಿ ನಿಲ್ಲಲಾಗಲಿಲ್ಲ. ನಿನ್ನ ಮಾತುಗಳು ನನ್ನ ಕಿವಿಯಲ್ಲಿ ಮೊರೆಯುತ್ತಾ ಜಾತ್ರೆಯ ವಿನೋದವೆಲ್ಲವೂ ಸಪ್ಪಗಾಯಿತು. ಹೀಗೆ ಬೇಗನೆ ಬಂದುಬಿಟ್ಟೆ. ಮನಸ್ಸಿಗಂತು ಕಳವಳವಾದರೂ, ತುಂಬಿಯನ್ನೇನು ಮರೆತುಬಿಟ್ಟೆನೆ? ನನಗೆ ಸಾಕಷ್ಟು ಎಚ್ಚರವಿಲ್ಲವೆಂಬುದೇನೋ ನಿಜ; ಆದರೂ ನೋಡು, ಮಲ್ಲಿ, ನಾನು ಯಾವೆಲ್ಲ ಆಟಿಕೆಗಳನ್ನು ಈತನ ಬಗ್ಗೆ ತಂದಿರುವೆ, ನೋಡು! ನೋಡು, ಈ ತಾಳಹಾಕುವ ಗೊಂಬೆ . . . . ತುಂಬಿಗೆ ನಿದ್ದೆ ಹತ್ತಿದೆಯೆ? ಈತನೇನಿಷ್ಟು ನೆಮ್ಮದಿಯಾಗಿ ಮಲಗಿರುವನು?

**ಮಲ್ಲಿಗೆ**—ಅಹುದು. ತುಂಬಾ ನೆಮ್ಮದಿ.

# ಅಹಿಂತಕ

[ಕೌಂಟ್ ಲೀಯೋ ಟಾಲ್ಸಟಾಯ್ ಇವರು ಬರೆದ **ಇಪ್ಪತ್ತುಮೂರು ಕಥೆಗಳಲ್ಲಿ** (Twenty-three Tales) "ಮನುಷ್ಯನ ಬಾಳ್ವೆಯು ಏತರಿಂದ?" (What Men Live By) ಎಂಬುದೊಂದು ಕಥೆಯಿರುವುದು. ಈ ಕಥೆಯ ದೃಶ್ಯರೂಪಕವೊಂದೂ ಇಂಗ್ಲಿಷಿನಲ್ಲಿ ಇದೆ. ಇವೆರಡರ ಆಧಾರದಿಂದ ಈ ಚಿಕ್ಕ ದೃಶ್ಯವು ಬರೆಯಲ್ಪಟ್ಟಿದೆ.]

## ಪಾತ್ರವರ್ಗ

**ಅಹಿಂತಕ** . . . . . . . ಪದಭ್ರಷ್ಟ ಯಮಕಿಂಕರ

**ತ್ಯಾಂಪಣ್ಣ** . . . . . . . ಸಮಗಾರ

**ನಾಗಮ್ಮ** . . . . . . . . ಅವನ ಹೆಂಡತಿ

**ಭಾಗು** . . . ಅವರ ಆರೇಳು ವರ್ಷದ ಮಗಳು

**ದೊರೆ, ಸೇವಕ, ಸಾಕುತಾಯಿ, ಇಬ್ಬರು ಮಕ್ಕಳು.**

# ಅಂಕ ೧

## ದೃಶ್ಯ ೧

[ಸಮಗಾರ ತ್ಯಾಂಪಣ್ಣನ ಗುಡಿಸಲಿನ ಒಳ ಭಾಗ. ನಟರಂಗದ ಹಿಂದುಗಡೆ ಕಾಣಿಸುವ ಗೋಡೆಯ ಮಧ್ಯದಲ್ಲಿ ಹೊರಕ್ಕೆ ಹೋಗಲು ಬಾಗಿಲು ಇದೆ. ನಟರಂಗದ ಬಲಗಡೆ—ಒಲೆ, ಮಣ್ಣಿನ ಪಾತ್ರೆಗಳು ಮೊದಲಾದುವು ಇವೆ. ಎಡಗಡೆ—ಇನ್ನೊಂದು ಚಿಕ್ಕ ಕೋಣೆಗೆ ಹೋಗುವ ತಟ್ಟಿಯ ಬಾಗಿಲೊಂದಿದೆ. ಅದರ ಎದುರು ಒಂದು ಹರಕು ಚಾಪೆ ಅದರ ಮೇಲೆ ತ್ಯಾಂಪಣ್ಣನ ಸಮಗಾರಿಕೆಯ ಸಾಮಾನುಗಳಿವೆ. ಕೋಣೆಯ ಒಂದು ಭಾಗದಲ್ಲಿ ತೂಗ ಹಾಕಿದ ಹಗ್ಗದ ಮೇಲೆ ಹರಕು ವಸ್ತ್ರಗಳು ನೇತಾಡುತ್ತವೆ. ಎದುರಿನ ಗೋಡೆಯಲ್ಲೊಂದು ಚಿಮಣಿ ದೀಪ ಮಿನುಗುತ್ತಿದೆ.

ತೆರೆ ಮೇಲೇಳುವಾಗ ನಟರಂಗದಲ್ಲಿ ಯಾರೂ ಕಾಣಿಸುವುದಿಲ್ಲ. ಹೊರಗೆ ಮಿಂಚು, ಗುಡುಗು, ಮಳೆಯ ಆರ್ಭಟ.

ಮಣ್ಣಿನ ಕೊಡದಲ್ಲಿ ನೀರು ತುಂಬಿಸಿಕೊಂಡು ನಾಗಮ್ಮ ಹೊರಗಿನಿಂದ ಬರುತ್ತಾಳೆ. ಎಡದಿಕ್ಕಿಗೆ ಹೋಗಿ ಕೋಣೆಯೊಳಗೆ ಇಣಿಕಿ ನೋಡುತ್ತಾಳೆ. ಅಲ್ಲಿ ಯಾರೂ ಇಲ್ಲದಿರುವುದನ್ನು ಕಂಡು, ಕೊಡವನ್ನು ಜಾಗ್ರತೆಯಿಂದ ನೆಲದ ಮೇಲಿಟ್ಟು, ಹೊರಗಿನ ಬಾಗಿಲಿಗೆ ಹೋಗಿ ಕೂಗುತ್ತಾಳೆ—]

**ನಾಗಮ್ಮ**—ಭಾಗೂ! . . . . ಭಾಗೂ!

(ಹೊರಗಿನಿಂದ)—ಓ೦೦ . . . . ಬಂದೆ ಅಮ್ಮಾ ಬಂದೆ!

**ನಾಗಮ್ಮ**—ಬೇಗ ಬಾ ಅಮ್ಮ! ಹೊತ್ತಾಯಿತು. ಒಲೆಗೆ ಬೆಂಕಿ ಹೊತ್ತಿಸಬೇಕು.

(ಹೊರಗಿನಿಂದ)—ಬಂದೆ ಅಮ್ಮಾ, ಬಂದೆ!

**ನಾಗಮ್ಮ**—ಮಳೆ ಬರುತ್ತದೆ. ಕಟ್ಟಿಗೆ ಮಳೆಯಲ್ಲಿ ನೆನೆದೀತು. ಜಾಗ್ರತೆ!

(ಒಲೆಯ ಹತ್ತಿರ ಹೋಗಿ ಕೆಲಸ ಮಾಡುವಳು ಬಾಗಿಲಿಂದ ಕಟ್ಟಿಗೆಯ ದೊಡ್ಡ ಹೊರೆಯೊಂದು ಮೆಲ್ಲಗೆ ಬರುವುದು. ಅದರ ಕೆಳಗೆ ಆರೇಳು ವರ್ಷದ ಚಿಕ್ಕ ಬಾಲಿಕೆಯೊಬ್ಬಳು ಇರುವಳೆಂದು ಪ್ರೇಕ್ಷಕರಿಗೆ ಅನಂತರ ಭಾಸವಾಗುವುದು. ಭಾಗು 'ಉಸ್ಸಪ್ಪಾ' ಎಂದು ಹೇಳಿ ಹೊರೆಯನ್ನು ಒಲೆಯ ಪತ್ತಿರ ಹಾಕುವಳು.)

**ನಾಗಮ್ಮ**— ನೋಡು ಮಗು, ಬೇಗ ಒಲೆಗೆ ಬೆಂಕಿ ಹೊತ್ತಿಸು. ಅವರು ಪೇಟೆಯಿಂದ ಬರುವ ಹೊತ್ತಾಯಿತು.

(ಭಾಗು ನೆಲದ ಮೇಲೆ ಕೂತುಕೊಂಡು, ಒಂದೊಂದೇ ಗೆಲ್ಲನ್ನು ತೆಗೆದು 'ಉಸ್ಸಪ್ಪಾ' 'ಅಮ್ಮಯ್ಯಾ' ಎಂದು ಹೇಳುತ್ತಾ ತುಂಡುಮಾಡಿ ಬೆಂಕಿ ಉರಿಸ ತೊಡಗುತ್ತಾಳೆ. ನಾಗಮ್ಮ ತನ್ನ ಗಂಡನ ಒಂದು ಹರಕು ಅಂಗಿಯನ್ನು ತೆಗೆದುಕೊಂಡು ಹೊಲಿಯಲಿಕ್ಕೆ ತೊಡಗುತ್ತಾಳೆ.)

**ಭಾಗು**— ಉಸ್ಸಪ್ಪಾ! . . . ಅಮ್ಮಾ!

**ನಾಗಮ್ಮ**— ಏನು?

**ಭಾಗು**— ಅಪ್ಪ ಪೇಟೆಗೆ ಹೋದದ್ಯಾಕಮ್ಮ?

**ನಾಗಮ್ಮ**— ನಿನಗೂ ನನಗೂ ವಸ್ತ್ರ ತರಲಿಕ್ಕೆ. ಮಳೆಗಾಲದಲ್ಲಿ ಯಾದರೂ ಸ್ವಲ್ಪ ಬೆಚ್ಚಗಿರಬೇಕಲ್ಲವೇ? ನೋಡು, ಇದ್ದ ಸೀರೆಯೊಂದು ಹರಿದು ಚೂರು ಚೂರಾಗಿದೆ. ನಿನಗೂ ಅಂಗಿಯಿಲ್ಲ. ಹೊದ್ದು ಕೊಳ್ಳಲು ಅವರಿಗೂ ಬಟ್ಟೆಯಿಲ್ಲ.

**ಭಾಗು**— ಉಸ್ಸಪ್ಪಾ! . . . . ಅಮ್ಮಾ, ಹಾಗಾದರೆ ಅಪ್ಪನು ಯಾವಾಗಲೂ ಪೇಟೆಗೆ ಹೋಗಿ ವಸ್ತ್ರ ತರುವುದಿಲ್ಲವೇಕೆ? ಎಷ್ಟೋ ದಿವಸಗಳಿಂದ ಅವನು ಪೇಟೆಗೆ ಹೋದದ್ದು, ಈಹೊತ್ತೇ.

**ನಾಗಮ್ಮ**— ಹುಚ್ಚೀ! ವಸ್ತ್ರ ತರಬೇಕಾದರೆ ಹಣ ಬೇಡವೇ? ನಮ್ಮಂಥ ಬಡವರ ಹತ್ತಿರ ಹಣವೆಲ್ಲಿ? ಅವರು ಇಡೀ ದಿವಸ ದುಡಿದು ದೆಲ್ಲ ಹೊಟ್ಟೆಗಾಯಿತು. ಬಡವರ ಕೆಲಸಕ್ಕೆ ಕೂಲಿ ಕಡಮೆ. ಅವರ ಅನ್ನಕ್ಕೆ ಮಾತ್ರ ಬೆಲೆ ಹೆಚ್ಚು. ಹಣವಿಲ್ಲದೆ ಪೇಟೆಗೆ ಹೋಗಿ ಏನು ಪ್ರಯೋಜನ? ನಾಯಿ ಸಂತೆಗೆ ಹೋದಂತೆ ಅಲ್ಲವೇ?

**ಭಾಗು**— ಹಾಗಾದರೆ ಈ ಹೊತ್ತು ಅಪ್ಪನ ಹತ್ತಿರ ಹಣವುಂಟೇ?

**ನಾಗಮ್ಮ—** ಹೌದು, ಇಡೀ ಒಂದು ವರ್ಷ ಕೆಲಸ ಮಾಡಿ ಕಾಸಿಗೆ ಕಾಸು ಕೂಡಿಸಿ, ಸ್ವಲ್ಪ ಹಣ ಬಟ್ಟೆಗೋಸ್ಕರ ಉಳಿಸಿಕೊಂಡಿರುವರು. ಅದು ಕೂಡ ಅವರು ಹೋಗುವಾಗ ಕೈಯಲ್ಲಿದ್ದಿಲ್ಲ. ದಾರಿಯಲ್ಲಿ ವಸೂಲು ಮಾಡಿಕೊಂಡು ಹೋಗಬೇಕು.

**ಭಾಗು**— ಯಾರಿಂದ ವಸೂಲು ಮಾಡುವುದಮ್ಮಾ?

**ನಾಗಮ್ಮ**— ಹುಚ್ಚೀ! ಅವರು ಊರವರಿಗೆ ಜೋಡು, ವಾವಾಸು, ಬೂಟೀಸುಗಳನ್ನು ಮಾಡಿ ಕೊಡುತ್ತಾರಲ್ಲವೇ? ಅವರಲ್ಲನೇಕರು ಇನ್ನೂ ಅವುಗಳ ಮಜೂರಿ ಕೊಟ್ಟಿಲ್ಲ. ಅವರಿಂದ. (ಅರ್ಧ ತನ್ನಷ್ಟಕ್ಕೆ) ಅದು ಕೂಡ ಅವರು ಕೊಟ್ಟರೆ! ಇವರಾದರೋ ಶುದ್ಧ ಬೆಪ್ಪರು. ಮಾಡಿದ ಕೆಲಸದ ಮಜೂರಿ ತೆಗೆದುಕೊಳ್ಳಲು ತಿಳಿಯುವುದಿಲ್ಲ. ಬೆಲ್ಲದಂಥ ಮಾತುಗಳಿಗೆ ಬೇಗ ಮೋಸಹೋಗುತ್ತಾರೆ. ಕೊಡುವವರೆಲ್ಲ ಕೊಟ್ಟರೆ ಸುಮಾರು ಏಳೆಂಟು ರೂಪಾಯಿಯಾದರೂ ಆಗಬೇಕು. ಎಂಟು ರೂಪಾಯಿ ಸ್ವಲ್ಪವೇ? ಇನ್ನೆರಡು ವರ್ಷದವರೆಗೆ ನಮ್ಮ ಬಟ್ಟೆಗೆ ಸಾಕು.

**ಭಾಗು**— (ತೋರವಾದ ಕಟ್ಟಿಗೆತುಂಡಿನೊಡನೆ ಚಡಪಡಿಸುತ್ತಾ) ಅಮ್ಮಯ್ಯಾ! ತುಂಡಾಗುವುದೇ ಇಲ್ಲ. ಎಷ್ಟು ಗಟ್ಟಿ ಇದೆ!

**ನಾಗಮ್ಮ**— ನಾಕು, ಭಾಗು! ಬೆಂಕಿ ಹಿಡಿಯಿತಲ್ಲವೇ?

**ಭಾಗು—** ಹೌದಮ್ಮಾ.

**ನಾಗಮ್ಮ—** ಹಾಗಾದರೆ ಸಾಕುಮಾಡು . . . ಭಾಗು, ಬೆಳಿಗ್ಗೆ ಮಾಡಿದ ಅನ್ನ ಎಷ್ಟು ಉಳಿದಿದೆ ನೋಡು. ಅವರು ಈಗಲೇ ಬರುವರು. ಹಸಿವೆಯಿಂದ ಬಳಲುತ್ತಾ ಒಂಭತ್ತು ಮೈಲು ದೂರದಿಂದ ಬರಬೇಕು. ಬಂದ ಕೂಡಲೇ ಅವರಿಗಿಷ್ಟು ಅನ್ನ ಹಾಕುವುದು ಬೇಡವೇ?

(ಭಾಗು ಅನ್ನದ ಪಾತ್ರೆಯಿದ್ದಲ್ಲಿಗೆ ಹೋಗಿ, ಅದರ ಮುಚ್ಚಳ ತೆಗೆದು, ಪಾತ್ರೆಯನ್ನು ನಾಗಮ್ಮಗೆ ತೋರಿಸುತ್ತಾಳೆ.)

**ನಾಗಮ್ಮ**—ಅಷ್ಟೆಯೋ, ಹೂಂ! ಇರಲಿ. ಅಷ್ಟು ಸಾಕು. ಅವರೇನಾದರೂ ತೆಗೆದುಕೊಂಡಿರಬಹುದು. ಹೂಂ ಅಲ್ಲೇ ಇಡು. (ಭಾಗು ಹಾಗೆಯೇ ಮಾಡುವಳು.) ಅಲ್ಲಿ ಕಸಗುಡಿಸಿ ಬಟ್ಟಲನ್ನೂ ಇಡು, ಮಗು. (ಭಾಗು, ಬಹಳ ಚಟುವಟಿಕೆಯಿಂದ ಹಾಗೆಯೇ ಮಾಡುವಳು.) . . . . . ಅವರು ಪೇಟೆಗೆಂದು ಹೊರಟಾಗಲೇ ಬಹಳ ಹೊತ್ತಾಗಿತ್ತು. ನಡೆಯಲಿಕ್ಕೂ ಸುಮಾರು ಉಂಟು. ಆದರೂ ಅವರು ಇಷ್ಟರೊಳಗೆ ಬರಬೇಕಿತ್ತು. ದಾರಿಯಲ್ಲಿರುವ ಸೇಂದಿ ಅಂಗಡಿಯೊಳಗೆ ಮಾತ್ರ, ದೇವರ ದಯೆಯಿಂದ, ಕಾಲಿಡದಿದ್ದರೆ ಒಳ್ಳೇದಿತ್ತು.

**ಭಾಗು**—(ತಂದೆಗೋಸ್ಕರ ಊಟಕ್ಕೆ ಬಟ್ಟಲನ್ನಿಟ್ಟು, ಹೊರಗಿನ ಬಾಗಿಲಿಗೆ ಹೋಗಿ ನೋಡುತ್ತ) ಅಮ್ಮ, ಅಪ್ಪ ಬಂದ! ಅಪ್ಪ ಬಂದ, ಅಗೋ! (ಸಂತೋಷದಿಂದ ಒಮ್ಮೆ ತಾಯಿಯ ಬಳಿಗೆ, ಒಮ್ಮೆ ಬಾಗಿಲ ಕಡೆಗೆ ಹೋಗುವಳು) ಆದರೆ, ಅಮ್ಮಾ ಅಪ್ಪ ಒಬ್ಬನೇ ಬರಲಿಲ್ಲ!

**ನಾಗಮ್ಮ**—(ಥಟ್ಟನೇ ಎದ್ದು) ಏನು? ಏನು?

**ಭಾಗು**—ಬೇರೆ ಯಾರೋ ಇರುವರು.

**ನಾಗಮ್ಮ**—ಯಾರು? ಯಾರೆಂದು ನೋಡು.

**ಭಾಗು**—ಯಾರೆಂದು ತಿಳಿಯುವುದಿಲ್ಲ ಮೈಮೇಲೆ ವಸ್ತ್ರವೇನೂ ಹೆಚ್ಚಿಲ್ಲ. ತಿರುಪೆಯುವನಂತೆ ಕಾಣುವನು.

**ನಾಗಮ್ಮ**— ಏನು, ತಿರುಪೆಯುವನೇ?

**ಭಾಗು**—ಅಲ್ಲ, ಅಲ್ಲ! ಭಿಕ್ಷುಕನಂತೆ ಕಾಣುವುದಿಲ್ಲ. ಯಾರೋ ಬಡವನಾಗಿರಬೇಕು.

**ನಾಗಮ್ಮ**—ಅವರ ಕೈಯಲ್ಲಿ ಹೊಸತಾಗಿ ಕೊಂಡ ಬಟ್ಟೆ ಇದೆಯೋ ನೋಡು.

**ಭಾಗು**—ಇಲ್ಲ ಅಮ್ಮಾ, ಇಲ್ಲವೆಂದೇ ಕಾಣುವುದು.

**ನಾಗಮ್ಮ**—ಏನು? ಬಟ್ಟೆ ತರಲಿಕ್ಕೆ ಹೋದವರು ಅದನ್ನು ತೆಗೆದುಕೊಂಡು ಬರಲಿಲ್ಲವೇ? ಸರಿ ಆಯಿತು. (ಬಾಗಿಲಿಗೆ ಹೋಗಿ, ನೋಡಿ)

ನಾನು ನೆನಸಿದಂತಾಯಿತು. ದಾರಿಯಲ್ಲಿದ್ದ ಸೇಂದಿ ಅಂಗಡಿ ಬಿಡಲಿಲ್ಲ ಸಿಕ್ಕಿದ ಹಣವನ್ನೆಲ್ಲ ಕುಡಿಕರೊಡಗೂಡಿ ವೆಚ್ಚ ಮಾಡಿರಬೇಕು, ಬಟ್ಟೆಗಲ್ಲ. (ಸಿಟ್ಟು ಮತ್ತು ದುಃಖದಿಂದ) ಇಡೀ ಒಂದು ವರ್ಷ ಸುರಿಸಿದ ಬೆವರು ಇಂದು ಸೇಂದಿಗಾಗಿ ಹೋಯಿತು. ಪ್ರಾರಬ್ಧ! (ಗಂಡನ ಮೇಲೇರುತ್ತಿದ್ದ ಸಿಟ್ಟನ್ನು ಮಗುವಿನ ಮೇಲೆ ಸುರಿಸಿ) ಹೋಗು ನೀನು, ಕೂಡಲೇ ಹೋಗಿ ನಿದ್ದೆ ಮಾಡು!

**ಭಾಗು**—ಸ್ವಲ್ಪ ತಾಳಮ್ಮ. ಅಪ್ಪನ ಕೂಡೆ ಒಮ್ಮೆ ಮಾತಾಡಿ ಹೋಗುವೆನು.

**ನಾಗಮ್ಮ**—ನಾನು ಹೇಳಿದ ಹಾಗೆ ಮಾಡುತ್ತಿಯೋ ಇಲ್ಲವೋ? ಅವರು ಕುಡಿದು ಬಂದುದನ್ನು ನಿನಗೆ ನೋಡಬೇಕೇ? ಬಾಗಿಲು ಹಾಕಿ ಮಲಗು.

**ಭಾಗು**—(ಅಳುವ ಧ್ವನಿಯಿಂದ) ಈ ಹೊತ್ತು ಇಡೀ ದಿನ ಅಪ್ಪನನ್ನು ನೋಡಿಲ್ಲವಮ್ಮಾ!

**ನಾಗಮ್ಮ**—ಹೇಳಿದ ಹಾಗೆ ಕೇಳುತ್ತಿಯೋ ಇಲ್ಲವೋ ಮಂಗ? ಏನು ಬೆನ್ನು ತುರಿಸುತ್ತದೋ?

**ಭಾಗು**—(ಉಕ್ಕಿ ಬರುವ ಅಳುವಿನಿಂದ) ಇಲ್ಲಮ್ಮಾ, ಹೋಗುತ್ತೇನೆ. (ಎಡದಿಕ್ಕಿನ ಕೋಣೆಗೆ ಹೋಗುವಳು.)

**ನಾಗಮ್ಮ**—(ಮೆಲ್ಲಗೆ ಕೊರಡಿಯ ಮಧ್ಯದಲ್ಲಿ ನಿಂತು) ಪ್ರಾರಬ್ಧ! ಹಗಲಿರುಳು ಕೆಲಸ ಮಾಡಿ, ಅರೆ ಉಪವಾಸದಿಂದ ಜೀವನ ಸಾಗಿಸಿ ಗಳಿಸಿದ ಅಲ್ಪ ಸ್ವಲ್ಪ ಕಾಸು ಕೊನೆಗೆ ಹೋಗುವುದು ಇದಕ್ಕೆ. ಅದರಲ್ಲೂ ಮನೆಗೆ ಬರುವಾಗ ಕುಡಿಕರನ್ನು ಕೂಡ ಕಟ್ಟಿಕೊಂಡು ಬರಬೇಕೇ?... ಬರಲಿ, ಬರಲಿ ನೋಡುತ್ತೇನೆ! (ಒಲೆಯ ಹತ್ತಿರ ಬಂದು, ಬಾಗಿಲ ಕಡೆಗೆ ನೋಡುತ್ತಾ ನಿಲ್ಲುವಳು. ಬಾಗಿಲು ಮೆಲ್ಲಗೆ ತೆರೆಯಲ್ಪಡುವುದು. ತ್ಯಾಂಪನು ಹಿಂದುಗಡೆ ನೋಡುತ್ತಾ ಕೊರಡಿಯೊಳಗೆ ಬರುವನು.)

**ತ್ಯಾಂಪ**—ಬಾ, ಗೆಳೆಯ ಬಾ .... ಒಳಗೆ ಬಾ!

(ಹದಿನೆಂಟು ವರ್ಷ ಪ್ರಾಯದ ಯುವಕನೊಬ್ಬನು ಮೆಲ್ಲಗೆ ಬರುವನು. ಬಹಳ ಸೊಗಸಾದ ಮೈಕಟ್ಟು. ಬಿಳೀ ಮೈ ಬಣ್ಣ. ತ್ಯಾಂಪನು ಹೊದಿಸಿದ್ದ ಹರಕು ಬಟ್ಟೆಗಳು ಮೈಮೇಲಿವೆ. ಬಂದವನೇ ಬಾಗಿಲ ಬಳಿಯಲ್ಲೇ ಮುಖ ಕೆಳಗೆ ಮಾಡಿ ನಿಲ್ಲುವನು. ನಾಗಮ್ಮ ಯಾವ ರೀತಿಯಿಂದ ತಮ್ಮನ್ನು ಉಪ ಚರಿಸಬಹುದೆಂದು ತ್ಯಾಂಪನಿಗೆ ಶಂಕೆ)

**ತ್ಯಾಂಪ**— ನಾಗೂ . . . . (ನಾಗಮ್ಮ ಸುಮ್ಮನಿರುವಳು) . . . . ಬಾ, ಗೆಳೆಯಾ, ಒಳಗೆ ಬಾ. ಇಲ್ಲಿ ಒಲೆಯ ಬಳಿ ಬೆಚ್ಚಗಿದೆ. ಸ್ವಲ್ಪ ವಿಶ್ರಮಿಸಿಕೊ. (ಒಂದು ಹರಕು ಚಾಪೆಯನ್ನು ಒಲೆಯ ಮುಂದೆ ಹಾಸಿ, ಅದರ ಮೇಲೆ ಯುವಕನನ್ನು ಕುಳ್ಳಿರಿಸಿ) ಹೊರಗೆ ಗಾಳಿಮಳೆಯಲ್ಲಿರುವುದಕ್ಕಿಂತ ಇಲ್ಲಿ ಎಷ್ಟೋ ವಾಸಿ . . . . ಇನ್ನು ಹೊಟ್ಟೆಯ ವಿಚಾರ. ಹಸಿವಾಗಿದೆ— ನಾಗೂ, ನಮಗೇನಾದರೂ ಅನ್ನ ಉಳಿದಿಲ್ಲವೇ?

**ನಾಗಮ್ಮ**— ಅನ್ನವೇ? ಅನ್ನ ಬೇಕಾದರೆ ನನಗೆ ಸೀರೆ ಮೊದಲು ಕೊಡಬೇಕು. ಸೀರೆಯನ್ನು ಕೊಂಡುಕೊಳ್ಳಲಿಕ್ಕೆ ಹೋದವರಲ್ಲವೇ ನೀವು?

**ತ್ಯಾಂಪ**— ಇರಲಿ, ನಾಗೂ, ಅದರ ಪ್ರಸ್ತಾಪ ಈಗ ಬೇಡ. ಅದರ ವಿಷಯ ಮತ್ತೆ ಹೇಳುತ್ತೇನೆ ಈಗ ಬಹಳ ಹಸಿವೆಯಾಗಿದೆ. ಸೀರೆಯನ್ನು ಇಂದು ಕೊಂಡುಕೊಳ್ಳಲು ಆಗಲಿಲ್ಲ.

**ನಾಗಮ್ಮ**— ಯಾಕೆ?

**ತ್ಯಾಂಪ**— ಅದನ್ನು ಆ ಮೇಲೆ ಹೇಳುವೆನಂತೆ. ನಮಗೆ ಮೊದಲು ಸ್ವಲ್ಪ ಅನ್ನ ಹಾಕು.

**ನಾಗಮ್ಮ**— ವಸ್ತ್ರ ತರಲು ಹೋದವರು, ಇಡೀ ದಿನ ತಿರುಗಿ, ಬರಿ ಕೈಯಲ್ಲಿ ಏಕ ಬಂದಿರೆಂದು ಮೊದಲು ಹೇಳಿ.

**ತ್ಯಾಂಪ**— ಈಗಲೇ ಹೇಳಬೇಕೆ? ಹೂಂ, ಆಗಲಿ . . . . ಪೇಟೆಗೆ ಹೋಗುವ ಮೊದಲು ನಮ್ಮ ದೊಮಣ್ಣನಲ್ಲಿಗೆ ಅವನಿಂದ ಬರಬೇಕಾದ ಹಣಕ್ಕಾಗಿ ಹೋದೆ. ಆದರೆ ಪಾಪದ ಪ್ರಾಣಿ. ಅವನಲ್ಲಿ ಎರಡು

ಕಾಸು ಕೂಡ ಇದ್ದಿಲ್ಲ. ಹೆಂಡತಿ ಮಕ್ಕಳು ಅರೆ ಉಪವಾಸದಲ್ಲಿದ್ದರು ಅಂಥವನ ಹತ್ತಿರ ಈಗಲೇ ಹಣ ಕೊಡೆಂದು ಹೇಗೆ ಬಲತ್ಕಾರ ಮಾಡುವುದು? ಹಾಗೆಯೇ ಹೋದೆ.

**ನಾಗಮ್ಮ**— ಪೇಟೆಯಲ್ಲಿಯೂ ಸಿಕ್ಕಲಿಲ್ಲವೇ?

**ತ್ಯಾಂಪ**— ಇಲ್ಲ. ಆ ಶಾಲೆ ಹುಡುಗನಿಂದ ನಾಲ್ಕು ರೂಪಾಯಿ ಬರಬೇಕಾಗಿತ್ತು ಅವನಲ್ಲಿಯೂ ಇದ್ದಿರಲಿಲ್ಲ. ಇನ್ನೆರಡು ದಿನಗಳಲ್ಲಿ ಬಾ ಎಂದನು. ಪೇಟೆಯಲ್ಲಿ ಬಟ್ಟೆಯನ್ನು ನನಗ ಕಡವಾಗಿ ಯಾದರೂ ಕೊಡುತ್ತಾರೋ ಎಂದು ನಾಲ್ಕೈದು ಕಡೆಗಳಲ್ಲಿ ನೋಡಿದೆ. ಆದರೆ ಬಡ ನಮಗಾರನ ಮೇಲೆ ಯಾರಿಗೆ ನಂಬಿಗೆ ಬರುತ್ತದೆ? ಹಾಗಾಗಿ ಬರಿ ಕೈಯಿಂದ ಬರಬೇಕಾಯಿತು . . . ಇರಲಿ, ನಾಗೂ, ನಮಗಿಷ್ಟು ಅನ್ನ ಹಾಕು.

**ನಾಗಮ್ಮ**— ಹಾಗಾದರೆ ನೀವು ಇಲ್ಲಿಂದ ಹೊರಡುವಾಗ ತೆಗೆದುಕೊಂಡ ಹಣವೆಲ್ಲಿ?

**ತ್ಯಾಂಪ**— ಇದೋ ಇಲ್ಲಿದೆ. (ಅವಳ ಕೈಯಲ್ಲಿ ಕೊಡುವನು.)

**ನಾಗಮ್ಮ**—(ಲೆಕ್ಕ ಮಾಡಿ) ಇದು ನೀವು ಕೊಂಡುಹೋದಷ್ಟಿಲ್ಲ.

**ತ್ಯಾಂಪ**— ಇಲ್ಲ, ಸ್ವಲ್ಪ ಖರ್ಚಾಯಿತು.

**ನಾಗಮ್ಮ**— ಯಾವುದಕ್ಕೆ?

**ತ್ಯಾಂಪ**— ಸ್ವಲ್ಪ ಸೇಂದಿಗೆ.

**ನಾಗಮ್ಮ**— ನಾನು ಎಣಿಸಿದಂತೆಯೇ . . . . ಈಗ ನಿಮಗೆ ಅನ್ನ ಹಾಕಬೇಕೇ?

**ತ್ಯಾಂಪ**— ಏನು ಮಾಡುವುದು? ಇಡೀ ದಿನ ಪೇಟೆಯಲ್ಲಿ ಸುತ್ತಿ ಸುತ್ತಿ ಆಯಾಸವಾಗಿತ್ತು. ಹೋದ ಕೆಲಸವೂ ಆಗಲಿಲ್ಲವೆಂದು ಮನಸ್ಸಿಗೆ ಬೇಸರವಿತ್ತು. ಗಾಳಿ ಮಳೆಯಲ್ಲಿ ನೆನೆನೆನೆದು ಜೀವವೇ ಬೇಡವೆಂಬ ಹಾಗಿತ್ತು. ದಾರಿಯಲ್ಲಿ ಸೇಂದಿ ಅಂಗಡಿಯೊಂದು ಸಿಕ್ಕಿತು.

ಸ್ವಲ್ಪ ಕುಡಿದೆ. ಹೆಚ್ಚಲ್ಲ, ನಾಗೂ. ಮನಸ್ಸಿಗೆ ನೆಮ್ಮದಿಯಾಗುವಷ್ಟು ಮಾತ್ರ.

**ನಾಗಮ್ಮ**—ತಿಳಿಯಿತು. ಎಷ್ಟು ಕುಡಿದಿದ್ದೀರಿ ಎಂದು ಹೇಳುವ ಅಗತ್ಯವಿಲ್ಲ. ಮಳೆಯಲ್ಲಿ ನೆನೆದುದರಿಂದ, ಏನೋ ಅಮಲು ಇಳಿದಿರ ಬೇಕು. ಆದರೆ ಒಂದು ಮಾತು ಹೇಳುತ್ತೇನೆ. ನಿಮ್ಮಂಥ ಕುಡಿಕರಿಗೆ ಇಲ್ಲಿ ಅನ್ನವಿಲ್ಲ. ಅಷ್ಟೇ.

**ತ್ಯಾಂಪ**—ನನಗೋ? ಹಾಗೇ ಮಾಡು ನಾಗೂ, ಬೇಸರವಿಲ್ಲ. ಆದರೆ ಈ ಬಡವನಿಗೆ . . . .

**ನಾಗಮ್ಮ**—ಸುಮ್ಮನಿರಿ. ಪೇಟೆಯಿಂದ ವಸ್ತ್ರ ತೆಗೆದುಕೊಂಡು ಬರುತ್ತೇನೆಂದು ಹೋದ ನೀವು, ದಾರಿಯಲ್ಲಿ ಸಿಕ್ಕಿದ ಕುಡಿಕರನ್ನೆಲ್ಲ ಗಂಟು ಹಾಕಿಕೊಂಡು ಮನೆಗೆ ಬಂದಿರುವಿರಿ, ಅಲ್ಲವೇ? ಚೆನ್ನಾಯಿತು, ಇರಲಿ. ನಿಮ್ಮ ಬುದ್ಧಿ ನಿಮಗೇ ಚಂದ.

**ತ್ಯಾಂಪ**—ನಾಗೂ, ಸುಮ್ಮನಿರೇ. ಸುಮ್ಮನೆ ನಿನ್ನ ನಾಲಗೆ ಯನ್ನು ಬೆಳೆಸಬೇಡ.

**ನಾಗಮ್ಮ**—ನಾನು ನಾಲಗೆ ಬೆಳೆಸುವವಳೇ? ನೀವು ಮಾತ್ರ ಒಳ್ಳೇ ಸಂಭಾವಿತರು. ಏನೂ ಆಗದ ರೀತಿಯಲ್ಲಿ ನಟಿಸುತ್ತಿದ್ದೀರಲ್ಲ. ತಪ್ಪೆಲ್ಲ ನನ್ನದು ಅಲ್ಲವೇ? ಆದರೂ ಹೇಳುತ್ತೇನ ಕೇಳಿ. ಮನೆಯಲ್ಲಿದ್ದ ಅಕ್ಕಿಯೆಲ್ಲ ಖರ್ಚಾಗಿದೆ. ಬೆಳಿಗ್ಗೆ ಮಾಡಿಟ್ಟ ಅನ್ನವೇನೋ ಸ್ವಲ್ಪವಿದೆ. ನಮ್ಮ ಭಾಗಿಗೂ ಕೂಡ ಉಪವಾಸ ಹಾಕಿ ಇಟ್ಟ ಅನ್ನ. ಅದನ್ನು ಕುಡಿ ಕರಿಗೆಲ್ಲ ಹಾಕಬೇಕೆಂದು ನಾನೇನು ಮನೆ ಕಟ್ಟಿಕೊಳ್ಳಲಿಲ್ಲ, ತಿಳಿಯಿತೇ?

**ತ್ಯಾಂಪ**—ನಾಗೂ, ಹೊತ್ತು ಮೀರಿತು. ಇನ್ನಾದರೂ ನಿನ್ನ ಮಾತನ್ನು ಮುಗಿಸೇ. ಈ ಬಡವನಿಗಾದರೂ ಇದ್ದ ಅನ್ನ ಹಾಕು.

**ನಾಗಮ್ಮ**—ಏನು? ನನ್ನ ಮಾತನ್ನು ಮುಗಿಸಬೇಕೇ? ನನ್ನ ಮನೆ ಯಲ್ಲಿ ನನಗೆ ಮಾತನಾಡಲಿಕ್ಕೆ ಕೂಡ ಅಧಿಕಾರವಿಲ್ಲವೇ? ಆಗಲಿ, ಮಾತನಾಡುವುದಿಲ್ಲ. ಇಡೀ ಒಂದು ವರ್ಷ ದುಡಿದು ದುಡಿದು ಗಳಿಸಿದ

ನಾಲ್ಕು ಕಾಸಿನ ಪ್ರಯೋಜನವೂ ನನಗೆ ಸಿಕ್ಕುವುದಿಲ್ಲವಾದರೆ ನನಗೆ ಈ ಮನೆ ಯಾಕೆ? ಈ ಹರಕು ಸೀರೆಯನ್ನು ಉಟ್ಟುಕೊಂಡೇ ಇನ್ನೊಂದು ವರ್ಷವನ್ನೂ ಕಳೆಯಬೇಕೇ? ಹೊಸ ಸೀರೆಗಾಗಿ ನಾನು ಇನ್ನೊಂದು ವರ್ಷ ಕತ್ತೆ ಕೆಲಸ ಮಾಡಬೇಕೇ? ಇರಲಿ. ನಾನು ಮಾತಾಡುವುದಿಲ್ಲ. ನನ್ನೊಬ್ಬಳ ಹೊಟ್ಟೆಯನ್ನು ಎಲ್ಲಿಯಾದರೂ ಹೋಗಿ ಹೇಗಾದರೂ ಮಾಡಿ ಹೊರುವೆನು. ನೀವೂ ನಿಮ್ಮ ಸ್ನೇಹಿತರೂ ಕೂಡಿ ಈ ಮನೆ ಯಲ್ಲಿ ಸುಖವಾಗಿ ಬಿದ್ದುಕೊಳ್ಳಿರಿ. (**ಯುವಕನ ಹತ್ತಿರ ಹಾರಿ ಹೋಗಿ ಅವನ ಮೇಲೆ ಹೊದಿಸಿದ್ದ ಬಟ್ಟೆಯನ್ನು ಇಸುಕೊಳ್ಳುತ್ತಾ**) ಏ, ಕೋಣ! ಅದನ್ನು ಇತ್ತ ಕೊಡು!

(**ಆ ಬಟ್ಟೆಯನ್ನು ತಾನು ಹೊದೆದುಕೊಂಡು ಬಾಗಿಲ ಕಡೆಗೆ ರಭಸದಿಂದ ಹೋಗುವಳು. ಆದರೆ ತ್ಯಾಂಪನೂ ಆ ಯುವಕನೂ ಸುಮ್ಮಗಿದ್ದುದನ್ನು ನೋಡಿ ಅವಳಿಗೆ ಆಶ್ಚರ್ಯವಾಗುವುದು. ಅಲ್ಲಿಯೇ ಒಂದು ಕ್ಷಣ ನಿಂತು ಯುವಕನಿದ್ದ ಲ್ಲಿಗೆ ಬರುವಳು.**)

**ನಾಗಮ್ಮ**— ಏ! ಕುಡಿದು ನಿನಗೆ ಅಮಲೇರಿದೆ. ಇಲ್ಲದಿದ್ದರೆ ಈ ಸ್ಥಿತಿ ಯಲ್ಲಿರಲು ಕಾರಣವೇನೋ? (**ಉತ್ತರವಿಲ್ಲ**) ನೀನೊಬ್ಬ ಕಳ್ಳಕೊರವ ನಿರಬೇಕು. ಆದುದರಿಂದಲೇ ಬಾಯಿ ಬಿಡಲು ಧೈರ್ಯವಿಲ್ಲ. (**ಉತ್ತರವಿಲ್ಲ. ಅವಳು ಯುವಕನ ಹತ್ತಿರ ಇನ್ನೂ ಸ್ವಲ್ಪ ಸರಿದು ಅವನನ್ನು ದೃಷ್ಟಿಸಿ ನೋಡುತ್ತಾ**) ಎಲ ಇದೇನು? ನೀನೊಬ್ಬ ಭಿಕ್ಷುಕನಂತೆ ಕಾಣುವೆ. ಆದರೆ ನಿನ್ನ ಮೈ ಬಣ್ಣ ನೋಡಿದರೆ ನೀನು ಉತ್ತಮ ಕುಲ ದವನಂತೆ ಇದ್ದಿ. ಯಾರೋ ನೀನು? . . . . ಎಲ್ಲಿಂದ ಬಂದದ್ದೋ? (**ಉತ್ತರವಿಲ್ಲ**) ಏನು, ನಿನಗೆ ನಾಲಿಗೆಯಿಲ್ಲವೋ? ಮೂಕನೇ ನೀನು?

**ತ್ಯಾಂಪ**— ಅವನು ನನಗೆ ಸಿಕ್ಕಿದಾಗಿನಿಂದ ಹಾಗೆಯೇ ಇದ್ದಾನೆ. ಎಷ್ಟು ಮಾತಾಡಿಸಿದರೂ ಮಾತಾಡುವುದಿಲ್ಲ.

**ನಾಗಮ್ಮ**— ಸಿಕ್ಕಿದ್ದು? ಎಲ್ಲಿ?

**ತ್ಯಾಂಪ**— ಮಾರ್ಗದ ಬದಿ ಆ ಪಂಜುರ್ಲಿಯ ಗುಡಿಯಿಲ್ಲವೇ? ಅದನ್ನು ಹಾದು ಮನೆಗೆ ಬರುವಾಗ್ಗ ಅದರ ಹತ್ತಿರ ಏನೋ ಬಿದ್ದಿರು

ವಂತೆ ಕಂಡಿತು. ಹತ್ತಿರ ಹೋಗಿ ನೋಡಿದೆ. ಇವನು ಕಂಡುಬಂದನು. ಬತ್ತಲೆಯಾಗಿ ಬಿದ್ದಿದ್ದನು. ಜಡಿಮಳೆ ಬರುತ್ತಿತ್ತು. ಯಾರೋ ಪೋಲಿಗಳು ಅವನ ಹತ್ತಿರ ಇದ್ದುದನ್ನೆಲ್ಲಾ ದೋಚಿಕೊಂಡು ಅವನನ್ನು ಅಲ್ಲಿ ಸಾಯಬಿಟ್ಟಿರಬಹುದೆಂದು ಊಹಿಸಿದೆನು. ಅವನನ್ನು ಉಪಚರಿಸಿ, ಇಲ್ಲಿಗೆ ಕರೆದುಕೊಂಡು ಬರಬಹುದೆಂದು ಎಣಿಸಿದೆನು. ಆದರೆ ಪೋಲೀಸರು ಈ ಕೃತ್ಯವನ್ನು ನಾನೇ ಮಾಡಿದೆನೆಂದು ಊಹಿಸಿದರೆ ನನ್ನ ಗತಿ ಏನು ಎಂದು ಹೆದರಿದೆನು. ಇಂತಹ ಸಂಗತಿಯಲ್ಲಿ ಕೈ ಹಾಕುವುದು ಒಳ್ಳೆಯದಲ್ಲವೆಂದು ತೋರಿತು. ಆದರೆ ಸ್ವಲ್ಪ ಮುಂದೆ ಹೋಗಲು ಒಬ್ಬ ಬಡಪಾಯಿಯನ್ನು ಸಾಯಬಿಡುವುದು ಯೋಗ್ಯವೇ—ಎಂದು ಮರುಗಿ ಹಿಂತಿರುಗಿದೆನು. ನನ್ನ ಮೈಮೇಲಿದ್ದ ವಸ್ತ್ರವನ್ನು ಅವನಿಗೆ ಉಡಿಸಿದೆನು. ಅವನನ್ನು ಬೆನ್ನ ಮೇಲೆ ಹಾಕಿಕೊಂಡು ಬೇಗ ಬೇಗ ಇಲ್ಲಿಗೆ ಬಂದೆನು. ಅರ್ಧ ದಾರಿ ನಡೆದ ಮೇಲೆ ಅವನಿಗೆ ಸ್ವಲ್ಪ ಚೇತನವುಂಟಾಯಿತು. ದಾರಿಯಲ್ಲಿ ಅನೇಕ ಸಾರಿ ಅವನನ್ನು ಮಾತನಾಡಿಸಲು ಹವಣಿಸಿದೆನು. ಆದರೆ ಯಾವುದಕ್ಕೂ ಅವನು ಬಾಯಿಯೇ ಬಿಡಲಿಲ್ಲ . . . ಅಷ್ಟೇ.

**ನಾಗಮ್ಮ**—(ಆಶ್ಚರ್ಯದಿಂದ ಯುವಕನನ್ನೇ ನೋಡುತ್ತಾ) ನೋಡಿ, ಅವನ ಮೈ ಬಣ್ಣವು ಎಷ್ಟು ಬಿಳುಪಾಗಿದೆ! ದೊಡ್ಡ ಕುಲದವನಿರಬೇಕು. ಇಂತಹ ಜಡಿ ಮಳೆಯಲ್ಲಿ ಬಿದ್ದಿದ್ದನೇ? ಪಾಪ. ಜೀವದಿಂದ ಬದುಕಿದ್ದೇ ಆಶ್ಚರ್ಯ! ಎಷ್ಟು ಬಳಲಿರುವನೋ ಏನೋ! ಅವನಿಗೆಷ್ಟು ಹಸಿವೆಯಾಗಿದೆಯೊ . . . . ದಾರಿ ಬಿಡಿ, ಹೂಂ. ನೋಡಿ, ಅವನ ಮೈಮೇಲಿಂದ ಆ ಒದ್ದೆ ಬಟ್ಟೆಯನ್ನು ತೆಗೆಯಿರಿ. ಈ ವಸ್ತ್ರದಿಂದ ಅವನ ಮೈಯನ್ನು ಚೆನ್ನಾಗಿ ಉಜ್ಜಿ ಬಿಡಿ. (ತ್ಯಾಂಪನು ಹಾಗೆಯೇ ಮಾಡುವನು. ಅವಳು ಒಂದು ಬಟ್ಟಲಿನಲ್ಲಿ ಪಾನಕವನ್ನು ತಂದು ಯುವಕನಿಗೆ ಕೊಡುವಳು.) ನೋಡು, ಇದನ್ನು ಕುಡಿ. ಜೀವಕ್ಕೆ ಹಾಯಾಗುವುದು.

(ಯುವಕನು ಅವಳ ಕೈಯಿಂದ ಬಟ್ಟಲನ್ನು ತೆಗೆದುಕೊಳ್ಳುವಾಗ ಪ್ರೇಕ್ಷಕರಿಗೆ ಬೆನ್ನು ಹಾಕುವನು ಮುಖವನ್ನೆತ್ತಿ ಅವಳ ಕಡೆಗೆ ನೋಡುವನು. ನಾಗಮ್ಮ

ಚಕಿತಳಾಗಿ ಅವನನ್ನೇ ಎವೆ ಇಕ್ಕದೆ ನೋಡುವಳು. ಅವನನ್ನು ನೋಡುತ್ತಾ ಮೆಲ್ಲಗೆ ತ್ಯಾಂಪನಿದ್ದಲ್ಲಿಗೆ ಸರಿಯುವಳು ಅವಳು ಪುನಃ ಮಾತ ನಾಡುವಾಗ ಅವಳ ಸ್ವರವು ಕಂಪಿಸುವುದು.)

**ನಾಗಮ್ಮ**— ನೋಡಿ! ನೋಡಿ! ಅವನನ್ನು ನೋಡಿ! . . . . ನೋಡಿ ದಿರಾ ಅವನನ್ನು?

**ತ್ಯಾಂಪ**— ಯಾರನ್ನು ನೋಡುವುದು, ನಾಗೂ?

**ನಾಗಮ್ಮ**— ಅವನನ್ನು! ಆ ಬಟ್ಟಲನ್ನು ಅವನ ಕೈಯಲ್ಲಿ ಕೊಡು ವಾಗ ಅವನು ನನ್ನನ್ನು ನೋಡಿ ವಿಚಿತ್ರ ರೀತಿಯಿಂದ ನಕ್ಕನು! ಮನುಷ್ಯ ರಾದವರು ಈ ರೀತಿ ನಕ್ಕುದನ್ನು ನಾನು ಈವರೆಗೆ ನೋಡಲಿಲ್ಲ. ಅವನು ನಕ್ಕಾಗ ಅವನ ಕಣ್ಣುಗಳಲ್ಲಿ ಸೂರ್ಯಚಂದ್ರರೇ ಹೊಳೆದಂತೆ ಕಾಣಿ ಸಿತು . . . . ನನಗೆ ಭಯವಾಗುತ್ತದೆ. ಅವನನ್ನು ನೋಡಿದರೆ ನನಗೆ ಭಯವಾಗುತ್ತದೆ.

**ತ್ಯಾಂಪ**— ಏನು ಹುಚ್ಚು, ನಾಗು! ಅವನು ಎಂಥವನೇ ಇರಲಿ, ನಮ್ಮಲ್ಲಿ ಅವನನ್ನು ಈ ರಾತ್ರಿ ಉಪವಾಸ ಹಾಕಲು ಸಾಧ್ಯವಿಲ್ಲ.

**ನಾಗಮ್ಮ**— ಇಲ್ಲ.

**ತ್ಯಾಂಪ**— ಹಾಗಾದರೆ ಅವನಿಗೆ ಮೊದಲು ಅನ್ನವನ್ನಿಕ್ಕು.

**ನಾಗಮ್ಮ**— ಇಲ್ಲ. ನನಗೆ ಹೆದರಿಕೆಯಾಗುತ್ತದೆ, ನೀವೇ ಅವನಿಗೆ ಅನ್ನ ಬಡಿಸಿ ನೋಡಿ ಆ ಪಾತ್ರೆಯಲ್ಲಿದೆ.

**ತ್ಯಾಂಪ**—(ಹಾಗೆಯೇ ಮಾಡುತ್ತಾ) ಗೆಳೆಯಾ, ಇಕೋ. ಸ್ವಲ್ಪ ಉಣ್ಣು.

(ಯುವಕನು ಉಣ್ಣುತ್ತಾನೆ. ಗಂಡಹೆಂಡಿರಿಬ್ಬರು ಅವನು ಉಣ್ಣುವುದನ್ನು ಸಂತೋಷದಿಂದ ಸ್ವಲ್ಪ ಸಮಯದ ವರೆಗೆ ನೋಡುತ್ತಾರೆ. ಆ ಮೇಲೆ—)

**ನಾಗಮ್ಮ**—(ತ್ಯಾಂಪನ ಹತ್ತಿರ, ಯುವಕನಿಗೆ ಕೇಳಿಸದಂತೆ) ಅನ್ನವೆಲ್ಲ ಮುಗಿಯಿತು. ನೀವು ಬೆಳಗಿಂದ ಉಪವಾಸವಿದ್ದೀರಿ ಎಂದು ಮರೆತೆನು. ನೆರೆಮನೆಯ ಸಿದ್ದಕ್ಕನಲ್ಲಾದರೂ ಅನ್ನ ಉಳಿದಿರಬಹುದು. ಅಲ್ಲಿಂದ

ಸ್ವಲ್ಪ ತರುತ್ತೇನೆ. (ಬಾಗಿಲ ಬಳಿಗೆ ಹೋಗಿ ಹೊರಗೆ ನೋಡುವಳು. ಅಲ್ಲೇ ಹಿಂತಿರುಗಿ ನಿಂತು) ನನಗೆ ಇಂದು ಏನೋ ಆಗಿದೆ. ಈ ವಿಚಿತ್ರ ಮನುಷ್ಯ ನನ್ನು ನೋಡಿದಂದಿನಿಂದ ಮನಸ್ಸಿನಲ್ಲಿ ಏನೋ ಒಂದು ತಳಮಳ ವುಂಟಾಗಿದೆ. ಈ ಕಗ್ಗತ್ತಲಲ್ಲಿ ಹೊರಗೆ ಕಾಲಿಡಲು ಧೈರ್ಯವೇ ಬರುವುದಿಲ್ಲ. ನನ್ನೊಟ್ಟಿಗೆ ಸ್ವಲ್ಪ ಬರುವಿರಾ? ಅವನ ವಿಷಯ ಇನ್ನೇನೂ ವ್ಯಾಕುಲಪಡಬೇಕಾಗಿಲ್ಲ. ಸ್ವಲ್ಪ ಸಮಯ ಇಲ್ಲಿಯೇ ಸ್ವಸ್ಥವಾಗಿ ಕುಳಿತಿರಲಿ. (ತ್ಯಾಂಪನು ಅವಳಿದ್ದಲ್ಲಿಗೆ ಹೋಗುವನು.) ಏನು ಕತ್ತಲು ಹೊರಗೆ! ಸೂಟಿ ಹಚ್ಚಲೇ?

**ತ್ಯಾಂಪ**— ಬೇಡ, ಅಗತ್ಯವಿಲ್ಲ. ಸಿದ್ದಕ್ಕನ ಮನೆಯ ದಾರಿಯ ಪ್ರತಿಯೊಂದು ಹೆಜ್ಜೆಯೂ ನಮಗೆ ಗೊತ್ತಿರುವುದಲ್ಲವೇ? . . . . ಇಗೋ ನನ್ನ ಕೈಯನ್ನು ಗಟ್ಟಿ ಹಿಡಿ!

(ಇಬ್ಬರೂ ಹೋಗುವರು. ಯುವಕನು ಸ್ವಲ್ಪ ಹೊತ್ತು ಸುಮ್ಮನೆ ಕೂತು ಕೊಳ್ಳುತ್ತಾನೆ.)

**ಭಾಗು**—(ಒಳಗಿನಿಂದ) ಅಮ್ಮಾ! ಅಮ್ಮಾ! ಅಪ್ಪಾ! ಅಪ್ಪಾ!

(ಭಾಗು ತನ್ನ ಕೊರಡಿಯಿಂದ ಹೊರಗೆ ಇಣಿಕಿ ನೋಡುತ್ತಾಳೆ. ಮೆಲ್ಲಗೆ ಹೊರಗೆ ಬರುತ್ತಾಳೆ. ಯುವಕನನ್ನು ನೋಡಿ ಆಶ್ಚರ್ಯಪಡುತ್ತಾಳೆ. ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಅವನ ಬಳಿಗೆ ಸರಿಯುತ್ತಾಳೆ. ಅವನು ಮೇಲಕ್ಕೆ ನೋಡುತ್ತಾನೆ. ಅವಳು ತನ್ನ ಕೈಗಳನ್ನು ಅವನ ಕಡೆಗೆ ಚಾಚು ತ್ತಾಳೆ. ಆವನು ಆ ಪುಟ್ಟ ಕೈಗಳನ್ನು ಕೂಡಲೇ ಹಿಡಿದು ಅವಳನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸುತ್ತಾನೆ. ಅವಳು ತನ್ನ ತಲೆಯನ್ನು ಅವನ ಭುಜದ ಮೇಲಿಟ್ಟು ಹಾಯಾಗಿ ಕುಳಿತುಕೊಳ್ಳುತ್ತಾಳೆ.

ನಟರಂಗದ ಮೇಲೆ ಕತ್ತಲು ಹರಡುತ್ತದೆ.)

## ದೃಶ್ಯ ೨.

[ಕೆಲವು ಕ್ಷಣದಲ್ಲಿಯೇ ನಟರಂಗದ ಮೇಲೆ ಪುನಃ ಬೆಳಕಾಗುವುದು ಮೊದಲಿನದೇ ದೃಶ್ಯ. ಒಂದು ವರ್ಷ ಸಂದುಹೋಗಿದೆ. ತ್ಯಾಂಪನು ತನ್ನ ಸಮಗಾರಿಕೆಯ ಕೆಲಸದಲ್ಲಿರುವನು. ನಾಗಮ್ಮ ತನ್ನ ಮನೆ ಕೆಲಸದಲ್ಲಿ ಮಗ್ನಳಾಗಿರುವಳು. ಸ್ವಲ್ಪ ಸಮಯದ ಅನಂತರ—]

**ನಾಗಮ್ಮ**—ಓ, ಇವರೇ!

**ತ್ಯಾಂಪ**—ಏನೇ ನಾಗೂ?

**ನಾಗಮ್ಮ**—ಈ ಹೊತ್ತು ಯಾವ ದಿನವೆಂದು ಗೊತ್ತೇ?

**ತ್ಯಾಂಪ**—ಯಾಕೆ? ಶನಿವಾರವಲ್ಲವೇ?

**ನಾಗಮ್ಮ**—ಅದಲ್ಲ ನಾನು ಕೇಳಿದ್ದು.

**ತ್ಯಾಂಪ**—ಮತ್ತೇನನ್ನು?

**ನಾಗಮ್ಮ**—ಅಹಿಂತಕನನ್ನು ನೀವು ಮನೆಗೆ ಕರೆದುಕೊಂಡು ಬಂದು ಇಂದಿಗೆ ಸಂಪೂರ್ಣ ಒಂದು ವರ್ಷವು ಆಯಿತು. ನೆನಪಿಲ್ಲವೇ?

**ತ್ಯಾಂಪ**—ನೆನಪಿಲ್ಲದೆ ಏನು? ಆ ದಿನ ನಿಜವಾಗಿಯೂ ಸುದಿನ ನಮಗೆ. ನಮ್ಮ ಅಹಿಂತಕನಷ್ಟು ಚುರುಕು ಕೆಲಸದವನನ್ನು ನಾನು ನೋಡಲೇ ಇಲ್ಲ. ಕೆಲಸ ಕಲಿಯುವುದರಲ್ಲಿ ಅವನ ಆಸಕ್ತಿಗೆ ತುದಿ ಮೊದಲು ಇಲ್ಲ. ಅವನ ಹೆಸರು ಈಗ ಎಲ್ಲೆಲ್ಲಿಯೂ ಹಬ್ಬಿದೆ. ಅವನು ಮಾಡಿರುವ ಹೊಸ ಹೊಸ ಮಾದರಿಯ ಪಾಪಾಸು, ಮೆಟ್ಟಿನ ಜೋಡುಗಳನ್ನು ನೋಡಿ ಪೇಟೆಯವರು ಹುಚ್ಚರಾಗಿದ್ದಾರೆ. ಎಲ್ಲೆಲ್ಲಿಂದಲೂ ಜನರು ಪಾದರಕ್ಷೆಗಳನ್ನು ಮಾಡಿಸಲಿಕ್ಕೆ ಇಲ್ಲೇ ಬರುತ್ತಾರೆ. ಅವನು ಹೊಲಿದಷ್ಟು ಚಲೋರೀತಿಯಲ್ಲಿ ಬೂಟೀಸುಗಳನ್ನು ಹೊಲಿಯಲು ಬೇರೆ ಯಾರಿಗೂ ಆಗುವುದಿಲ್ಲವಂತೆ. ಇದೆಲ್ಲ ನಮ್ಮ ಪುಣ್ಯ. ದೇವರೇ ಅವನನ್ನು ನಮ್ಮ ಬಳಿಗೆ ಕರೆಯಿಸಿದನು. ಅವನಿಂದಲೇ ನಮಗೆ ಇನ್ನು ಒಳ್ಳೇ ದಿನಗಳು ಬರಬೇಕು.

**ನಾಗಮ್ಮ**—ಅ . . ಹಿಂ . . ತ . . ಕ! ಎಂತಹ ಅಪೂರ್ವದ ಹೆಸರು! ಬೇರೆ ಯಾರಿಗೂ ಆ ಹೆಸರಿರುವುದನ್ನು ನಾನೀವರೆಗೆ ಕೇಳಿಲ್ಲ.

**ತ್ಯಾಂಪ**—ನಾನೂ ಕೇಳಿಲ್ಲ. ಆದರೆ ಅದೇ ತನ್ನ ಹೆಸರೆಂದು ಹೇಳುತ್ತಾನೆ.

**ನಾಗಮ್ಮ**—ಅವನು ತನ್ನ ಹೆಸರೇನೋ ಹೇಳಿರುವನು. ಆದರೆ ಇಡೀ ಒಂದು ವರ್ಷ ನಮ್ಮಲ್ಲಿದ್ದರೂ ಅವನು ಯಾರು, ಎಲ್ಲಿಂದ ಬಂದವನು ಎಂದು ನಮಗೆ ಗೊತ್ತೇ ಇಲ್ಲ. ಇದು ಆಶ್ಚರ್ಯ . . . . ಅವನೆಲ್ಲಿ ಹೋಗಿರುವನು ಈಗ?

**ತ್ಯಾಂಪ**—ಮಾರಪ್ಪ ಶಟ್ಟರಿಗೋಸ್ಕರ ಮಾಡಿದ ಬೂಟೀಸಿನ ಜೋಡನ್ನು ಕೊಡಲಿಕ್ಕ ಕಳುಹಿಸಿದ್ದೇನ.

**ನಾಗಮ್ಮ**—ಅವನು ಕುಳಿತ ಸ್ಥಳ ಖಾಲಿಯಿರುವುದೆಂದೇ ಇಲ್ಲ. ಯಾವಾಗ ನೋಡಿದರೂ ತನ್ನ ಕೆಲಸದಲ್ಲಿಯೇ ಮಗ್ನನಾಗಿರುವನು. ಕೆಲಸಮಾಡುವುದರಲ್ಲಿ ಬೇಸರವೆಂಬುದೇ ಅವನಿಗೆ ಇಲ್ಲ. ಮಾತು ಗಳು ಕೂಡ ಎಷ್ಟು ಕಡಿಮೆ! ತನಗೆ ಅಗತ್ಯವಿದ್ದಾಗ ಮಾತ್ರ ಮಾತಾಡು ವನು. ನಮ್ಮ ಭಾಗುವಿನ ಹತ್ತಿರ ಮಾತ್ರ ಸರಿಯಾಗಿ ಮಾತಾಡು ವನು; ಆಟವಾಡುವನು, ಹಾಸ್ಯಮಾಡುವನು, ನಗಾಡುವನು. ಆದರೆ ನಾವು ಬಂದ ಕೂಡಲೇ ತಟಸ್ಥನಾಗುತ್ತಾನೆ. ನಮ್ಮ ಮುಂದೆ ಅವನು ನಗಾಡಿದ್ದು ಈ ಇಡೀ ಒಂದು ವರ್ಷದಲ್ಲಿ ಒಂದು ಸಲ ಮಾತ್ರ. ನೆನ ಪುಂಟೇ—ಅವನು ಬಂದ ದಿನ, ಆ ರಾತ್ರೆ. ಅನಂತರ ಅವನು ಈ ತನಕ ನಮ್ಮ ಮುಂದೆ ಒಂದು ಬಾರಿಯಾದರೂ ನಗಲಿಲ್ಲ. ಏನೋ ವಿಚಿತ್ರದ ಮನುಷ್ಯ . . . . ನನಗೆ ಇದರ ಅಂತ್ಯವೇನಾಗಬಹುದೆಂದು ಒಂದೊಂದು ಸಲ ಹೆದರಿಕೆಯಾಗುತ್ತದೆ. ಒಂದಲ್ಲ ಒಂದು ದಿನ ನಾವು ಅವನನ್ನು ಫಕ್ಕನೆ ಕಳಕೊಳ್ಳಲಿಕ್ಕುಂಟೆಂದು ಕಾಣುತ್ತದೆ.

**ತ್ಯಾಂಪ**—ಆ ದಿನವು ಆದಷ್ಟು ದೂರ ಹೋಗಲೆಂದೇ ನನ್ನ ಕೋರಿಕೆ. ಯಾಕೆಂದರೆ ಇನ್ನು ನಮ್ಮ ಉದ್ಧಾರವಾಗಬೇಕಾದರೆ ಅವನಿಂದಲೇ ಆಗಬೇಕು.

(ಬಾಗಿಲನ್ನು ತೆರೆದು ಆಹಿಂತಕನು ಒಳಗೆ ಬರುವನು. ಬಂದವನು ಸದ್ದಿಲ್ಲದೆ ತನ್ನ ಸ್ಥಳಕ್ಕೆ ಹೋಗಿ ಕೂತುಕೊಂಡು ತನ್ನ ಕೆಲಸವನ್ನು ಪ್ರಾರಂಭಿಸುವನು. ಕೆಲವು ನಿಮಿಷದ ವರೆಗೆ ಅವನೂ ತ್ಯಾಂಪನೂ ಸದ್ದಿಲ್ಲದೆ ಕೆಲಸ ಮಾಡುವರು. ನಾಗಮ್ಮ ತನ್ನ ಕೆಲಸದಲ್ಲಿ ಮಗ್ನಳಾಗುವಳು. ಸ್ವಲ್ಪ ಸಮಯದಲ್ಲಿಯೇ ಹೊರಗಿನಿಂದ ಮೋಟರ್ ಕಾರ್ ಹೊರ್ನಿನ ಸದ್ದು ಕೇಳಿಸುವುದು. ನಾಗಮ್ಮ ಕೂಡಲೇ ಬಾಗಿಲ ಕಡೆಗೆ ಹೋಗುವಳು.)

**ನಾಗಮ್ಮ**—ನೋಡಿದಿರಾ, ಒಂದು ಕಾರು ಇತ್ತಕಡೆ ಬರುತ್ತಿದೆ!

**ತ್ಯಾಂಪ**—(ಕೆಲಸದಿಂದ ತಲೆ ಎತ್ತದೆ) ಬರಲಿ, ನಮಗೇನು?

**ನಾಗಮ್ಮ**—ಟ್ಯಾಕ್ಸಿ ಕೂಡ ಅಲ್ಲ, ಚಲೋ ಮೋಟರ್ ಕಾರು! ಯಾರೋ, ದೊಡ್ಡ ಮನುಷ್ಯರಿರಬೇಕು.

**ತ್ಯಾಂಪ**—(ಮೇಲಿನಂತೆಯೇ) ಇರಲಿ, ನಮಗೇನು?

**ನಾಗಮ್ಮ**—ಕಾರು ಇಲ್ಲೇ ನಿಂತಿತು! . . . . ನಮ್ಮ ಅಂಗಳದ ಎದುರಿಗೇ ನಿಂತಿತು!

**ತ್ಯಾಂಪ**—(ಮೊದಲಿನಂತೆಯೇ) ದಾರಿ ಕೇಳಲಿಕ್ಕೆ ಇರಬಹುದು.

**ನಾಗಮ್ಮ**—ಕಾರಿನ ಬಾಗಿಲು ತೆರೆಯುತ್ತಾರೆ! ಕಾರಿನಲ್ಲಿ ದೊರೆಸಾನಿಯೊಬ್ಬಳಿದ್ದಾಳೆ. ದೊರೆಗಳೊಬ್ಬರೂ ಇರುವರು! . . . . ಕಾರಿನಿಂದ ಕೆಳಗೆ ಇಳಿದು ಇಲ್ಲೇ ಬರುತ್ತಿರುವರು!

(ತ್ಯಾಂಪನು ಎದ್ದು ಬಾಗಿಲ ಬಳಿ ನಮ್ರತೆಯಿಂದ ನಿಲ್ಲುವನು. ಆಹಿಂತಕನು ಏನೂ ಗಣ್ಯವಿಲ್ಲದಂತೆ, ತನ್ನ ಕೆಲಸದಲ್ಲೇ ಮಗ್ನನಾಗಿರುವನು. ನಾಗಮ್ಮ ಬಾಗಿಲ ಕಡೆಗೆ ನೋಡುತ್ತಾ ನಿಲ್ಲುವಳು. ಬಾಗಿಲಲ್ಲಿ ಸದ್ದಾಗುವುದು. ತ್ಯಾಂಪನು ಅವಸರದಿಂದ ಬಾಗಿಲನ್ನು ತೆರೆಯುವನು. ಪಾಶ್ಚಿಮಾತ್ಯ ಉಡುಪಿನಲ್ಲಿರುವ ೩೫—೪೦ ವರ್ಷ ಪ್ರಾಯದ ಒಬ್ಬ 'ಕಪ್ಪು ದೊರೆಯು' ಆಡಂಬರದಿಂದ ಒಳಗೆ ಬರುವನು.)

**ದೊರೆ**—ಇಲ್ಲಿ ಸಮಗಾರ ತ್ಯಾಂಪನೆಂದರೆ ಯಾರು? . . . . ನೀನೋ?

**ತ್ಯಾಂಪ**—ಹೌದು ಬುದ್ಧಿ.

**ದೊರೆ**—(ತನ್ನ ಸಂಗಡ ಬಂದ ಸೇವಕನೊಂದಿಗೆ) ಆ ಚರ್ಮ ವನ್ನು ಇತ್ತ ಕೊಡು. (ಸೇವಕನು ಹಾಗೆಯೇ ಮಾಡುವನು. ತ್ಯಾಂಪನಿಗೆ) ನೋಡಿದೆಯಾ ಈ ಚರ್ಮವನ್ನು?

**ತ್ಯಾಂಪ**—ಹೌದು ಬುದ್ಧಿ.

**ದೊರೆ**—ಹೇಗಿದೆ?

**ತ್ಯಾಂಪ**—ಬಹಳ ನಾಜೂಕಾಗಿದೆ, ಬುದ್ಧಿ.

**ದೊರೆ**—ಬಹಳ ನಾಜೂಕಾಗಿದೆ! (ತಿರಸ್ಕಾರದ ನಗುವಿನಿಂದ) ಆ—ಹಾ—ಹಾ! ಹಾ!—ನಾಜೂಕಿಲ್ಲದೆ ಏನು? ನಿನ್ನ ಇಡೀ ಜೀವ ಮಾನದಲ್ಲಿ ಇಷ್ಟು ಒಳ್ಳೇ ಚರ್ಮವನ್ನು ನೋಡಿರಲಿಕ್ಕಿಲ್ಲ ನೀನು.

**ತ್ಯಾಂಪ**—ಹೌದು ಬುದ್ಧಿ.

**ದೊರೆ**—ಸೀಮೆಯಿಂದ ಸ್ಪೆಶ್ಯಲಾಗಿ ತರಿಸಿದ ಚರ್ಮವಿದು. ಇಷ್ಟು ಚಿಕ್ಕ ತುಂಡಿಗೆ ನನಗೆ ೨೫ ರೂಪಾಯಿ ತಗಲಿದೆ.

**ತ್ಯಾಂಪ**—೨೫ ರೂಪಾಯಿ, ಬುದ್ಧಿ?

**ದೊರೆ**—ಹೌದು ೨೫ ರೂಪಾಯಿ.

**ತ್ಯಾಂಪ**—ಹಾಗಾದರೆ ಅಂತಹ ಚರ್ಮವನ್ನು ನೋಡಲಿಕ್ಕೆ ನನ ಗೆಲ್ಲಿ ಸಾಧ್ಯವಿದೆ ಬುದ್ಧಿ?

**ದೊರೆ**—ನಿಜ, ಅದನ್ನೆ ನಾನು ಹೇಳಿದ್ದು. ಇಲ್ಲಿ ನೋಡು, ಈ ಚರ್ಮದಿಂದ ನನಗೆ ಒಂದು ಜೋಡು ಬೂಟೀಸನ್ನು ಮಾಡಿ ಕೊಡುವೆಯಾ?

**ತ್ಯಾಂಪ**—ಮಾಡಿ ಕೊಡದೆ ಏನು ಬುದ್ಧಿ?

**ದೊರೆ**—ಮಾಡಿಕೊಡದೆ ಏನು! ಆದರೆ ಯಾರಿಗೋಸ್ಕರವೆಂಬು ಮೊದಲು ತಿಳಿದುಕೋ. ನನಗೋಸ್ಕರ ತಿಳಿಯಿತೇ, ನನಗೋಸ್ಕರ!

**ತ್ಯಾಂಪ**—ತಿಳಿಯಿತು, ಬುದ್ಧಿ.

**ದೊರೆ**—ಎಷ್ಟು ಬೆಲೆಯುಳ್ಳ ಚರ್ಮವೆಂದು ನೋಡು. ಆದರೆ ಇದರಿಂದ ನನಗೆ ಬೂಟೀಸು ಮಾಡುವ ಮೊದಲು ನನ್ನ ಕೆಲವು ಶರ್ತಗಳಿಗೆ ನೀನು ಒಳಗಾಗಬೇಕು.

**ತ್ಯಾಂಪ**—ಯಾವ ಶರ್ತಗಳು ಬುದ್ಧಿ?

**ದೊರೆ**—ಅವುಗಳ ಆಕಾರವು ಬಹಳ ನಾಜೂಕಾಗಿರಬೇಕು.

**ತ್ಯಾಂಪ**—ಆದೀತು ಬುದ್ಧಿ.

**ದೊರೆ**—ಉಪಯೋಗಿಸಿದ ಮೇಲೆ ಒಂದು ವರ್ಷದ ವರೆಗಾದರೂ ಆಕಾರವು ಕೆಡಬಾರದು.

**ತ್ಯಾಂಪ**—ಆದೀತು ಬುದ್ಧಿ.

**ದೊರೆ**—ಹೊಲಿಗೆಯು ಸ್ವಲ್ಪವಾದರೂ ಬಿಡಿಸಬಾರದು . . . .

**ತ್ಯಾಂಪ**—ಇಲ್ಲ ಬುದ್ಧಿ.

**ದೊರೆ**—ಕಾಲಿಗೆ ಬಿಗಿಯಾಗಬಾರದು!

**ತ್ಯಾಂಪ**—ತಿಳಿಯಿತು, ಬುದ್ಧಿ.

**ದೊರೆ**—ಸಡಿಲೂ ಆಗಬಾರದು!

**ತ್ಯಾಂಪ**—ಇಲ್ಲ ಬುದ್ಧಿ.

**ದೊರೆ**—ಈ ರೀತಿಯಲ್ಲಿ ಮಾಡಲು ಸಾಧ್ಯವಿದ್ದರೆ ಮಾತ್ರ ಇದನ್ನು ತುಂಡು ಮಾಡು. ಇಲ್ಲವಾದರೆ ಬೇಡ. ನಿನಗೆ ಮೊದಲೇ ಎಚ್ಚರಿಕೆಯನ್ನು ಕೊಡುತ್ತೇನೆ. ಒಂದು ವೇಳೆ ನಾನು ಹೇಳಿದಂತೆ ಆಗದಿದ್ದರೆ ನಿನ್ನನ್ನು ಜೈಲಿನಲ್ಲಿ ಹಾಕಿಸುವೆನು. ತಿಳಿಯಿತೇ, ಜೈಲಿನಲ್ಲಿ!

**ತ್ಯಾಂಪ**—ತಿಳಿಯಿತು ಬುದ್ಧಿ.

**ದೊರೆ**—ಆದರೆ ನಾನು ಹೇಳಿದಂತೆ ಇದರಿಂದ ಬೂಟೀಸಿನ ಜೋಡಿಯನ್ನು ಮಾಡಿದರೆ ನಿನಗೆ ೧೦ ರೂಪಾಯಿ ಕೂಲಿ ಕೊಡುವೆನು.

**ತ್ಯಾಂಪ**—೧೦ ರೂಪಾಯಿ!

**ದೊರೆ**—ಕಡಿಮೆಯಾಯಿತೋ? ೧೨ ರೂಪಾಯಿ ಕೊಡುವೆನು. ಮಾಡುವಿಯೋ ಹೇಳು.

**ತ್ಯಾಂಪ**—ಮಾಡುವೆನು, ಬುದ್ಧಿ! ತಾವು ಹೇಳಿದಂತೆಯೇ ಮಾಡುವೆನು.

**ದೊರೆ**—ಹಾಗಾದರೆ ನನ್ನ ಕಾಲಿನ ಅಳತೆಯನ್ನು ತೆಗೆ.

(ನಾಗಮ್ಮ ಒಂದು ಹಳೇ ಸ್ಟೂಲನ್ನು ತಂದಿಡುವಳು. ಸೇವಕನು ಆದರ ಮೇಲ್ಭಾಗವನ್ನು ತನ್ನ ಕರವಸ್ತ್ರದಿಂದ ಉಜ್ಜಿದ ಮೇಲೆ ದೊರೆಯು ಅದರ ಮೇಲೆ ಕುಳಿತುಕೊಳ್ಳುವನು. ತ್ಯಾಂಪನು ಅವನ ಕಾಲಿಗಿದ್ದ ಬೂಟ್ಸನ್ನು ತೆಗೆದು, ಕಾಲಿನ ಅಳತೆಯನ್ನು ತೆಗೆಯುವನು.)

**ದೊರೆ**—ಬೂಟೀಸು ಬಿಗಿಯಾಗ ಕೂಡದು!

**ತ್ಯಾಂಪ**—ಇಲ್ಲ ಬುದ್ಧಿ.

**ದೊರೆ**—ಬಹಳ ಸಡಿಲೂ ಆಗಬಾರದು.

**ತ್ಯಾಂಪ**—ಆದೀತು, ಬುದ್ಧಿ.

(ದೊರೆಯೊಬ್ಬನು ಕೋಣೆಯೊಳಗೆ ಇರುವನೆಂದು ತಿಳಿಯದೆ ಭಾಗು ಅರಚುತ್ತಾ ನೆಗೆಯುತ್ತಾ ಕೋಣೆಯೊಳಗೆ ಬರುವಳು. ಅವಳ ಈ ವರ್ತನೆ ಯಿಂದ ದೊರೆಗೆ ಸಿಟ್ಟು ಬಂದೀತೆಂದು ಹೆದರಿ ನಾಗಮ್ಮ ಮೂಗಿನ ಮೇಲೆ ಬೆರಳಿಟ್ಟು, ಸಣ್ಣ ದನಿಯಿಂದ—)

**ನಾಗಮ್ಮ**—ಶ್ ಭಾಗೂ!

(ಭಾಗು ಅಲ್ಲಿ ದೊರೆಯಿರುವುದನ್ನು ಕಂಡು ಕೂಡಲೇ ಲಜ್ಜೆಯಿಂದ ತನ್ನ ಮುಖವನ್ನು ತಾಯಿಯ ಸೆರಗಿನೊಳಗೆ ಮರೆಯಿಸುವಳು)

**ದೊರೆ**—(ಮಗುವನ್ನು ತೋರಿಸಿ) ಅದು ನಿನ್ನದೋ?

**ತ್ಯಾಂಪ**— ಹೌದು, ಬುದ್ಧಿ.

**ದೊರೆ**— ನೋಡು, ನಿನ್ನ ಕೆಲಸವನ್ನು ಜಾಗರೂಕತೆಯಿಂದ ಮಾಡು! ನಾನು ಹೇಳಿದುದು ನೆನಪಿನಲ್ಲಿರಲಿ! ಚರ್ಮವನ್ನು ಹಾಳು ಮಾಡಬೇಡ! ತಿಳಿಯಿತೋ? (ಇದೆಲ್ಲರ ಕಡೆಗೆ ಏನೂ **ಲಕ್ಷ್ಯ**ವಿಲ್ಲದೆ ತನ್ನ ಕೆಲಸದಲ್ಲಿಯೇ ಮಗ್ನನಾಗಿದ್ದ ಅಹಿಂತಕನು ಅವನ ದೃಷ್ಟಿಗೆ ಬಿದ್ದು) ಯಾರದು ಅಲ್ಲಿ?

**ತ್ಯಾಂಪ**— ಅವನು ನನ್ನ ಜತೆ ಕೆಲಸಗಾರ, ಬುದ್ಧಿ. ಬೂಟೀ ಸನ್ನು ಹೊಲಿಯುವ ಕೆಲಸವೆಲ್ಲ ಅವನದೇ.

**ದೊರೆ**— ಬೂಟೀಸು ಹೊಲಿಯುವವನು ಅವನೋ? (ಜಂಭದಿಂದ ಅವನಿದ್ದಲ್ಲಿಗೆ ಹೋಗಿ) ಏ! ನನ್ನ ಬೂಟೀಸನ್ನು ಹೊಲಿಯುವಾಗ್ಗೆ ನೀನು ಅಜಾಗ್ರತೆ ಮಾಡಬೇಡ! ಒಂದು ವರ್ಷದ ವರೆಗಾದರೂ ನನ್ನ ಬೂಟೀಸಿನ ಆಕಾರವಾಗಲೀ, ಹೊಲಿಗೆಯಾಗಲೀ ಹೋಗಬಾರದು! ಜೋಕೆ! . . . . ಏನು, ತಿಳಿಯಿತೋ?

(ಅಹಿಂತಕನು ತನ್ನ ಆಸನದಿಂದ ಮೆಲ್ಲಗೆ ಏಳುವನು. ಪ್ರೇಕ್ಷಕರಿಗೆ ಬೆನ್ನು ಹಾಕಿ ದೊರೆಯ ಹಿಂದುಗಡೆಯಿರುವ ಏನನ್ನೋ ನೋಡುತ್ತಿರುವಂತೆ ಸ್ತಬ್ಧನಾಗಿ ನಿಲ್ಲುವನು. ಇದನ್ನು ನೋಡಿ ನಾಗಮ್ಮ ಕೂಡಲೇ ತನ್ನ ಗಂಡನ ಕೈಯನ್ನು ಹಿಡಿಯುವಳು.)

**ನಾಗಮ್ಮ**—(ಸಣ್ಣ ದನಿಯಿಂದ, ತ್ಯಾಂಪನಿಗೆ) ನೋಡಿದಿರಾ ಅಲ್ಲಿ? ನೋಡಿ! ನಮ್ಮ ಅಹಿಂತಕನನ್ನು ನೋಡಿ! ಅವನ ಮುಖವನ್ನು ನೋಡಿ, ಅವನು ಪುನಃ ನಗುತ್ತಿದ್ದಾನೆ!

**ತ್ಯಾಂಪ**—(ಅರ್ಧ ತನ್ನಷ್ಟಕ್ಕೆ) ದೇವರೇ ನಮ್ಮನ್ನು ಕಾಪಾಡ ಬೇಕು!

**ನಾಗಮ್ಮ**—(ಮೊದಲಿನಂತೆಯೇ) ನೆನಪಿದೆಯೇ? ಆ ರಾತ್ರಿ ನನ್ನನ್ನು ನೋಡಿ ಅವನು ಹೇಗೆ ನಕ್ಕನೋ ಹಾಗೆಯೇ ನಗುತ್ತಿದ್ದಾನೆ! ಅವನ ಕಣ್ಣುಗಳನ್ನು ನೋಡಿ! ಅಯ್ಯೋ ನನಗೆ ನೋಡುವುದಕ್ಕಾಗುವುದಿಲ್ಲ.

**ದೊರಿ**—(ಸ್ವಲ್ಪ ಗಲಿಬಿಲಿಯಿಂದ) . . . . ಏ— ಏನು? . . . . ಯಾಕೆ ನಗುತ್ತೀಯೋ ಮಂಗ? ನಗುವುದಕ್ಕೇನಿದೆ? ನಿಲ್ಲಿಸು ನಿನ್ನ ನಗುವನ್ನು! ಇಲ್ಲವಾದರೆ . . . . (ಅವನನ್ನು ಹೊಡೆಯಲಿಕ್ಕೆಂದು ಹತ್ತಿರ ಹೋಗುವನು. ಆದರೆ ಅಹಿಂತಕನು ಕದಲುವುದಿಲ್ಲ. ದೊರೆಯು ಒಂದು ಕ್ಷಣ ಏನುಮಾಡಬೇಕೆಂದು ತಿಳಿಯದೆ ಮೆಲ್ಲಗೆ ಬಾಗಿಲ ಬಳಿಗೆ ಸರಿಯುವನು. ಅಲ್ಲಿಂದ) ನೀನಿಲ್ಲಿ ಮಂಗನಂತೆ ನಿಲ್ಲುವ ಬದಲು ನಾನು ಹೇಳಿದಂತೆ ನನ್ನ ಬೂಟೀಸನ್ನು ಮಾಡಿದರೆ, ನಿನ್ನ ಯಜಮಾನನಿಗೆ ೧೨ ರೂಪಾಯಿಗಳನ್ನು ಗಳಿಸಿದಂತಾಗುವುದು. ಮೇಲೆ ನಿನಗೂ ಸ್ವಲ್ಪ ಇನಾಮನ್ನು ಕೊಡುವೆನು. ಆದರೆ ಆ ಚರ್ಮವನ್ನು ನೀನು ಹಾಳು ಮಾಡಿದ್ದೇ ಆದರೆ ನಿನ್ನ ಯಜಮಾನನೊಂದಿಗೆ ನಿನ್ನನ್ನೂ ಜೈಲಿಗೆ ಕಳುಹಿಸುವೆನು ನೋಡು! . . . . (ತನ್ನ ಸೇವಕನಿಗೆ) ಬಾ, ಹೋಗುವ ನಾವು.

(ದೊರೆಯೂ ಅವನ ಸೇವಕರೂ ಹೋಗುವರು. ಅಹಿಂತಕನು ನಿಂತಲ್ಲಿಯೇ ಇರುವನು. ತ್ಯಾಂಪನೂ, ನಾಗಮ್ಮನೂ ಗೊಂಬೆಗಳಂತೆ ತಟಸ್ಥರಾಗಿ ಅವನನ್ನೇ ನೋಡುತ್ತಾ ನಿಲ್ಲುವರು.)

**ತ್ಯಾಂಪ**—(ಫಕ್ಕನೆ ಚರ್ಮದ ನೆನಪಾದಂತಾಗಿ) ಬಹಳ ಚಲೋ ಚರ್ಮವಿದು. ದೊರೆಯು ಹೇಳಿದ್ದು ಸುಳ್ಳಲ್ಲ. ನಾನು ಈ ತನಕ ಇಷ್ಟು ಚಲೋದಾಗಿ ಹದ ಮಾಡಿದ ಚರ್ಮವನ್ನು ನೋಡಿಲ್ಲ. ಇದನ್ನು ಹಾಳು ಮಾಡಿದರೆ ಯಾರಿಗಾದರೂ ಸಿಟ್ಟುಬರುವುದು ಸಹಜವೇ! ಇದನ್ನು ನೀನು ತುಂಡುಮಾಡಬೇಕು ಗೆಳೆಯಾ. ಆದರೆ ಜೋಕೆ! ಸ್ವಲ್ಪ ಅಜಾಗರೂಕತೆ ಮಾಡಿದರೆ ನಮ್ಮ ಮನೆಮಾರು ಹೋದೀತು. ದೊರೆ ಹೇಳಿದುದನ್ನು ಕೇಳಿದ್ದೀಯಲ್ಲ? ಇಕೋ. (ಬಹಳ ಜಾಗರೂಕತೆಯಿಂದ ಆ ಚರ್ಮವನ್ನು ಅಹಿಂತಕನ ಕೈಯಲ್ಲಿ ಕೊಡುವನು.) ಸ್ವಲ್ಪ ನಿಲ್ಲು. ಅವರ ಕಾಲಿನ ಅಳತೆಯನ್ನು ತಂದುಕೊಡುತ್ತೇನೆ. (ಅಳತೆಯನ್ನು ತರಲಿಕ್ಕೆ ಹೋಗುತ್ತಾ) ನಿನ್ನ ದೃಷ್ಟಿಯು ನನ್ನ ದೃಷ್ಟಿಗಿಂತ ಸೂಕ್ಷ್ಮವಿದೆ! ಅದಕ್ಕಾಗಿಯೇ ನೀನೇ ಅದನ್ನು ತುಂಡು ಮಾಡಬೇಕೆಂದು ನಾನು ಹೇಳಿದ್ದು. ಬೇಕಾದಷ್ಟನ್ನು ಮಾತ್ರ ತುಂಡುಮಾಡು!

(ಆದರೆ ತ್ಯಾಂಪನು ಆಳತೆಯನ್ನು ತರುವುದಕ್ಕೆ ಮುಂಚೆಯೇ ಅಹಿಂತಕನು ತನ್ನ ಕೈಯಲ್ಲಿದ್ದ ಚರ್ಮವನ್ನು ಮಡಚಿ ಎರಡು ತುಂಡುಗಳನ್ನಾಗಿ ಮಾಡಿ ಬಿಡುತ್ತಾನೆ.)

**ತ್ಯಾಂಪ**—(ದುಃಖ ಮತ್ತು ಆಕ್ರೋಶದಿಂದ) ಗೆಳೆಯಾ! ಏನನ್ನು ಮಾಡಿಬಿಟ್ಟೆ? (ಅಹಿಂತಕನು ಪುನಃ ಚರ್ಮವನ್ನು ತುಂಡುಮಾಡುವನು. ತ್ಯಾಂಪನು ಆವನಿದ್ದಲ್ಲಿಗೆ ಹಾರಿ ಆ ತುಂಡುಗಳನ್ನು ಇಸುಕೊಂಡು) ಇಲ್ಲ, ಹಾಳಾಯಿತು! ಚರ್ಮವೆಲ್ಲ ಹಾಳಾಯಿತು. ಇಷ್ಟು ಬೆಲೆಯುಳ್ಳ ಚರ್ಮವನ್ನು ನಾನಿನ್ನು ಎಲ್ಲಿಂದ ತರಲಿ? . . . . ಹಾ ದೇವ! ಇನ್ನು ನಮಗೆ ಜೈಲೇ ಗತಿ! . . . . ನಾಗೂ! ಭಾಗೂ! ನಮ್ಮ ಮನೆ ಮಾರೆಲ್ಲ ಹೋಯಿತು! ಆ ದೊರೆಯು ಸಿಟ್ಟಿನ ಆವೇಶದಲ್ಲಿ ನಮ್ಮ ನ್ನೆಲ್ಲ ಜೈಲಿಗೆ ಕಳುಹಿಸುವನು ಬಡವರಾದ ನಾವು ಅವನ ಸೇಡಿನ ಮುಂದೆ ಏನು ಮಾಡಬಲ್ಲೆವು? . . . . ಗೆಳೆಯಾ! ಗೆಳೆಯಾ! ಇಂದಿನ ತನಕ ನೀನು ಯಾವ ತಪ್ಪನ್ನೂ ಮಾಡಿರಲಿಲ್ಲ. ಇಂದೇ ನಾಯಿತು ನಿನಗೆ? (ಕೈಯಲ್ಲಿದ್ದ ಚರ್ಮದ ತುಂಡುಗಳನ್ನು ನೋಡುತ್ತಾ) ಇಲ್ಲ, ಪ್ರಯೋಜನವಿಲ್ಲ. ಚರ್ಮವೆಲ್ಲ ಹಾಳಾಗಿ ಹೋಯಿತು. ಇವುಗಳಿಂದ ಬೂಟೀಸು ಮಾಡುವುದು ಹೇಗೆ? ಒಬ್ಬೆ, ಸ್ಲಿಪ್ಪರ್ಸು ಏನಾದರೂ ಮಾಡಲಿಕ್ಕೆ ಬರಬಹುದೋ ಏನೋ! ನಿಜ, ಸ್ಲಿಪ್ಪರ್ಸು ಅಲ್ಲದೆ ಇವುಗಳಿಂದ ಮತ್ತೇನೂ ಸಾಧ್ಯವಾಗುವಂತಿಲ್ಲ . . . . (ದೊರೆಯ ಸೇವಕನು ತವಕದಿಂದ ಫಕ್ಕನೆ ಕೋಣೆಯನ್ನು ನುಗ್ಗುತ್ತಾನೆ.)

**ಸೇವಕ**—ಆ ಬೂಟೀಸಿಗಾಗಿ ನನ್ನನ್ನು ಕಳುಹಿಸಿರುವರು.

**ತ್ಯಾಂಪ**—(ಕನಸಿನಲ್ಲಿದ್ದಂತೆ) ಆ ಬೂಟೀಸಿಗಾಗಿ ನಿಮ್ಮನ್ನು ಕಳುಹಿಸಿರುವರು?

**ಸೇವಕ**—ಹೌದು! ಇನ್ನು ನಮ್ಮ ದೊರೆಗಳಿಗೆ ಅವುಗಳ ಅಗತ್ಯ ವಿಲ್ಲ.

**ತ್ಯಾಂಪ**—(ಮೊದಲಿನಂತೆಯೇ) ಇನ್ನು ನಿಮ್ಮ ದೊರೆಗಳಿಗೆ ಅವು ಗಳ ಅಗತ್ಯವಿಲ್ಲ?

**ಸೇವಕ**— ಹೌದು! ಅವರು ಈಗ ತಾನೇ ತೀರಿ ಹೋದರು!

**ತ್ಯಾಂಪ**
**ನಾಗಮ್ಮ** } — ಏನು? . . . . !

**ಸೇವಕ**— ಅವರು ಈಗ ತಾನೇ ತೀರಿಹೋದರು. ಇಲ್ಲಿಂದ ಹೋದ ಕೂಡಲೇ ತಮ್ಮ ದೊರೆಸಾನಿಯವರ ಒಟ್ಟಿಗೆ ಕಾರಿನಲ್ಲಿ ಕೂತು ಕೊಂಡು ಪೇಟೆಗೆ ಡ್ರೈವ್ ಮಾಡು ಅಂದರು. ನಾನು ಹಾಗೆಯೇ ಅರ್ಧ ಮೈಲು ಡ್ರೈವ್ ಮಾಡಿದ್ದೇನೋ ಇಲ್ಲವೋ, ಫಕ್ಕನೆ ನಮ್ಮ ದೊರೆಸಾನಿಯವರು ಚೀರಿದರು. ಕಾರನ್ನು ನಿಲ್ಲಿಸಬೇಕೆಂದು ಬೊಬ್ಬೆ ಹಾಕಿದರು. ನಾನು ಹಾಗೆಯೇ ಮಾಡಿದೆನು. ಕೆಳಗಿಳಿದು ನೋಡುವಾಗ ದೊರೆಗಳು ಸೀಟಿನಡಿಯಲ್ಲಿ ಬಿದ್ದಿದ್ದರು. ಅವರ ಪ್ರಾಣವು ಹೋಗಿತ್ತು. ಏನೋ ಹೃದ್ರೋಗದಿಂದಿರಬೇಕು . . . . ಈಗ ನನ್ನನ್ನು ನಿಮ್ಮ ಹತ್ತಿರಕ್ಕೆ ದೊರೆಸಾನಿಯವರು ಕಳುಹಿಸಿರುವರು. ಅವರು ಹೇಳಿದ್ದಾರೆ— ಆ ಚರ್ಮದಿಂದ ಬೂಟೀನನ್ನು ಮಾಡುವುದು ಬೇಡ, ಅದರ ಬದಲು ಶವದ ಕಾಲಿಗೆ ಸ್ಲಿಪ್ಪರ್ಸು ಮಾಡಬೇಕೆಂದು.

**ತ್ಯಾಂಪ**— (ನಂಬಲಾರದವನಂತೆ ಮೆಲ್ಲಗೆ) ಏನು, ಶವದ ಕಾಲಿಗೆ ಸ್ಲಿಪ್ಪರ್ಸು ಮಾಡಬೇಕೇ?

**ಸೇವಕ**— ಹೌದು, ದೊರೆಸಾನಿಯವರ ಆಜ್ಞೆ. ಸ್ಲಿಪ್ಪರ್ಸಿಗಾಗಿ ನಾನು ಬೆಳಗ್ಗೆ ಬರುತ್ತೇನೆ. ಅಷ್ಟರೊಳಗೆ ತಯಾರು ಮಾಡಿ ಇಡಿ. ಇನ್ನು ನಾನು ಹೋಗುತ್ತೇನೆ. ನಮಸ್ಕಾರ. (ಹೋಗುವನು.)

**ತ್ಯಾಂಪ**— ಶವದ ಕಾಲಿಗೆ ಸ್ಲಿಪ್ಪರ್ಸು! . . . .

(**ತ್ಯಾಂಪನೂ ನಾಗಮ್ಮನೂ ಅಹಿಂತಕನನ್ನೇ ಎವೆ ಇಕ್ಕದೆ ನೋಡುತ್ತಿರುವರು, ಅವನಾದರೋ ಆ ಚರ್ಮದ ತುಂಡುಗಳನ್ನು ಮಾತಿಲ್ಲದೆ ತ್ಯಾಂಪನ ಕೈಯಿಂದ ತೆಗೆದುಕೊಂಡು ಕೂಡಲೇ ಅವುಗಳಿಂದ ಸ್ಲಿಪ್ಪರ್ಸು ಮಾಡುವುದಕ್ಕೆ ತೊಡಗುವನು.**

**ನಟರಂಗದ ಮೇಲೆ ಕತ್ತಲು ಹರಿಯುವುದು.**)

## ದೃಶ್ಯ ೩

[ನಟರಂಗದ ಮೇಲೆ ಪುನಃ ಬೆಳಕು ಹರಿಯುವುದು. ಮೊದಲಿನದೇ ದೃಶ್ಯ. ಆದರೆ ಮೊದಲಿನಷ್ಟು ಬಡತನ ಈಗ ಕಾಣುವುದಿಲ್ಲ. ಕೋಣೆಯೊಳಗಿದ್ದ ಒಲೆಯೂ, ಮಣ್ಣಿನ ಪಾತ್ರೆಗಳೂ ಈಗ ಕಾಣುವುದಿಲ್ಲ. ಅವುಗಳಿಗೆ ಈಗ ಬೇರೊಂದು ಕೊರಡಿಯಿದೆ. ತ್ಯಾಂಪಣ್ಣನೂ ಅಹಿಂತಕನೂ ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿರುವರು. ಭಾಗು ಬಣ್ಣದ ಸಾಮಾನುಗಳನ್ನು ತೆಗೆದುಕೊಂಡು ನೆಲದ ಮೇಲೆ ಒಂದು ಕಡೆ ಆಡುತ್ತಿರುವಳು. ನಾಗಮ್ಮ ಮನೆಗೆಲಸ ನಿಮಿತ್ತ ಕೋಣೆಯೊಳಗೆ ಆಗಾಗ್ಗೆ ಸುಳಿದಾಡುತ್ತಿರುವಳು.

ಸಂಜೆಯ ಸಮಯ. ಬಾಗಿಲಲ್ಲಿ ಯಾರೋ ಬಂದಂತೆ ಸದ್ದಾಗುವುದು. ಅದನ್ನು ಕೇಳಿದ ಕೂಡಲೇ ತ್ಯಾಂಪಣ್ಣನು ಒಂದು ಕ್ಷಣಕ್ಕೆ ತನ್ನ ಕೆಲಸವನ್ನು ನಿಲ್ಲಿಸುವನು. ಬಾಗಿಲಲ್ಲಿ ಸದ್ದು ಇನ್ನು ಸ್ವಲ್ಪ ಗಟ್ಟಿಯಾಗುವುದು. ಅದನ್ನು ಕೇಳಿ ತ್ಯಾಂಪಣ್ಣನು—]

**ತ್ಯಾಂಪ**—ಯಾರಲ್ಲಿ? ಇಂದು ಇನ್ನು ಕೆಲಸಮಾಡಲು ಸಾಧ್ಯವಿಲ್ಲ. ಹೊತ್ತೆಲ್ಲಾ ಹೋಯಿತು.

**ನಾಗಮ್ಮ**—ಭಾಗೂ, ನೋಡಮ್ಮ ಬಾಗಿಲಲ್ಲಿ ಯಾರೆಂದು.

(ಭಾಗು ಬಾಗಿಲನ್ನು ತೆರೆದು ನೋಡುವಳು. ಯಾರೂ ಕಾಣುವುದಿಲ್ಲ. ಬಂದವರು ಹೋಗಿರಬೇಕೆಂದು ಅವರನ್ನು ಹಿಂಬಾಲಿಸಿ ಹೋಗುವಳು. ಸ್ವಲ್ಪ ಸಮಯದಲ್ಲಿಯೇ ಒಳಗೆ ಬರುವಳು.)

**ಭಾಗು**—ಯಾರೋ ಒಬ್ಬ ಹೆಂಗುಸಮ್ಮಾ. ಜತೆಯಲ್ಲಿ ಇಬ್ಬರು ಮಕ್ಕಳಿರುವರು. ಇಬ್ಬರೂ ಹುಡುಗಿಯರು. ಒಬ್ಬಳ ಕಾಲು ಸ್ವಲ್ಪ ಕುಂಟು ಎಂದು ಕಾಣುತ್ತದೆ.

(ಅಹಿಂತಕನು ಈ ಮಾತನ್ನು ಕೇಳುತ್ತಲೇ ತನ್ನ ಆಸನದಿಂದ ಛಕ್ಕನೆ ಎದ್ದು ಬಾಗಿಲ ಕಡೆಗೆ ತವಕದಿಂದ ನೋಡುತ್ತಾನೆ. ಹೆಂಗುಸೊಬ್ಬಳು ಬಾಗಿಲಲ್ಲಿ ಕಾಣಿಸಿಕೊಳ್ಳುತ್ತಾಳೆ. ಅವಳ ಜತೆಯಲ್ಲಿ ಇಬ್ಬರು ಸಣ್ಣ ಹುಡುಗಿಯರಿರುವರು. ಒಬ್ಬಳ ಕಾಲು ಸ್ವಲ್ಪ ಕುಂಟು. ಇವರನ್ನೆಲ್ಲ ನೋಡಿದ ಕೂಡಲೇ ಅಹಿಂತಕನ ಹೃದಯದಲ್ಲಿ ಒಂದು ವಿಚಿತ್ರ ರೀತಿಯ ವೇದನೆಯುಂಟಾಗುವುದು.)

**ನಾಗಮ್ಮ**—ಬನ್ನಿ ಅಮ್ಮಾ, ಒಳಗೆ ಬನ್ನಿ.

**ತ್ಯಾಂಪ**—ಏನು ಕೆಲಸವಾಗಬೇಕು, ತಾಯಿಾ?

**ಹೆಂಗುಸು**—ಈ ಮಕ್ಕಳಿಗೆ ಪಾಪಾಸು ಮಾಡಿಸಬೇಕಾಗಿತ್ತು.

**ತ್ಯಾಂಪ**—ಯಾವ ತರದ್ದು, ತಾಯಿಾ?

**ಹೆಂಗುಸು**—ಯಾವ ತರದ್ದೇ ಆಗಲಿ, ಒಳ್ಳೇದಿದ್ದರಾಯಿತು. ನೋಡಲಿಕ್ಕೆ ಚಂದವಾಗಿರಬೇಕು. ಕಾಲನ್ನು ಕಚ್ಚಬಾರದು; ಬಿಗಿಯಾಗಕೂಡದು. ಅಷ್ಟೆ! ಆದೀತೇ?

**ತ್ಯಾಂಪ**—ಆದೀತು ತಾಯಿ. ಈ ನಮ್ಮ ಅಹಿಂತಕ, ನನ್ನ ಜತೆ ಕೆಲಸಗಾರ, ಮಕ್ಕಳಿಗೆ ಪಾಪಾಸು ಮಾಡುವುದರಲ್ಲಿ ಬಹಳ ನಿಪುಣನಿರುವನು.

(ಅಹಿಂತಕನು ಆ ಬಾಲಿಕೆಯರನ್ನು ಎವೆಯಿಕ್ಕದೆ ನೋಡುತ್ತಾ ನಿಲ್ಲುವನು. ಇದರಿಂದ ಉಳಿದವರೆಲ್ಲರ ದೃಷ್ಟಿಯು ಅವನ ಮೇಲೆ ಸಹಜವಾಗಿ ಹೋಗುವುದು. ಇದನ್ನು ನೋಡಿ ಲಜ್ಜೆಯಿಂದ ಅವನು ಹಿಂದಕ್ಕೆ ಸರಿಯುವನು.)

**ಹೆಂಗುಸು**—ಹಾಗಾದರೆ ಅವರ ಕಾಲಿನ ಅಳತೆಯನ್ನು ತೆಗೆಯುವಿಯೋ?

**ತ್ಯಾಂಪ**—ಆದೀತು ತಾಯಿ.

**ಹೆಂಗುಸು**—(ಕುಂಟ ಹುಡುಗಿಯನ್ನು ತೊಡೆಯ ಮೇಲೆ ಕುಳ್ಳಿರಿಸಿ,) ಈ ಮಗುವಿನ ಎರಡು ಕಾಲುಗಳ ಅಳತೆಯನ್ನೂ ಈಗ ತೆಗೆಯಬೇಕಾಗುವುದು. ಈ ಎಡಕಾಲಿಗೆ ಒಂದು ಪಾಪಾಸು, ಬಲಕಾಲಿಗೆ ಮೂರು ಪಾಪಾಸುಗಳನ್ನು ಮಾಡು. ಈ ಮಗುವಿಗೆ ಎರಡು ಜೋಡಿ ಬೇಕು. ಅವಳ ಕಾಲಿನ ಅಳತೆಯನ್ನು ಬೇರೆ ತೆಗೆಯುವುದು ಬೇಡ. ಅವರಿಬ್ಬರ ಕಾಲುಗಳೂ ಒಂದೇ ಸಮನಾಗಿವೆ. ಇವರು ಅವಳಿ ಜವಳಿ ಮಕ್ಕಳು

**ತ್ಯಾಂಪ**—(ಕುಂಟ ಮಗುವಿನ ಕಾಲುಗಳ ಅಳತೆಯನ್ನು ತೆಗೆಯುತ್ತಾ) ಹೇಗಾಯಿತು ತಾಯಿ, ಇದು? ಬಹಳ ಚಲೋ ಮಗು! ಹುಟ್ಟುವಾಗಲೇ ಕಾಲು ಈ ರೀತಿಯಲ್ಲಿತ್ತೇ?

**ಹೆಂಗುಸು**—ಇಲ್ಲ. ಹುಟ್ಟುವಾಗಿರಲಿಲ್ಲ. ಅವಳ ತಾಯಿಯಿಂದಲೇ ಈ ಮಗುವಿನ ಕಾಲು ಹೀಗಾಯಿತು.

**ನಾಗಮ್ಮ**—ಹಾಗಾದರೆ ತಾವು ಈ ಮಕ್ಕಳ ತಾಯಂದಿರಲ್ಲವೇ?

**ಹೆಂಗುಸು**—ಅಲ್ಲ. ಅವರ ತಾಯಿಯೂ ಅಲ್ಲ; ಅವರ ಸಂಬಂಧಿಕಳೂ ಅಲ್ಲ. ಅವರು ನನಗೆ ತೀರಾ ಅಪರಿಚಿತರಾಗಿದ್ದರು. ಅವರನ್ನು ಸಾಕಿ ಸಲಹಿದ್ದು ಮಾತ್ರ ನಾನು.

**ನಾಗಮ್ಮ**—ಅವರು ತಮ್ಮ ಮಕ್ಕಳಲ್ಲ? ಆದರೂ ಅವರ ಮೇಲೆ ತಮಗೆ ಅಷ್ಟು ಮಮತೆಯೇ?

**ಹೆಂಗುಸು**—ಅವರನ್ನು ಪ್ರೀತಿಸದೆ ನಾನೇನು ಮಾಡಲಿ? ಇಬ್ಬರನ್ನೂ ಚಿಕ್ಕಂದಿನಿಂದ ಸಾಕಿ ಸಲಹಿದ್ದೇನೆ. ನನಗೂ ಒಂದು ಮಗುವಿತ್ತು. ಆದರೆ ಅದನ್ನು ಪ್ರೀತಿಸಿ ದೊಡ್ಡದಾಗಿ ಮಾಡುವ ಸುಖವನ್ನು ದೇವರು ನನಗೆ ದಯೆಪಾಲಿಸಲಿಲ್ಲ. ಈಗ ಈ ಮಕ್ಕಳೇ ನನ್ನ ಪ್ರಾಣಪದಕಗಳಾಗಿವೆ.

**ನಾಗಮ್ಮ**—ಯಾರ ಮಕ್ಕಳಿವರು, ತಾಯಿ?

(ಇಷ್ಟರೊಳಗೆ ಭಾಗು ಆ ಇನ್ನೊಂದು ಮಗುವಿನ ಸ್ನೇಹವನ್ನು ಬೆಳೆಸಿಕೊಂಡು ಅವಳೊಡನೆ ತನ್ನ ಬಣ್ಣದ ಆಟದ ಸಾಮಾನಿನೊಂದಿಗೆ ಆಡುವಳು. ಕುಂಟ ಮಗುವಿನ ಕಾಲುಗಳ ಆಳತೆಯನ್ನು ತೆಗೆದಕೂಡಲೇ ಅವಳೂ ಅಲ್ಲಿಗೆ ಹೋಗಿ ಅವರೊಡನೆ ಬೆರೆತು ನೆಲದ ಮೇಲೆ ಆಡುವಳು.

ಸಂಜೆಯು ಸಮಯವು ಮೀರುತ್ತಾ ಹೋಗುವುದು. ನಟರಂಗದಲ್ಲಿ ಮೆಲ್ಲಗೆ ಕತ್ತಲು ಕವಿಯುವುದು. ಕೋಣೆಯ ಗೋಡೆಗೆ ತಗಲಿಸಿದ್ದ ಒಂದು ಸಣ್ಣ ಚಿಮಣಿ ದೀಪವು ಸುತ್ತಲೆಲ್ಲ ತನ್ನ ಕಿರಿದಾದ ಪ್ರಕಾಶವನ್ನು ಬೀರುವುದು. ಅಹಿಂತಕನು ಕೋಣೆಯ ಅತಿ ಕತ್ತಲಾದ ಭಾಗದಲ್ಲಿ ಹಿಂಜರಿದು ನಿಂತುದರಿಂದ ಅವನು ಪ್ರೇಕ್ಷಕರಿಗೆ ಸ್ಪಷ್ಟವಾಗಿ ಕಾಣಿಸುವುದಿಲ್ಲ.)

**ಹೆಂಗುಸು**—ಈ ಬಡ ಮಕ್ಕಳ ತಂದೆ ತಾಯಿಗಳಿಬ್ಬರೂ ಇವರು ಹುಟ್ಟಿದ ಒಂದೇ ವಾರದೊಳಗೆ ತೀರಿಹೋದರು. ನಾನು ಅವರಿದ್ದ ಹಳ್ಳಿ

ಯಲ್ಲೇ ವಾಸಿಸುತ್ತಿದ್ದೆನು. ಈ ಮಕ್ಕಳ ತಂದೆಯು ಮರ ಕಡಿಯುವವನು ತನ್ನ ಕುಟುಂಬ ಪೋಷಣೆಯನ್ನು ಅದರಿಂದಲೇ ಸಾಗಿಸುತ್ತಿದ್ದನು. ಒಂದು ಕೆಟ್ಟ ದಿನ ಮರವನ್ನು ಕಡಿಯುತ್ತಿದ್ದಾಗ ಮರವು ಅವನ ಮೇಲೆಯೇ ಬಿದ್ದು ಅವನನ್ನು ಜಜ್ಜಿಬಿಟ್ಟಿತು. ಅವನನ್ನು ಎತ್ತಿಕೊಂಡು ಅವನ ಗುಡಿಸಲಿನೊಳಗೆ ಒಯ್ಯುವಷ್ಟರಲ್ಲೇ ಅವನು ತೀರಿಹೋದನು. ಅವನ ಹೆಂಡತಿಯಾದರೋ ಆಗ್ಗೆ ತುಂಬಿದ ಗರ್ಭಿಣಿ. ಈ ಅನಾಹುತಗಳಾದ ಮೂರೇ ದಿನಗಳಲ್ಲಿ ಈ ಮಕ್ಕಳನ್ನು ಹೆತ್ತಳು. ಮನೆಯೊಳಗೆ ಅವಳ ಆರೈಕೆಯನ್ನು ನೋಡಲಿಕ್ಕೆ ಯಾರೂ ಇರಲಿಲ್ಲವಂತೆ ಇದನ್ನು ಕೇಳಿ ನಾನು ಮರುದಿನ ಬೆಳಗ್ಗೇನೇ ಅವಳ ಗುಡಿಸಲಿಗೆ ಹೋದೆ. ಆದರೆ ಕಾರ್ಯವು ಮುಗಿದು ಹೋಗಿತ್ತು. ಅವಳು ಆಗಲೇ ಈ ಲೋಕವನ್ನು ಬಿಟ್ಟು ಹೋಗಿದ್ದಳು. ಅವಳ ಶರೀರವೆಲ್ಲ ತಣ್ಣಗಾಗಿ ಹೋಗಿತ್ತು. ಮರಣ ಸಂಕಟದಲ್ಲಿ ಅವಳು ಈ ಮಗುವಿನ ಮೇಲೆ ಹೊರಳಾಡಿರ ಬೇಕು. ಹಾಗಾಗಿ ಇವಳ ಕಾಲೊಂದು ಕುಂಟು. . . . . ನೆರೆಕರೆ ಯವರು ಬಂದು ಅವಳ ಶವಸಂಸ್ಕಾರಗಳನ್ನೆಲ್ಲ ಮಾಡಿದರು. ಆದರೆ ಆಗ ತಾನೇ ಬೆಳಕು ಕಂಡ ಈ ಮಕ್ಕಳ ಗತಿಯೇನು? ಅಲ್ಲಿ ಬಂದ ಹೆಂಗುಸರ ಪೈಕಿ ಮೊಲೆಯುಣಿಸುವವಳು ನಾನೊಬ್ಬಳೇ ಆಗಿದ್ದೆ. ಅಂದಿ ನಿಂದ ಈ ಎರಡು ಮಕ್ಕಳಿಗೂ ನನ್ನ ಮಗುವಿನೊಂದಿಗೆ ಮೊಲೆಯುಣಿಸ ತೊಡಗಿದೆನು. ಆದರೆ ದೇವರ ಲೀಲೆಯು ವಿಚಿತ್ರವಾದುದು. ಇವು ಗಳು ಬೆಳೆದುವು. ನನ್ನ ಮಗುವು ಎರಡು ವರ್ಷ ತುಂಬುತ್ತಲೇ ನನ್ನನ್ನು ಬಿಟ್ಟು ಹೋಯಿತು. ನನಗೂ ಆ ಮೇಲೆ ಬೇರೆ ಮಕ್ಕಳು ಹುಟ್ಟಲಿಲ್ಲ. ಹೀಗಾಗಿ ಇವುಗಳೇ ಈಗ ನನ್ನ ಮಕ್ಕಳು. ಇವುಗಳೇ ಈಗ ನನ್ನ ಪ್ರಾಣ ಪದಕಗಳು. ಇವುಗಳನ್ನು ಪ್ರೀತಿಸದೆ ನಾನು ಹೇಗೆ ಇರಲಿ? . . . . (ಕೂತಲ್ಲಿಂದ ಎದ್ದು, ನೆಲದ ಮೇಲೆ ಆಡುತ್ತಿದ್ದ ಮೂರು ಮಕ್ಕಳನ್ನು ನೋಡಿ) ನಿನಗೂ ಒಬ್ಬ ಚಲೋ ಮಗಳಿರುವಳು. ನಾವಿ ಬ್ಬರೂ ಧನ್ಯರು! . . . . ಬನ್ನಿ ಮಕ್ಕಳೇ, ಹೋಗೋಣ, ಕತ್ತಲಾಯಿತು.

(ಕುಂಟ ಮಗುವಿನ ಕೈಯನ್ನು ಹಿಡಿಯುವಳು.)

**ನಾಗವ್ವ**—ಹಾಗಾದರೆ ತಾವು ಈ ಊರಿನವರಲ್ಲ?

**ಹೆಂಗುಸು**—ಅಲ್ಲ. ಇಲ್ಲಿ ನಮ್ಮ ಬೀಗರು ಇದ್ದಾರೆ. ಅವರ ಒತ್ತಾಯದಿಂದ ಎರಡು ದಿನಕ್ಕೆ ಇಲ್ಲಿ ಬಂದಿದ್ದೇನೆ. ಈ ಮಕ್ಕಳಿಗೋಸ್ಕರ ಪಾಪಾಸು ಮಾಡಿಸಲಿಕ್ಕೆ ಇಲ್ಲೇ ಒಳ್ಳೇದೆಂದು ಹೇಳಿದ್ದು ಅವರೇ . . . . ಅವು ಬೇಗ ಆಗಬಹುದಲ್ಲವೇ?

**ತ್ಯಾಂಪ**—ಹೌದು ತಾಯಿ. ನಾಳ, ತಪ್ಪಿದರೆ ನಾಡದು ಬೆಳಗ್ಗೆ ಕೊಡುತ್ತೇನೆ.

**ಹೆಂಗುಸು**—ಆದೀತು. ಹಾಗಾದರೆ ನಾನಿನ್ನು ಹೋಗುತ್ತೇನೆ.

**ನಾಗವ್ವ**—(ಬಾಗಿಲನ್ನು ತೆಗೆದು) ಹೊರಗೆ ಕತ್ತಲು. ತಮಗ ದಾರಿ ತಿಳಿಯಲಿಕ್ಕಿಲ್ಲ.

**ಹೆಂಗುಸು**—ಮಾರ್ಗ ಮುಟ್ಟುವ ವರೆಗೆ ಸ್ವಲ್ಪ ತೋಂದರೆ ಅಷ್ಟೆ.

**ನಾಗವ್ವ**—(ತ್ಯಾಂಪಣ್ಣನಿಗೆ) ಇವರ ಸಂಗಡ ಸ್ವಲ್ಪ ಹೋಗಿ.

(ತ್ಯಾಂಪಣ್ಣನು ಕುಂಟ ಮಗುವನ್ನು ಹಿಡಿದೆತ್ತಿ ಕೊಳ್ಳುತ್ತಾನೆ.)

**ನಾಗವ್ವ**—ನಿಮ್ಮ ಪಾಪಾಸನ್ನು ತೆಗೆದುಕೊಂಡು ಹೋಗಲಿಕ್ಕೆ ಬನ್ನಿ ಮಕ್ಕಳೇ! ನಮ್ಮ ಭಾಗೂನ ಹತ್ತಿರ ಆಡಬಹುದು.

**ಭಾಗು**—ಅವ್ವಾ, ಅಪ್ಪನೊಂದಿಗೆ ನಾನೂ ಹೋಗಲೇ?

**ನಾಗವ್ವ**—ಹೂಂ . . . . ಆದರೆ ಕತ್ತಲು (**ಹೋಗುವವರಿಗೆ**) ಸ್ವಲ್ಪ ನಿಲ್ಲಿ. ನಾನು ಬೆಳಕು ಹಿಡಿಯುತ್ತೇನೆ.

(ನಾಗವ್ವ ದೀಪವನ್ನು ಗೋಡೆಯಿಂದ ತೆಗೆದು ಬಾಗಿಲ ಹೊರಗೆ ತೆಗೆದುಕೊಂಡು ಹೋಗುತ್ತಾಳೆ. ದಾರಿಯು ಸರಿಯಾಗಿ ಕಾಣಿಸುವಂತೆ ತಲೆಯ ಮೇಲೆ ಎತ್ತಿ ಹಿಡಿದು ಬಾಗಿಲ ಹೊರಗೆ ನಿಲ್ಲುತ್ತಾಳೆ.)

**ನಾಗವ್ವ**—ಜೋಕೆ! ಜಾಗರೂಕತೆಯಿಂದ ಹೋಗಿ! ಅಲ್ಲೊಂದು ಮುಳ್ಳಿನ ಬೇಲಿಯಿದೆ!

(ಅವಳೂ ದೀಪವನ್ನು ತೆಗೆದುಕೊಂಡು ಅವರ ಹಿಂದೆ ಹೋಗುವಳು. ಈಗ ಕೋಣೆಯೊಳಗೆಲ್ಲ ಕತ್ತಲು.

ಆದರೆ ಅಹಿಂತಕನು ಕೂತುಕೊಂಡ ಮೂಲೆಯಿಂದ ಒಂದು ವಿಚಿತ್ರವಾದ ದೈವಿಕ ಪ್ರಕಾಶವು ಹೊರಡುವುದು. ಈ ಪ್ರಕಾಶವು ಕ್ರಮೇಣ ಬೆಳೆಯುತ್ತ ಹೋಗಿ ಮಿರುಗುಟ್ಟುವುದು. ಈ ದೈವಿಕ ಪ್ರಕಾಶದ ಮಧ್ಯದಲ್ಲಿ ಅಹಿಂತಕನು ತೇಜೋಮಯನಾಗಿ ಕಾಣುವನು.

ನಾಗಮ್ಮ ದೀಪವನ್ನು ಹಿಡಿದುಕೊಂಡು ಕೋಣೆಯೊಳಗೆ ಬರುವಳು. ದೀಪವನ್ನು ಗೋಡೆಗೆ ತಗಲಿಸಿ ಅವಳು ತಿರುಗಿದಾಕ್ಷಣ, ತೇಜಸ್ವಿಯಾಗಿ ಹೊಳೆಯುತ್ತಿದ್ದ ಅಹಿಂತಕನು ಅವಳ ದೃಷ್ಟಿಗೆ ಬೀಳುವನು.)

**ನಾಗಮ್ಮ**—(ಭೀತಿಯಿಂದಲೂ ಕಂಪಿಸುವ ಸ್ವರದಿಂದಲೂ, ಗಂಡನನ್ನು ಕೂಗುವಳು.) ಓ ಇವರೇ! ಬನ್ನಿ! ಬೇಗ ಬನ್ನಿ! ಬೇಗ ಒಂದು ಸಲ ಇಲ್ಲಿ ಬನ್ನಿ!

(ತ್ಯಾಂಪನೂ ಭಾಗುವೂ ಅವಸರದಿಂದ ಓಡಿಬರುವರು.)

**ತ್ಯಾಂಪ**—ಏನು ನಾಗೂ?

**ಭಾಗು**—ಏನಮ್ಮಾ?

**ತ್ಯಾಂಪ**—(ಅಹಿಂತಕನನ್ನು ನೋಡಿ, ಹೆದರಿಕೆಯಿಂದ) ದೇವರೇ ನಮ್ಮನ್ನೀಗ ಕಾಪಾಡಬೇಕು!

**ನಾಗಮ್ಮ**—ನೋಡಿದಿರಾ? . . . . ನಮ್ಮ ಅಹಿಂತಕನು ನಗುತ್ತಾನೆ! . . . ಪುನಃ ನಗುತ್ತಾನೆ! . . . ಮೂರನೆಯ ಬಾರಿಗೆ ನಗುತ್ತಾನೆ! . . . ಇಲ್ಲ, ಇಲ್ಲ, ನನಗೆ ನೋಡುವುದಕ್ಕಾಗುವುದಿಲ್ಲ! (ಭೀತಿಯಿಂದ ತನ್ನ ಮುಖವನ್ನು ಕೈಗಳಿಂದ ಮುಚ್ಚಿಕೊಳ್ಳುವಳು.)

**ತ್ಯಾಂಪ**—(ಕಂಪಿಸುವ ಸ್ವರದಿಂದ) ಗೆಳೆಯಾ . . . . ಗೆಳೆಯಾ . . . . ನಿನ್ನನ್ನು ನೋಡಿ ನಮಗೆ ಭಯವಾಗುತ್ತದೆ. ಈ ಪ್ರಕಾಶವು ಎಲ್ಲಿಂದ? ನಿನ್ನ ಮುಖವು ಹೀಗೇಕೆ ಬೆಳಗುತ್ತಿದೆ? . . . .

**ಅಹಿಂತಕ**—ಗೆಳೆಯರೇ ಹೆದರಬೇಡಿ. ನಾನು ಈ ತನಕ ಒಂದು ಕಠಿಣವಾದ ಶಾಪಕ್ಕೆ ಗುರಿಯಾಗಿದ್ದೆ. ಈ ಕ್ಷಣ ನಾನು ಅದರಿಂದ ಮುಕ್ತನಾದೆ. ಆದುದರಿಂದಲೇ ನನ್ನ ಮುಖವು ಹೀಗೆ ಬೆಳಗುತ್ತಿದೆ.

**ತ್ಯಾಂಪ**—ಶಾಪ . . . . ಶಾಪ? ನನಗೆ ಅರ್ಥವಾಗುವುದಿಲ್ಲ. ಗೆಳೆಯಾ, ಈಗಲಾದರೂ ಹೇಳು . . . . ನೀನು ಯಾರು? ಎಲ್ಲಿಂದ ಬಂದೆ? ಇಲ್ಲಿಗೇತಕ್ಕೆ ಬಂದೆ? . . . . ನೀನು ಈ ವಿಚಿತ್ರ ರೀತಿಯಿಂದ ನಗುವುದೇಕೆ? ಹಿಂದೆ ಎರಡು ಸಲ ಇದೇ ರೀತಿಯಲ್ಲಿ ನಗಾಡಿದ್ದೇಕೆ? . . . . ಗೆಳೆಯಾ, ಈಗಲಾದರೂ ಹೇಳು! . . . . ನನಗೆ ಒಂದೂ ಅರ್ಥವಾಗುವುದಿಲ್ಲ!

**ಅಹಿಂತಕ**—ಗೆಳೆಯರೇ, ನೀವು ಎಣಿಸಿದಂತೆ ನಾನು ಮಾನವನಲ್ಲ . . . .

**ತ್ಯಾಂಪ**<br>**ನಾಗಮ್ಮ** } —ಮಾನವನಲ್ಲ . . . . ?

**ಅಹಿಂತಕ**—ಅಲ್ಲ . . . . ಗೆಳೆಯರೇ, ಹೆದರಬೇಡಿ. ನಾನೊಬ್ಬ ಯಮದೂತನು . . . .

**ತ್ಯಾಂಪ**<br>**ನಾಗಮ್ಮ** } —(ಆಶ್ಚರ್ಯ ಮತ್ತು ಭೀತಿಯಿಂದ) ಯಮದೂತನು?

**ಅಹಿಂತಕ**—ಅಹುದು, ಯಮದೂತರಲ್ಲೊಬ್ಬ . . . . (**ಇದನ್ನು ಕೇಳಿದ ಕೂಡಲೇ ತ್ಯಾಂಪ, ನಾಗಮ್ಮ, ಭಾಗು—ಮೂವರೂ ಭಯಭಕ್ತಿಯಿಂದ ಅಹಿಂತಕನನ್ನು ನಮಸ್ಕರಿಸುವರು.**) . . . . ನಾನೊಂದು ಸಲ ನನ್ನ ಸ್ವಾಮಿಯ ಆಜ್ಞೆಯನ್ನು ಮೀರಿದ್ದಕ್ಕೆ ಈ ಶಾಪಕ್ಕೆ ಗುರಿಯಾದೆನು. ಒಬ್ಬಳು ಹೆಂಗುಸಿನ ಆತ್ಮವನ್ನು ಕೊಂಡು ಬಾ ಎಂದು ನನ್ನ ಸ್ವಾಮಿಯು ನನಗೆ ಆಜ್ಞಾಪಿಸಿದ್ದನು. ನಾನು ಅವಳಿದ್ದಲ್ಲಿಗೆ ಹೋದೆನು. ಅವಳು ಆಗ ತಾನೇ ಅವಳಿ ಜವಳಿ ಮಕ್ಕಳನ್ನು ಹೆತ್ತಿದ್ದಳು. ನನ್ನನ್ನು ನೋಡುತ್ತಲೇ ಅವಳು ಬಹಳವಾಗಿ ರೋದಿಸಹತ್ತಿದಳು. ತನ್ನ ಗಂಡನು ಮೂರು ದಿನಗಳ ಹಿಂದೆಯೇ ತೀರಿಹೋಗಿರುವನೆಂದೂ, ಈಗ ತಾನೂ ಸತ್ತರೆ ಆ ದಿಕ್ಕಿಲ್ಲದ ಮಕ್ಕಳನ್ನು ಸಾಕಿ ಸಲಹುವವರು ಯಾರೂ ಇಲ್ಲವೆಂದೂ, ಅಂತಹ ಎಳೇ ಕೂಸುಗಳು ತಂದೆತಾಯಿಗಳಿಲ್ಲದೆ ಬದುಕ

ಲಾರವು ಎಂದೂ ಬಹಳವಾಗಿ ಮೊರೆ ಇಟ್ಟಳು. ನನ್ನ ಹೃದಯವು ಕರಗಿತು. ನನ್ನ ಕರ್ತವ್ಯವನ್ನು ಮಾಡದೇನೇ ಯಮಲೋಕಕ್ಕೆ ಮರಳಿ, ನಡೆದ ಸಂಗತಿಯನ್ನು ನನ್ನ ಸ್ವಾಮಿಗೆ ತಿಳಿಸಿದೆನು. ಆದರೆ ನನ್ನ ಸ್ವಾಮಿಯಾದರೋ ಕೋಪಾವೇಷದಿಂದ 'ನೀನು ಈಗಲೇ ಹಿಂತಿರುಗಿ ಹೋಗಿ ಆ ಹೆಂಗುಸಿನ ಆತ್ಮವನ್ನು ತರಬೇಕು; ಅದಲ್ಲದೆ ಈ ಮೂರು ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕು: **ಮನುಷ್ಯನಲ್ಲಿ ನೆಲಸಿಕೊಂಡಿರುವುದು ಯಾವುದು? ದೇವರು ಮನುಷ್ಯನಿಗೆ ದಯೆಪಾಲಿಸದ ಸಂಗತಿ ಯಾವುದು? ಮತ್ತು ಮನುಷ್ಯನ ಬಾಳ್ವೆಯು ಏತರಿಂದ?** ಈ ಮೂರು ಪ್ರಶ್ನೆಗಳಿಗೆ ಉತ್ತರ ಹುಡುಕಿ ವಿಶ್ವಧರ್ಮದ ಗುಟ್ಟನ್ನು ತಿಳಿಯುವ ವರೆಗೆ ನೀನು ಮೃತ್ಯುಲೋಕದಲ್ಲಿಯೇ ಮನುಷ್ಯನಾಗಿ ಬಿದ್ದುಕೊಂಡಿರು!' ಎಂದು ನನಗೆ ಶಾಪವಿತ್ತನು.

ಕೂಡಲೇ ನಾನು ಈ ಲೋಕಕ್ಕೆ ಇಳಿದು ಆ ಹೆಂಗುಸಿನ ಆತ್ಮವನ್ನು ಕೊಂಡುಹೋದೆನು. ಅಷ್ಟರಲ್ಲಿ ಅವಳು ಪಕ್ಕದಲ್ಲಿದ್ದ ತನ್ನದೊಂದು ಮಗುವಿನ ಕಾಲ ಮೇಲೆ ಹೊರಳಾಡಿ ಅದನ್ನು ಜಜ್ಜಿಬಿಟ್ಟಿದ್ದಳು. ನಾನೊಂದು ಗುಡಿಯ ಬಳಿ ಅದೇ ಕ್ಷಣದಿಂದ ಮನುಷ್ಯನಾಗಿ ಬಿದ್ದುಕೊಂಡೆನು .... ಆ ಕ್ಷಣವೇ ನನಗೆ ಮಾನವ ಜನ್ಮದ ದುಃಖಮಯವಾದ ಪರಿಚಯವುಂಟಾಯಿತು. ನೋವಿನಿಂದ ನರಳಿದೆನು. ಜಡಿಮಳೆಯಿಂದ ಕಂಗಾಲಾದೆನು. ಹಸಿವೆಯಿಂದ ಬಳಲಿದೆನು. ಅಲ್ಲಿಯೇ ಕ್ಷೀಣನಾಗಿ, ನಿರ್ಗತಿಕನಾಗಿ ಬಿದ್ದುಕೊಂಡೆನು. ಸ್ವಲ್ಪ ಸಮಯದ ನಂತರ (ತ್ಯಾಂಪನಿಗೆ) ನೀನು ಆ ದಾರಿಯಾಗಿ ಬಂದೆ. (ತ್ಯಾಂಪನು ಕುತೂಹಲದಿಂದ ಕೇಳುವನು.) ನಾನು ಮನುಷ್ಯನಾದಂದಿನಿಂದ ಬೇರೊಬ್ಬ ಮನುಷ್ಯನನ್ನು ನೋಡಿದುದು ಅದೇ ಮೊದಲನೆಯ ಬಾರಿ. ಆದರೆ ನನ್ನನ್ನು ನೋಡಿದ ಕೂಡಲೇ ನಿನ್ನ ಮುಖವು ಮುದುರಿತು. ನೀನು ಆಗ ಜೀವಿಸಿರುವಂತೆ ನನಗೆ ಕಂಡುಬರಲಿಲ್ಲ. ಮಸಣದ ವಾತಾವರಣವೇ ನಿನ್ನನ್ನು ಆವರಿಸಿಕೊಂಡಿತ್ತು. ಒಂದು ಕ್ಷಣ ನಿಂದು

ನಿನ್ನ ಹಾದಿ ಹಿಡಿದು ಹೋದೆ. (ತ್ಯಾಂಪನು ನಾಚಿಕೆಯಿಂದ ತಲೆಬಗ್ಗಿಸು ವನು.) ನಾನು ನಿರಾಶೆಪಟ್ಟೆನು. ಫಕ್ಕನೆ ನೀನು ಪುನಃ ನನ್ನ ಹತ್ತಿರ ಬಂದೆ. ಆದರೆ ಆಗ ನಿನ್ನ ಸೊಟ್ಟ ಮೋರೆಯ ಬದಲು ಪ್ರಸನ್ನತೆಯು ಮೂಡಿತ್ತು. ಮಸಣದ ವಾತಾವರಣವು ಮಾಯವಾಗಿತ್ತು. ದೇವತ್ವವೇ ನಿನ್ನಲ್ಲಿ ನೆಲಸಿಗೊಂಡಿತ್ತು. ನೀನು ನನ್ನನ್ನು ಉಪಚರಿಸಿ ಇಲ್ಲಿಗೆ ಕರೆದು ತಂದೆ . . . . ಆದರೆ ಇಲ್ಲಿ (ನಾಗಮ್ಮನನ್ನು ಸೂಚಿಸಿ) **ಈ** ಹೆಂಗುಸನ್ನು ಕಂಡೆನು. (ಮೊಣಕಾಲೂರಿ ಕೂತಿದ್ದ ನಾಗಮ್ಮ **ಲಜ್ಜೆಯಿಂದ** ಶಿರವನ್ನು ನೆಲಕ್ಕೆ ಬಾಗಿಸುವಳು.) ಅವಳಾದರೋ ಬಹಳ ಕಠೋರ ವಾಗಿದ್ದಳು. ಮೃತ್ಯುವಿನ ಸ್ವರೂಪವೇ ಅವಳಾಗಿದ್ದಳು. ತೀರ ನಿರ್ಗತಿಕನಾದ ನನ್ನನ್ನು ಅವಳು ಛಳಿಮಳೆಯಲ್ಲೇ ತಳ್ಳಲು **ನೋಡಿದಳು.** (ಇದನ್ನು ಕೇಳಿದ ಕೂಡಲೇ ನಾಗಮ್ಮನ ಬಾಯಿಂದ ಸಣ್ಣ ಅಳುಧ್ವನಿಯು ಹೊರಡುವುದು) ಆದರೆ ಫಕ್ಕನೆ ಅವಳ ಬುದ್ಧಿಯೂ ಬದಲಾಯಿತು. ಅವಳನ್ನು ಪುನಃ ನೋಡಿದೆನು. ಆಗ ಅವಳು ಪ್ರೇಮದ ಮೂರ್ತಿಯೇ ಆಗಿದ್ದಳು. ಅವಳಲ್ಲಿಯೂ ಆಗ ದೇವತ್ವವನ್ನು ಕಂಡೆನು. ಕೂಡಲೇ ನನ್ನ ಸ್ವಾಮಿಯು ನನಗೆ ಆಜ್ಞಾಪಿಸಿದ್ದ ಮೊದಲನೆಯ ಪ್ರಶ್ನೆಯು ನೆನ ಪಿಗೆ ಬಂತು: **ಮನುಷ್ಯನಲ್ಲಿ ನೆಲಸಿಕೊಂಡಿರುವುದು ಯಾವುದು?** ಎಂದು. ಅದರೊಂದಿಗೆ ಅದರ ಉತ್ತರವೂ ದೊರಕಿತು. ಮನುಷ್ಯ ನಲ್ಲಿ ನೆಲಸಿಕೊಂಡಿರುವುದು ದೇವತ್ವವೇ! ಇದನ್ನು ತಿಳಿದುಕೊಂಡಾಕ್ಷಣ ನಾನು ಸಂತೋಷದಿಂದ ಮೊದಲನೆಯ ಬಾರಿ ನಕ್ಕೆನು.

ಒಂದು ವರ್ಷ ಕಳೆಯಿತು. ಕಾಲಿಗೆ ಜೋಡು ಮಾಡಿಸುವುದ ಕ್ಕೆಂದು ಇಲ್ಲಿಗೊಬ್ಬ ಮನುಷ್ಯನು ಬಂದಿದ್ದನಷ್ಟೆ? ಅವನ ಬೆನ್ನ ಹಿಂದೆಯೇ ಯಮಲೋಕದ ನನ್ನ ಗೆಳೆಯನೊಬ್ಬನನ್ನು ಕಂಡೆನು. ಆ ಮನುಷ್ಯನ ಸಾವು ದೂರವಿಲ್ಲೆಂದು ಕೂಡಲೇ ತಿಳಿದೆನು. ಆದರೆ ಆ ಮನುಷ್ಯನಿಗಾದರೋ ಅದರ ಪರಿವೆಯಿದ್ದಿಲ್ಲ. ತನ್ನ ಸಾವು ಬೆನ್ನ ಹಿಂದೆಯೇ ಇದ್ದರೂ ತಾನು ಇನ್ನೂ ಎಷ್ಟೋ ವರ್ಷ ಬದುಕುವೆನೆಂಬ ರೀತಿಯಲ್ಲಿ ವರ್ತಿಸಿದನು. ಆ ಕ್ಷಣದಲ್ಲಿಯೇ ನನ್ನ ಸ್ವಾಮಿಯು

ಕೊಟ್ಟ ಇನ್ನೊಂದು ಪ್ರಶ್ನೆಯು ನೆನಪಾಯಿತು: **ದೇವರು ಮನುಷ್ಯನಿಗೆ ದಯೆಪಾಲಿಸದ ಸಂಗತಿಯಾವುದು?** ಎಂದು. ತನಗೆ ನಿಜವಾಗಿಯೂ ಆವಶ್ಯಕವಾದುದು ಏನು ಎಂಬ ತಿಳುವಳಿಕೆಯೇ! ಈ ಉತ್ತರವು ಹೊಳೆಯುತ್ತಲೇ ನಾನು ಎರಡನೆಯ ಬಾರಿ ಸಂತೋಷದಿಂದ ನಕ್ಕೆನು.

ಇನ್ನೂ ಒಂದು ವರ್ಷ ಸಂದಿತು. ಈ ಹೊತ್ತು ತಾನೇ ಒಬ್ಬಳು ಹೆಂಗುಸು ಇಬ್ಬರು ಚಿಕ್ಕ ಹುಡುಗಿಯರನ್ನು ಕರೆದುಕೊಂಡು ಇಲ್ಲಿಗೆ ಬಂದಿದ್ದಳು! ಅವರ್‍ಯಾರೆಂದು ತಿಳಿದುಕೊಂಡೊಡನೆಯೇ ನನಗೆ ನನ್ನ ಸ್ವಾಮಿಯು ಕೊಟ್ಟ ಮೂರನೆಯ ಪ್ರಶ್ನೆಗೆ ಉತ್ತರ ಸಿಕ್ಕಿತು. ಇದಕ್ಕಾಗಿಯೇ ನಾನೀಗ ಮೂರನೆಯ ಬಾರಿ ನಕ್ಕೆನು . . . (ಜಯೋತ್ಸಾಹದ ಸ್ವರದಿಂದ) ಈಗ ತಿಳಿಯಿತು, ಮನುಷ್ಯನ ಬಾಳ್ವೆಯು ಏತರಿಂದ ಎಂದು! ಮನುಷ್ಯನ ಬಾಳ್ವೆಯು ಅವನು ಕೈಕೊಳ್ಳುವ ಆರೈಕೆಯ ಮೇಲಲ್ಲ, ಪ್ರೇಮದ ಮೇಲೆಯೇ ಹೊಂದಿಕೊಂಡಿರುವುದು! ನಾನು ಮನುಷ್ಯನಿದ್ದಾಗ ಬದುಕಿದ್ದುದು ನನ್ನ ಪ್ರಯತ್ನಗಳಿಂದಲ್ಲ. ನಿಮ್ಮಾವರ ಪ್ರೇಮದ ದೆಸೆಯಿಂದ! ಆ ಅನಾಥ ಮಕ್ಕಳೀರ್ವರೂ ಬದುಕಿದ್ದುದು ಅವರ ತಂದೆ ತಾಯಿಗಳ ರಕ್ಷಣೆಯಿಂದಲ್ಲ—ಒಬ್ಬ ಅಪರಿಚಿತ ಹೆಂಗುಸಿನಲ್ಲಿ ಪ್ರೇಮುಪ್ರೊಡೆದುದರಿಂದ! . . . . ತನ್ನ ಬಾಳ್ವೆಯು ತನ್ನ ಸಾಧನ ಯತ್ನಗಳ ಮೇಲೆಯೇ ಹೊಂದಿ ಕೊಂಡುಂಟೆಂದು ಮನುಷ್ಯನು ಸಾಧಾರಣವಾಗಿ ತಿಳಿದುಕೊಳ್ಳುತ್ತಾನೆ. ಇದು ಕೇವಲ ಅಜ್ಞಾನ! ಮನುಷ್ಯನ ಬಾಳ್ವೆಯು ಪ್ರೇಮದ ಮೇಲೆಯೇ ಹೊಂದಿಕೊಂಡುಂಟು! (ತನ್ನ ಕೈಗಳನ್ನು ಮೇಲಕ್ಕೆತ್ತಿ—ಉತ್ಸಾಹದಿಂದ) ಇದೇ ನಾನಿಂದು ಕಂಡ ಮೂರನೆಯ ಸತ್ಯವು—**ಮನುಷ್ಯನ ಬಾಳ್ವೆಯು ಏತರಿಂದ?**—ಪ್ರೇಮದಿಂದ! ಪ್ರೇಮದಿಂದಲೇ ಮನುಷ್ಯನು ಜೀವಿಸಿರುವನು! ಪ್ರೇಮವೇ ವಿಶ್ವಧರ್ಮವು!

(ಥಕ್ಕನೆ ಕತ್ತಲಾಗುವುದು . . . . ಕ್ರಮೇಣ ಕೋಣೆಯೊಳಗಿದ್ದ ದೀಪದ ಕಿರಿಯ ಬೆಳಕು ಮಾತ್ರ ಉಳಿಯುವುದು. ಈ ಕಿರಿಯ ಬೆಳಕಿನಲ್ಲಿ ತ್ಯಾಂಪ, ನಾಗಮ್ಮ, ಭಾಗು - ಮೂವರೂ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಿರುವರು. ಅಹಿಂತಕನು ಮಾತ್ರ ಅಂತರ್ಧಾನನಾಗಿರುವನು.)

# ಪಿರಿಯಕ್ಕನ ಚಾಳಿ

## ಪಾತ್ರ ವರ್ಗ

**ಸುಬ್ರಾಯ**—ಮನೆಯ ಯಜಮಾನ. ಕಥಾನಾಯಕ.

**ಪರಮೇಶ್ವರಯ್ಯ**—ನೆರೆಮನೆಯ ಗೆಳೆಯರು.

**ಸೀತಾರಾಮಯ್ಯ**— ,,

**ಸದಾಶಿವಯ್ಯ**— ,,

**ಅಚ್ಯುತರಾಯರು**—ಪರೀಲರು.

**ಗೌರಮ್ಮ**—ಸುಬ್ರಾಯರ ಮಡದಿ.

**ಬಂಗಾರಮ್ಮ**—ಬಡ ಕೂಲಿ ಹೆಂಗುಸು.

**ರುಕ್ಮಿಣಿ**—ಗೌರಮ್ಮನ ಮಗಳು (೧೨ ವಯಸ್ಸು.)

**ಲಚ್ಚಣ್ಣ**—ಸುಬ್ರಾಯರ ೮ ವರುಷ ಪ್ರಾಯದ ಮಗ; ಬಲು ಚುರುಕಿನ ಹುಡುಗನಂತೆ.

(ಸ್ಥಳ—ಸುಬ್ರಾಯರ ಮನೆಯ ಮುಂದಿನ ಪಡಸಾಲೆ. ಸುಬ್ರಾಯರು ನಡು ವಯಸ್ಸಿನವರು. ಹೇಗಾದರೂ ಮಾಡಿ ತನ್ನ ಸಂಸಾರಕ್ಕೆ ಕೊರತೆ ತಂದುಕೊಳ್ಳುವವರಲ್ಲ. ಸುಖಜೀವಿಯೆನ್ನಬಹುದು. ಅವರಿಗೆ ಅನುಕೂಲವಾದ ಕುಟುಂಬ. ಅವರ ಮನೆಗೆ ಏನೆಲ್ಲ ಏನೊಂದು ಆಸೆ ಮಾಡಿ ಬಂದು ಹೋಗುವ ನೆರೆಕರೆಯವರ ಉಪದ್ರವ ಬಹಳ.ಅದನ್ನು ತಪ್ಪಿಸಿಕೊಳ್ಳುವುದರಲ್ಲಿ ಈ ಸಂಸಾರಿಗರು ತುಂಬಾ ಜಾಣರು. ಅವರು ಒಂದು ಕಡೆ ಸುಮ್ಮನೆ ಕುಳಿತಿದ್ದಾರೆ. ರುಕ್ಮಿಣಿಯು ತುಸು ದೂರದಲ್ಲಿ ಮನೆಕೆಲಸದಲ್ಲಿ ನಿರತಳಾಗಿದ್ದಾಳೆ. ಮಡದಿಯು ಮನೆಯ ಒಳಗೆ ಇದ್ದಾಳೆ. ಲಚ್ಮಣ್ಣನು ಹೊರಗೆ ಆಟಕ್ಕೆ ಹೋಗಿರಬೇಕು.)

**ಸುಬ್ರಾಯ**—ರುಕ್ಮಿಣೀ, ರುಕ್ಮಿಣೀ.

**ರುಕ್ಮಿಣಿ**—(ಕೆಲಸದಲ್ಲೇ ಮಗ್ನಳಾಗಿರುವಳು)

**ಸುಬ್ರಾಯ**—ಏ ಹೆಣ್ಣೆ, ಅಬ್ಬ ನಿನ್ನ ಕಿವಿಯೇ! ಇಷ್ಟರಲ್ಲಿಯೇ ಹೊಟ್ಟೆಹೋಯಿತೇ? ಕೇಳಿದರೂ ಕೇಳಿಸದ ಹಾಗೆ ಮಾಡುತ್ತಾಳೆ . . . . ಏ ರುಕ್ಮಿಣೀ.

**ರುಕ್ಮಿಣಿ**—ಕರೆದೆಯೇನು ಅಪ್ಪ . . . .

**ಸುಬ್ರಾಯ**—ಈಗ ವರ್ತಮಾನ ಮುಟ್ಟಿತು ಎಂದು ಕಾಣುತ್ತದೆ. ಹೋಗಿ ಅವಳನ್ನು ಕರೆದುಕೊಂಡು ಬಾ. ಸುಮ್ಮನೆ ಏಕೆ ಪೆಂಗನ ಹಾಗೆ ನಿಂತಿದ್ದೀ? ಒಳಗೆ ಹೋಗಿ ಅಮ್ಮನನ್ನು ಕರೆಯೆಂದದ್ದು ಅಲ್ಲವೆ?

**ರುಕ್ಮಿಣಿ**—ಅಮ್ಮನನ್ನು ಕರೆಯಬೇಕೆ? ಅಮ್ಮ ಇಷ್ಟು ಹೊತ್ತಾದರೂ ಕೆರೆಗೆ ಮೀಯಲಿಕ್ಕೆ ಹೋಗದೆ ಇರುತ್ತಾಳೆಯೇ. 'ಅಕ್ಕಿಯಲ್ಲಿನ ಹುಳ ಆಯ್ದಿಡು' ಎಂತ ಹೇಳಿ ಹೊರಟುಹೋದಳಷ್ಟೆ.

**ಸುಬ್ರಾಯ**—ನಿನಗೆಷ್ಟೇ ಅಧಿಕ ಪ್ರಸಂಗ? ಒಳಗೆ ಹೋಗಿ ನೋಡು. ಪಾತ್ರೆ ಸದ್ದಾಗುತ್ತದೆ.

**ರುಕ್ಮಿಣಿ**—ಆಗಲಿ, ಹೋಗುತ್ತೇನೆ. ಹಿತ್ತಲಿನ ಬಾಗಲಲ್ಲಿ ಈಗಷ್ಟೇ ಬಂದಳೋ ಏನೊ . . . . (ತೆರಳುವಳು.)

**ಸುಬ್ರಾಯ**—ಅಬ್ಬ, ಎಲ್ಲ ಕಲಿಯುಗದ ಮಕ್ಕಳು. ಹೆಣ್ಣು-ಗಂಡು ಎಲ್ಲ ಒಂದೇ. ಮಾತಿಗೆ ಮಾತು ತಯಾರು.

(ಗೌರಮ್ಮ ರುಕ್ಮಿಣಿಯವರು ಬರುವರು.)

ಹೂಂ, ಬಂದೆಯಾ. ಎಲ್ಲಿ, ಕೆರೆಗೆ ಸ್ನಾನಕ್ಕೆ ಹೋಗಿದ್ದಿಯಾ?

**ಗೌರಮ್ಮ**—ಬೆಳಗಿಂದ ಇನ್ನೂ ಹೊರಗೆ ಹೆಜ್ಜೆಯಿರಿಸಲಿಕ್ಕೆ ಪುರುಸೊತ್ತು ಬೇಕಲ್ಲ. ಎಂಥ ಮನೆಯೋ ದೇವರೆ ಬಲ್ಲ . . . . ಕೆಲಸ ಎಂಬುದು ಮುಗಿಯುವುದಂತಿಲ್ಲ.

**ಸುಬ್ರಾಯ**—ನೋಡಿದಿಯಾ, ಈ ಗಿಡ್ಡಿ, ನಿನ್ನನ್ನು ಕರೆ ಎಂದರೆ ನೀನು ಕೆರೆಗೆ ಹೋಗಿದ್ದು ಎಂದಳಲ್ಲ—

**ರುಕ್ಮಿಣಿ**—ಅಮ್ಮ ಹಾಗೆ ಹೇಳಿದ ಹಾಗೆ ಕೇಳಿಸಿತು.

**ಗೌರಮ್ಮ**—ನಾನೆಲ್ಲಿ ಅಂದೆನೇ?

**ಸುಬ್ರಾಯ**—ಇಲ್ಲ, ಅವಳ ಅಧಿಕ ಪ್ರಸಂಗಕ್ಕೆ ಹಲ್ಲು ಮುರಿದು ಇಡಬೇಕು.

**ಗೌರಮ್ಮ**—ಹಲ್ಲು ಗಿಲ್ಲು ಮುರಿದು, ಕೋರ್ಟುಗೀರ್ಟು ಮಾಡುವುದು ಮತ್ತೆ ಈಗ ಕರೆದುದು ಯಾಕೆ? ಒಳಗಿನ ಕೆಲಸ ಇನ್ನೂ ಮುಗಿಯಲಿಲ್ಲ.

**ಸುಬ್ರಾಯ**—ಅದೇ, ಹೇಳುತ್ತೇನೆ. ಆ ಮೊನ್ನೆ ತೆಗೆದ ಹಲಸಿನ ಕಾಯಿ ಹಣ್ಣಾಯಿತಷ್ಟೆ. ಒಂದು ಅರ್ಧ ಸಿಗಿದು . . . .

**ಗೌರಮ್ಮ**—ಏನು ದಾನಧರ್ಮ ಮಾಡಲಿಕ್ಕಿದೆಯೇ? ಏನೂ ಬೇಡ. ಕೊಟ್ಟರೆ ಒಂದು ಚೂರು ಆ ಬಂಗಾರಮ್ಮನಿಗೆ ಕೊಡುವ. ಅವಳಿಂದ ಅಂಗಣವನ್ನಾದರೂ ಇಷ್ಟು ಬರೆಯಿಸಬಹುದು. ನೆಲವನ್ನು ನೋಡಲಿಕ್ಕೆ ಸಾಧ್ಯವಿಲ್ಲ. ರಣರಂಪ ಆಗಿದೆ.

**ಸುಬ್ರಾಯ**—ಬಂಗಾರಮ್ಮನಿಗೆ ಇನ್ನೊಂದು ಸಾರಿ ಹಣ್ಣಾದಾಗ ಕೊಟ್ಟರೆ ಸಾಕು.

**ಗೌರಮ್ಮ**—ಇನ್ನು ಹಣ್ಣಾಗುವುದೆಂದರೆ ಮುಂದಿನ ವರುಷ.

**ಸುಬ್ರಾಯ**—ಮುಂದಿನ ವರುಷವಾದರೆ ಮುಂದಿನ ವರುಷ. ತೆಗೆದ ಬಾಯಿಗೆ ಎದುರು ಮಾತು. ನಿನ್ನ ಚಾಳಿಯೇ ಮಕ್ಕಳಿಗೆ ಬಂದ ಹಾಗೆ ಕಾಣುತ್ತೆ. ಇಲ್ಲಿ ನೋಡು—ಮಧ್ಯಾಹ್ನ ಪಠೇಲ ಅಚ್ಚುತಯ್ಯನನ್ನು ಊಟಕ್ಕೆ ಬರಲಿಕ್ಕೆ ಹೇಳಿದ್ದೇನೆ. ಒಂದು ಅರ್ಧ ಹಣ್ಣನ್ನು ಪಾಯಸ ಮಾಡು . . . , ಒಂದು ಅರ್ಧವನ್ನು ಮುಳ್ಕ ಮಾಡು. ಏನು . . . . ನಡಿ. ನಡಿ . . . .

**ಗೌರಮ್ಮ**—ಪರೇಲ ಅಚ್ಚುತಯ್ಯ ಹಲಸಿನ ಹಣ್ಣು ತಿನ್ನದವರೇನು? ಮೊದಲೇ ಸೀ ತಿಂದರೆ ಕಾಯಿಲೆ ಜಾಸ್ತಿ ಅಂತೆ.

**ಸುಬ್ರಾಯ**—ನೀನು ಹೇಳಿದ ಹಾಗೆ ಮಾಡಲಿಕ್ಕೆ ಯಾವಾಗ ಕಲಿಯುವುದೋ ದೇವರೇ ಬಲ್ಲ . . . . ಹೋಗು, ಅವರಿಗೆ ಸಿಹಿ ಆಗದಿದ್ದರೆ, ನಾವೇನು ಔಷಧ ತರಿಸಿ ಕೊಡುವುದು ಬೇಡ. ಅವರಿಂದ ಒಂದು ನಾನ್ನೂರು ರೂಪಾಯಿ ಸಾಲ ತೆಗೆದುಕೊಳ್ಳುವ ಎಂತಿದ್ದೆ.

**ಗೌರಮ್ಮ**—ಏನು ಸಾಲಕ್ಕೆ ಶುರುಮಾಡಿದಿರಾ? ಎಲ್ಲಿ ಜುಗಾರಿ ಆಡಲಿಕ್ಕೆ ತೊಡಗಿದರೋ ಏನೋ . . . .

**ಸುಬ್ರಾಯ**—ತಯಾರಿದೆ ನಿನ್ನ ನಾಲಿಗೆ! ಸಾಲ ಅಂದರೆ ನನಗಲ್ಲ . . . . ಈಗ ೧೫ರ ಸಲೆ ಬಡ್ಡಿಯಲ್ಲಿ ಪಡೆಯುಲಿಕ್ಕೆ ಒಂದು ಜನ ಸಿಕ್ಕಿದೆ. ಇವರಿಂದ ೮ರ ಹಾಗ ತೆಗೆದುಕೊಂಡರ ಕೂತಲ್ಲಿ ನೂರಕ್ಕೆ ೭ ಜಾಸ್ತಿ ಸಿಕ್ಕಿತಲ್ಲ.

**ಗೌರಮ್ಮ**—ಕಡೆಗೆ ನೂರಕ್ಕೆ ಬಡ್ಡಿಯೇ ಸಿಕ್ಕಿ, ಕೊಟ್ಟದ್ದು ಹೋದರೆ? . . . .

**ಸುಬ್ರಾಯ**—ನೀನೇ ಬುದ್ಧಿವಂತೆ ಎಂದು ತಿಳಿಯಬೇಡ. ಆ ಇವರಿಲ್ಲವೋ . . . . ಪರಮೇಶ್ವರಯ್ಯ, ನೀನು ನಮ್ಮ ರುಕ್ಮಿಣಿಗೆ ಅವರ ಮಗನನ್ನು ತರುವ ಅಂದೆಯಲ್ಲ, ಅವರಿಗೆ. ಆಸ್ತಿ ಜವಾಬುದಾರಿಯ ಮೇಲೆ. ಸಾಲದ ಹಂಗಿನಿಂದ ಅವರನ್ನು ಹತ್ತಿರ ಎಳೆದರೆ, ಮುಂದೆ ನೆಂಟಸ್ತಿಕೆ ವಿಚಾರ ಮಾತಾಡುವುದು ಎಷ್ಟರ ಕೆಲಸ . . . .

**ಗೌರಮ್ಮ**—ಅದಾದರೆ ಅವಶ್ಯ ಮಾಡಿ. ಅದನ್ನು ಯಾವುದೂ ಹೇಳದೆ 'ಹಲಸಿನ ಹಣ್ಣು—ಮುಳ್ಕ—ಪಾಯಸ' ಅಂದರೆ ಏನು ನನ್ನ ಗ್ರಹಚಾರ ಗೊತ್ತಾಗುತ್ತದೆ? ಕೇಳಿದರೆ ಅಧಿಕ ಪ್ರಸಂಗಿ ಅನ್ನುತ್ತೀರಿ—

**ಸುಬ್ರಾಯ**—ಆಗಲಿ, ಹೋಗು, ಬೇಗ ಬೇಗ ತಯಾರು ಮಾಡು, ನಡಿ. ದೋಸೆಗೆ ಅಕ್ಕಿ ಅರದದ್ದೇ ಉಂಟಲ್ಲ. ಅದನ್ನು ಮುಳ್ಕಕ್ಕೆ ಹಾಕಿದಾಯಿತು.

**ಗೌರವ್ವ**—ಆದರೆ ಆ ಬಂಗಾರವ್ವನಿಗೆ ಕೊಡುತ್ತೇನೆ ಅಂತ ಬಾಯಿ ಬಿಟ್ಟಾಯಿತು. ಈಗ ಕೊಡದೆ ಹೋದರೆ? . . . .

**ಸುಬ್ರಾಯ**—ಮುನ್ಸೀಫ್ ಕೋರ್ಟಿನಲ್ಲಿ, ಫೈಸೇತು ಮಾಡಲಿ . . . . ಅಲ್ಲ, ಕೊಡುತ್ತೇನಂದರೆ ಕೊಟ್ಟೇ ತೀರಬೇಕೇ? ಅದೇನು ಕರಾರೇ? ಕೊಳೆತು ಹೋಯಿತಪ್ಪ ಅನ್ನುವುದು.

**ಗೌರವ್ವ**—ಅನ್ನಬಹುದು ಹೌದು, ಆದರೆ ಅಂಗಣ ಬರೆಯು ವವರು ಯಾರು?

**ಸುಬ್ರಾಯ**—ಇನ್ನೆಲ್ಲಿಂದಾದರೂ ತರಲಿಕ್ಕೆ ಬರುವುದಿಲ್ಲವೋ? ಆ ನಾಗಪ್ಪ ಶೆಟ್ರ ಮರದ ಮೇಲೆ ಒಂದು ದೊಡ್ಡ ಹಣ್ಣನ್ನು ಕಂಡಿದ್ದೇನೆ. 'ದೇವರಿಗೆ ಒಂದು ಕಾರ್ಯ ಇದೆ. ನಿನ್ನಿಂದ ಅಷ್ಟಾಗಲೇಬೇಕೆಂ'ದರೆ ಇಲ್ಲ ಅನ್ನಲಿಕ್ಕಿಲ್ಲ ಅವನು . . . . ಹೂಂ ಹೋಗು . . .

(ರುಕ್ಮಿಣಿಯನ್ನು ನೋಡಿ)

ನೀನು ಅಕ್ಕಿ ಆರಿಸಿಯಾಗುವುದರೊಳಗೆ ಬೆಳಗಾಗುತ್ತೆ. ಅಲ್ಲಿ ಕೆಲಸಮಾಡುವುದೋ, ಬೇಲಿ ಮೇಲೆ ಹಾರುವ ಹಕ್ಕಿ ನೋಡು ವುದೋ ನೀನು? ನಾಳೆಗೆ ಲಗ್ನಾ ಆಗುವ ಹುಡುಗಿ, ಇನ್ನೂ ಆಟ ಅನ್ನು ವುದು ಬಿಟ್ಟಿದ್ದಿಲ್ಲ ಅಂದರೆ . . . .

**ರುಕ್ಮಿಣಿ**—(ನಾಚಿಕೆಯಿಂದ) ನನಗೆ ಲಗ್ನ ಬೇಡ. (ಹೋಗುತ್ತಾಳೆ.)

**ಸುಬ್ರಾಯ**—ನಿನಗೆ ಲಗ್ನ ಬೇಡವಾದರೆ ಆ ಪರಮೇಶ್ವರಯ್ಯನ ಮಗನನ್ನು ನಾನೇ ಲಗ್ನ ಆಗುತ್ತೇನೆ—ಏನು! ಥೇಟ್ ತಾಯಿಯ ಮಗಳು! ನಮ್ಮ ಲಚ್ಚಣ್ಣನ ಒಂದೇ ಒಂದು ಗುಣ ಇವಳಿಗೆ ಬರುವ ಹಾಗಿಲ್ಲ . . . . ಹೌದು, ಫಕ್ತ ಇರುವುದೇ ತಾಯಿ ಜತೆಯಲ್ಲೇ. ಅದ ರಲ್ಲೂ ಅವಳಜ್ಜಿಯ ಉಪದೇಶ ಬೇರೆ . . . . ಬಂದನಲ್ಲ ನಮ್ಮ ಅಭಿಮನ್ಯು . . . .

(ಲಚ್ಚಣ್ಣನು ಬರುವನು.)

**ಲಚ್ಚಣ್ಣ**—ಅಪ್ಪಯ್ಯ, ಯಾರೋ ಹೊರಗೆ ಬಂದು, ನೀನು ಇದ್ದಿಯೆ ಎಂತ ನನ್ನನ್ನು ಕೇಳಿದರು. ನೋಡಿಬರುತ್ತೇನೆ ಅಂದೆ. 'ಇಲ್ಲ' ಎಂದು ಹೇಳಲೇ? . . . .

**ಸುಬ್ರಾಯ**—ಯಾರು, ಯಾರದು?

**ಲಚ್ಚಣ್ಣ**—ಉದ್ದುದ್ದಕ್ಕೆ ಇದ್ದಾರಲ್ಲ, ಅಪ್ಪ, ನಿತ್ಯ ಊರಿಗೆ ಮುಂಚೆಯೇ ಕೆರೆಯಲ್ಲಿ ಮುಣುಗುಹಾಕುತ್ತಾರೆ . . . . ಅವರು.

**ಸುಬ್ರಾಯ**—ಯಾರು? ಪರಮೇಶ್ವರಯ್ಯನೋ, ಬರಲಿ . . . . ಬರಲಿ . . . . ಕರೆದುಕೊಂಡು ತಾ . . . .

**ಲಚ್ಚಣ್ಣ**—'ಅಪ್ಪಯ್ಯ ಇಲ್ಲ, ಎಲ್ಲಿ ಹೋದರೋ ಅಪ್ಪ' ಅಂದಾಯಿತು. ಅಂದರೆ ಅವರ ಸಂಗಡ, ಯಾವಾಗಲೂ ನಮ್ಮ ಮನೆಗೆ ಬಂದು ಸೌತೆಕಾಯಿ ಕೇಳುತ್ತಿರುತ್ತಾನಲ್ಲ ಅವನು ಬಂದಿದ್ದ . . . . ಅದಕ್ಕೆ ಇಲ್ಲ ಅಂದುಬಿಟ್ಟೆ.

**ಸುಬ್ರಾಯ**—ನನ್ನ ಮಗು ಅಂದರೆ ಮಗು. ಆ ಕಳ್ಳ ಉಗ್ರಾಣಿಗೆ ಇಲ್ಲಿ ಬಂದರೆ ಒಂದಲ್ಲ ಒಂದು ಕೇಳುತ್ತಲೇ ಇರಬೇಕು. ಇದೇನು ಅವನಪ್ಪನ ಉಗ್ರಾಣ ಅಂತ ತಿಳಿದಿರಬೇಕು.

(ದೂರದಿಂದ ಯಾರೊ ಬರುವರು.)

ಅದ್ಯಾರಪ್ಪ, ದೋಂಟಿಕಾಲಿನವರು. ನೀನು ಆ ಹೆಬ್ಬಾಗಿಲಿನ ಬಾಗಿಲು ಹಾಕಿ ಬರಲೇ ಇಲ್ಲವೋ . . . . ಹೋಗು, ಬಾಗಿಲು ಹಾಕು, ನಡಿ. ಪರಮೇಶ್ವರಯ್ಯನಲ್ಲವೇ? ಅವರು ಬರಲಿ . . . . ನೀನು ಹೊರಗೆ ಆಡುತ್ತಿರು ಏನು.

**ಲಚ್ಚಣ್ಣ**—ಆಯ್ತು . . . . ಆಡುವುದಂತೆ. ಒಂದು ಪೀಪಿರಿ ತಂದು ಕೊಡು ಅಂದರೆ ಕೋಡುತ್ತೇನೆ ಕೊಡುತ್ತೇನೆ ಎಂದು ಸುಳ್ಳೇ ಹೇಳುವುದು. ನನಗೆ ಪೀಪಿರಿ ತಂದುಕೊಡದಿದ್ದರೆ ನಾನಿನ್ನು ಶಾಲೆಗೇ ಹೋಗುವುದಿಲ್ಲ.

**ಸುಬ್ರಾಯ**—ಹೋಗು ಲಚ್ಚಣ್ಣ, ಮುಂದಿನ ಸಂತೆ ದಿನ ಖಂಡಿತ ತಂದುಕೊಡುತ್ತೇನೆ.

**ಲಚ್ಚಣ್ಣ**—ದೇವರಾಣೆ?

**ಸುಬ್ರಾಯ**—ಆಣೆಗೀಣೆ ಹಾಕಬಾರದು, ಹೋಗು.

**ಲಚ್ಚಣ್ಣ**—ಹಾಗಾದರೆ—ಸುಳ್ಳೇ.

**ಸುಬ್ರಾಯ**—ಸುಳ್ಳು ಹ್ಯಾಗೆ? ನಿನ್ನ ಪುಸ್ತಕದಲ್ಲಿ ನೀನು ಓದ ಲಿಲ್ಲವೋ—'ಮಾತುಮಾತಿಗೆ ಆಣೆಯಿಡುತಲಿ ರೀತಿಗೆಡಲು ಅಯೋಗ್ಯನು' ....

**ಲಚ್ಚಣ್ಣ**—ಒಳ್ಳೇ ಪುಸ್ತಕ ಸಿಕ್ಕಿತು ನಿನಗೆ. ನನಗೆ ಪೀಪಿರಿ ತಂದು ಕೊಡದಿದ್ದರೆ ನಾನು ಊಟ ಮಾಡುವುದೇ ಇಲ್ಲ ....

**ಸುಬ್ರಾಯ**—ಆಯಿತು, ಹೋಗು.

**ಲಚ್ಚಣ್ಣ**—ಅಕ್ಕನಿಗೊಂದು.

**ಸುಬ್ರಾಯ**—ಅವಳೇನು ನಿನ್ನ ಹಾಗೆ ಮಾಣಿಯೇ ಪೀಪಿರಿ ಊದುತ್ತ ಕುಳಿತಿರಲಿಕ್ಕೆ. ಹೋಗು, ಪರಮೇಶ್ವರಯ್ಯ ಬಂದರು. ನೀನು ಹೊರಗೇ ಇದ್ದು ಬಿಡು ಏನು.

(ಪರಮೇಶ್ವರಯ್ಯ ಬರುವರು. ಸ್ವಾಗತವಾಗುವುದು.)

ಬನ್ನಿ, ಪರಮೇಶ್ವರಯ್ಯ, ನಾನು ಎಲ್ಲೋ ಹೋಗಿದ್ದೆ. ಈಗಷ್ಟೇ ಹಿತ್ತಿಲ ಬಾಗಿಲಿನಿಂದ ಕಾಲು ಇಳಿಸಿದನಷ್ಟೆ.

**ರುಕ್ಮಿಣಿ**—(ಓಡಿ ಬಂದು) ಲಚ್ಚಣ್ಣ, ನನಗೆ ಪೀಪಿರಿ ಕೇಳಿದೆಯಾ? ಇವತ್ತು ಹಲಸಿನ ಹಣ್ಣಿನ ಮುಳ್ಕ ಮತ್ತು ಪಾಯಸ ಮಾಡುತ್ತಾರಂತೆ.

**ಲಚ್ಚಣ್ಣ**—ಹೌದೇ, ಥ ಥ ಥ ಥೈಯ್ಯ .... ಮುಳ್ಕ, ಪಾಯಸವೇ ....

**ರುಕ್ಮಿಣಿ**—ಪೀಪಿರಿ ಕೇಳುತ್ತಿಯಾ?

**ಲಚ್ಚಣ್ಣ**—ಕೇಳಿಯಾಯಿತು. ಅಪ್ಪಯ್ಯ ನನಗೊಂದು ತಂದು ಕೊಡುತ್ತಾರಂತೆ; 'ನಿನಗೇಕೆ, ನೀನೇನು ಮಾಣಿಯೇ' ಅಂದರು.

(ರುಕ್ಮಿಣಿ ಮುಖ ಸಪ್ಪಗಾಗುವುದು.)

ನೀ ಸುಮ್ಮನಿರು ಅಕ್ಕ. ನನ್ನ ಪೀಪಿರಿ ನಿನಗೆ ಕೊಡುತ್ತೇನೆ ಏನು.

**ರುಕ್ಮಿಣಿ**—ನಿನಗೆ? . . . .

**ಲಚ್ಚಣ್ಣ**—ನನ್ನದು ಕಳೆದು ಹೋಯಿತು ಎಂತ ಹೇಳಿ, ಇನ್ನೊಂದು ಕೇಳುತ್ತೇನೆ.

**ಲಕ್ಷ್ಮಿ**—ಹಾಗಾದರೆ ನನ್ನ ಮುಳ್ಕ ನಿನಗೆ ಕೊಡುತ್ತೇನೆ.

(ಅಡುಗೆ ಮನೆ ಒಳಗಿನಿಂದ 'ರುಕ್ಮಿಣೀ' ಎಂದು ಗೌರಮ್ಮನು ಕರೆಯುವಳು.)

**ಸುಬ್ರಾಯ**—ಏ ಕಿವುಡೀ, ಅಲ್ಲಿ ಅಮ್ಮ ಕರೆಯುವುದು ಕೇಳುವುದಿಲ್ಲವೇ?

**ಲಚ್ಚಣ್ಣ**—ಓಡು, ಓಡು . . . . ಅಮ್ಮ ಕರೆಯುತ್ತಾಳಂತೆ . . . .

(ರುಕ್ಮಿಣಿಯು ಓಡುವಳು.)

ಅಕ್ಕನ ಮುಳ್ಕ ಎಲ್ಲ ನನಗೆ, ನನ್ನ ಪೀಪಿರಿ ಅವಳಿಗೆ . . . . ಅವಳ ಹತ್ತಿರ ಅಪ್ಪಯ್ಯ ಪೀಪಿರಿ ಕಂಡರೆ? ಪೀಪಿರಿ ಕಂಡರೆ . . . . ಅಕ್ಕನಿಗೆ ಪೀಪಿರಿ ಬೇಡವೋ? (ತೆರಳುವನು.)

**ಸುಬ್ರಾಯ**—ಏನು ಪರಮೇಶ್ವರಯ್ಯ, ಬಾಯಾರಿಕೆ ಗೀಯಾರಿಗೆ ಏನು ಬೇಡವೋ?

**ಪರಮೇಶ್ವರಯ್ಯ**—ಬಿಸಿಲಿನಲ್ಲೇ ಬಂದೆ. ಸ್ವಲ್ಪ ನೀರು ಬೆಲ್ಲ ಬೇಕು.

**ಸುಬ್ರಾಯ**—(ಎದ್ದು ಅತ್ತಿತ್ತ ನೋಡಿ) ನೀರು ತರುವ. (ಹೋಗಿ ಮರಳುವರು.) ನೀರು ತಂದೆನು. ಬೆಲ್ಲದ ಪಾತ್ರೆ ಕವುಚಿ ಇಟ್ಟಿದ್ದಾಳೆ. ಈ ಹೆಂಗಸರ ವ್ಯಾಪಾರವೇ ಹೀಗೆ. ಮೊನ್ನೆ ಶನಿವಾರ ಸಂತೆಗೆ ಹೋಗಿದ್ದೆ. 'ಏನೇನು ಬೇಕು' ಎಂದರೆ ಬಾಯಿ ತೆರೆಯಲಿಲ್ಲ. ಈಗ ಮನೆಗೆ ಬಂದವರ ಮುಂದೆ ಮರ್ಯಾದೆ ತೆಗೆಯುವ ಹಾಗೆ 'ಇಲ್ಲ' ಅನುತ್ತಾಳೆ.

**ಪರಮೇಶ್ವರಯ್ಯ**—ಅದರಲ್ಲೆಲ್ಲ ಏನು ಮರ್ಯಾದೆ? ಸಂಸಾರ ಅಂದ ಮೇಲೆ ಎಲ್ಲಾ ಗಳಿಗೆಯಲ್ಲೂ ಒಂದೇ ಸಮನಾಗಿ ಇರುತ್ತೆಯೆ? (ನೀರು ಕುಡಿದಾಯಿತು.)

**ಸುಬ್ರಾಯ**—ಹಾ ಉಪ್ಪಿನಕಾಯಿಯಾದರೂ ತರಿಸುವ ಅನ್ನುವುದರೊಳಗೆ ನೀವು ನೀರು ಕುಡಿದಾಯಿತು. ಇರಲಿ . . . . ಏನು ಬಂದಿರಿ? ಏನು ವಿಶೇಷ?

**ಪರಮೇಶ್ವರಯ್ಯ**-ಮತ್ತೇನಲ್ಲ, ರೂಪಾಯಿಯೇನೋ ಹೇಳಿದ್ದೆನಲ್ಲಾ. ಯೋಚನೆ ಮಾಡಿದಿರಾ?

**ಸುಬ್ರಾಯ**—ಬಹಳ ಪ್ರಯಾಸ ಅಂತ ಕಾಣುತ್ತದೆ. ಎಲ್ಲೆಲ್ಲಿ ತಿರುಗಿದರೂ ವಸೂಲಿ ಆಗುವುದೇ ಇಲ್ಲ. ಅಂದರೆ ಊರಲ್ಲಿ ವ್ಯಾಪಾರ ಸಾಪಾರವೂ ಹಾಗಾಗೇ ಆಗಿದೆ. ಅಲ್ಲದೆ ಅಡಿಕೆಗೆ ಧಾರಣೆಯೂ ಇಲ್ಲ.

**ಪರಮೇಶ್ವರಯ್ಯ**—ನಾನು ನಿಮ್ಮನ್ನು ನಂಬಿದ್ದೇನೆ. ನಾಳೆ ಶನಿವಾರದೊಳಗೆ ಸಿಗದಿದ್ದರೆ ಮಾನಹೋದೀತು. ನನ್ನಿಂದ ಪ್ರತಿಯಾಗಿ ಏನು ಬೇಕು ಅದನ್ನು ಮಾಡುವ. ತಕ್ಕ ಭದ್ರತೆಗಿದ್ರತೆಗೆ ಏನು ತೊಂದರೆಯಿಲ್ಲ. ಹ್ಯಾಗೆ ಬೇಕಾವರೆ ಹಾಗೆ ಬರೆದುಕೊಡುವ.

**ಸುಬ್ರಾಯ**—ಆಯಿತು ನೋಡುವ, ಏನಾದರೂ ಆಗುತ್ತೆಯೋ ಎಂದು. ನಂಬಿದ್ದೇನೆ ಅನ್ನುವಾಗ ಕೈಬಿಡಲಿಕ್ಕ ಬರುತ್ತದೆಯೋ? ನಮ್ಮ ಪರೇಲರಿಂದ ಒಂದು ೫೦೦ ರೂಪಾಯಿ ಹಳ ಬಾಕಿ ಬರುವುದಿದೆ. ಅವರಿಗೆ ಹೇಳಿಕಳುಹಿಸಿದ್ದೇನೆ ಸಿಕ್ಕೀತು. ಸಿಕ್ಕೀತು.

**ಪರಮೇಶ್ವರಯ್ಯ**—ಅವರಿಗೆ ಮೊನ್ನೆ ಮೊನ್ನೆ ಎಲ್ಲೋ ೨೦೦೦ ಸಿಕ್ಕಿತಂತೆ. ನಾನು ಅಂದರೆ ಕೇಳಲಿಕ್ಕೆ ಉಪಾಯವಿಲ್ಲ ಅಷ್ಟೆ? ಅಷ್ಟು ಇಷ್ಟು ಮಾರಾಮಾರಿ ಮಾಡಿಕೊಂಡು, ಹಣಕ್ಕೆ ಮಾತ್ರ ಅವನ ಮನೆ ನಾಯಿಯಾದ ಅಂದರೆ ಯಾರು ಏನೆಂದಾರು?

**ಸುಬ್ರಾಯ**—ಇರಲಿ, ಅದೊಂದು ಕೆಲಸ ಆದರಾಯಿತಲ್ಲ. ಏಳಲೇ? ಹೊತ್ತು ಬೈಸಾರಿ ಆಗುತ್ತ ಬಂದರೂ ಸ್ನಾನ ಆಗಲಿಲ್ಲ ಇನ್ನು. ಸ್ನಾನಕ್ಕೆ ಹೋಗಿಬರಲೇ?

**ಪರಮೇಶ್ವರಯ್ಯ**— ಅದಿರಲಿ, ಸುಬ್ರಾಯರೇ. ಒಂದು ಸಣ್ಣ ಪುಟ್ಟ ಕೆಲಸ ಆಗಬೇಕಾಯಿತಲ್ಲ.

**ಸುಬ್ರಾಯ**— ಏನದು?

**ಪರಮೇಶ್ವರಯ್ಯ**— ನಾಳೆ ನಮ್ಮ ಮನೆಯಲ್ಲಿ ಹಿರಿಯರು ಬರುವ್ರದು. ಬ್ರಾಹ್ಮಣರಿಗೆ ಒಂದು ಹಲಸಿನ ಹಣ್ಣಿನ ಪಾಯಸ ಮಾಡುವ ಅಂತ ಅವಳು ಅನ್ನುತ್ತಿದ್ದಳು. ನಿಮ್ಮ ಮನೆ ಮರದಲ್ಲಿ ಇದ್ದರೆ ಒಂದು ಸಣ್ಣದು ಕೊಡುತ್ತೀರಾ?

**ಸುಬ್ರಾಯ**— ನಮ್ಮ ಮನೆ ಮರ ಅಂದರ ಮರವೇ ನೈ ಈ ವರುಷ. ಏನೋ ಇಷ್ಟು ವರುಷ, ಹಣ್ಣಿಲ್ಲದಿದ್ದರೂ ಒಂದೊಂದು ಮಿಡಿಯಾದರೂ ಕೇಳಿದವರ ಕೈಮೇಲೆ ಹಾಕುವ ಹಾಗಿತ್ತು. ಈ ವರುಷ ಒಂದು ಮಿಡಿಯಾಗಬೇಕೆ? ಕಳೆದ ವರುಷ ಒಬ್ಬ ಪುಣ್ಯಾತ್ಮನಿಗೆ ಒಂದು ಕಡಿಗೆ ಕೊಟ್ಟ ಮುಹೂರ್ತದಿಂದ ಹೀಗಾಗಿದೆ! ಮನೆಯಲ್ಲಿ ಹಲಸಿನ ಹಣ್ಣು ಬಿಟ್ಟು ಅದರ 'ಗೂಕು' ಸುಳಿಯಲಿಲ್ಲ.

**ಪರಮೇಶ್ವರಯ್ಯ**— ಆ ನಾಗಪ್ಪ ಸೆಟ್ರ ಮರದಲ್ಲಿ ಒಂದೋ ಎರಡೋ ಕಂಡ ನೆನಪು. ಅಲ್ಲಿಗೆ ಹೋದರೆ ಸಿಕ್ಕಿತೇ? ಹ್ಯಾಗೂ ಇಲ್ಲಿಯ ವರೆಗೆ ಬಂದಿದ್ದೇನೆ. ಅಲ್ಲಿಗೂ ನಡೆದೇ ಬಿಡುವುದು.

**ಸುಬ್ರಾಯ**— ಅವನ ಮನೆಯಲ್ಲಿ ಅದರ ತೊಳೆ ಒಂದು ಉಳಿಯಲಿಕ್ಕಿಲ್ಲ. ಎಂಟು ದಿನಗಳಿಂದ ಮನೆಯ ಮುಂದೆ ನಂಟರು ಅಂದರೆ ಬಂದರದ ಭಂಡಸಾಲೆಯಲ್ಲಿ ಹೆಗ್ಗಣ ತಿರುಗಿದ ಹಾಗೆ ತಿರುಗಿತ್ತಿದ್ದರು. ಅದರಲ್ಲಿ ಕೋಳಿ, ಹಲಸಿನ ಹಣ್ಣು ಎಲ್ಲ ಉಳಿಯುವುದುಂಟೇ?

**ಪರಮೇಶ್ವರಯ್ಯ**— ಅದು ವ್ಯರ್ಥವೇ ಸರಿಯೋ! ಹಾಗಾದರೆ ಬ್ರಾಹ್ಮಣರಿಗೆ ಹಲಸಿನ ಹಣ್ಣಿನ ಪರಮಾನ್ನ ಆದ ಹಾಗೇ ಸರಿ.

**ಸುಬ್ರಾಯ**— ನಿಮಗೆ ಮರುಳು, ಪರಮೇಶ್ವರಯ್ಯ. ಬ್ರಾಹ್ಮಣರಿಗೆ ಹಲಸಿನ ಹಣ್ಣೇ ಬೇಕೇ? ಚೆನ್ನಾಗಿ ಬೆಲ್ಲಗಿಟ್ಟಿಸಿದರೆ ಗರಗಸದ ಹುಡಿಯಿಂದ ಪಾಯಸಮಾಡಿದರೂ ಹೊಡೆಯುತ್ತಾರೆ.

**ಪರಮೇಶ್ವರಯ್ಯ**—ಹಾಗೆಯೇ ಸರಿ. ಹಲಸಿನ ಬದಲಿಗೆ, ಹೆಸರು ಪಾಯಸಮಾಡುವುದು.

**ಸುಬ್ರಾಯ**—ದೇಹಕ್ಕೂ ತಂಪು. ಒಳ್ಳೇ ಉಪ್ಪೂರು ಬೆಲ್ಲ ಹಾಕಿದರೆ ನಾಲ್ಕು ನಾಲ್ಕು ಕೈಮುರಿಗೆ ಹೊಡೆಯುತ್ತಾರೆ. ನಿಮ್ಮಲ್ಲಿಗೆ ನಮ್ಮ ಐತಾಳರಲ್ಲವೋ ಬರುವುದು? ಐತಾಳರಿಗೆ ಹೆಸರುಬೇಳೆ ಅಂದರೆ ಪ್ರಾಣ. ಆಯಿತು ಹೋಗಿ, ನನಗೂ ಹೊತ್ತಾಯಿತು . . . .

**ಪರಮೇಶ್ವರಯ್ಯ**-ಹೋಗುತ್ತೇನೆ. ನೆನಪಿರಲಿ . . . . (ತೆರಳುವರು)

**ಸುಬ್ರಾಯ**—ಮಾಣೀ, ಲಚ್ಚಣ್ಣ! . . . .

(ಕೋ . . . . ಎಂದು ಲಚ್ಚಣ್ಣ ಹೊರಗಿಂದ ಕೂಗುವನು.)

ರುಕ್ಮಿಣಿ ಕಿವಿಯೆಷ್ಟು ಬೊಡ್ಡೋ, ಅಷ್ಟು ಚುರುಕು ನಮ್ಮ ಲಚ್ಚನ ಕಿವಿ. ಬಂದೆಯಾ ಪುಟ್ಟ? ಪರಮೇಶ್ವರಯ್ಯ ಹೋದಕೂಡಲೇ ಹೊರಗಿನ ಹೆಬ್ಬಾಗಿಲು ಹಾಕಿಬಿಡು ಏನು. ನಾನು ಮೀಯಲಿಕ್ಕೆ ಹೋಗುತ್ತೇನೆ.

**ಲಚ್ಚಣ್ಣ**—(ಬಂದು) ನಾನೂ ಕೆರೆಗೆ ಬರುತ್ತೇನೆ.

**ಸುಬ್ರಾಯ**—ದಿನಕ್ಕೆ ಎಷ್ಟು ಸಾರಿ ಕೆರೆಯಲ್ಲಿ ಸೊಕ್ಕುವುದು? ಬೇಡ. ಇಲ್ಲಿರು. ಯಾರಾದರೂ ಬಂದಾರು.

**ಲಚ್ಚಣ್ಣ**—ಪೀಪಿರಿ!

**ಸುಬ್ರಾಯ**—ಪೀಪಿರಿ ತರುತ್ತೇನಪ್ಪ . . . . ಸುಬ್ರಾಯ ದೇವರ ಜಾತ್ರೆಯೂ ಹತ್ತಿರ ಬಂತು.

**ಲಚ್ಚಣ್ಣ**—ಶನಿವಾರ ಸಂತೆಗೆ ತರುತ್ತೇನೆ ಎಂದು ಈಗ ಜಾತ್ರೆಗೆ ಅನ್ನುತ್ತೀಯಾ?

**ಸುಬ್ರಾಯ**—ಫಕ್ಕನೆ ಸಿಕ್ಕದೆ ಹೋದರೆ?

**ಲಚ್ಚಣ್ಣ**—ಎಲ್ಲಾ ಸಿಕ್ಕುತ್ತೆ. ನಾನು ಕಂಡಿದ್ದೇನೆ. ಆ ಕೆಂಪ ಗಿನ ಮಣಿ ಸರಕಿನ ಸಾಹಿಬನ ಹತ್ತಿರ ತುಂಬಾ ಪೀಪಿರಿ ಇದೆ. ನಾನೇ ಸಂತೆಗೆ ಬಂದು ತೋರಿಸುತ್ತೇನೆ . . . .

**ಸುಬ್ರಾಯ**—ಆಗಲಿ, ಈಗ ಹೋಗು. ಅಬ್ಬ! ನಮ್ಮ ಲಚ್ಚನ ಹಟ ಅಂದರೆ ಹಟ. ಕುರುಪ ಹಿಡಿದದ್ದೇ ಬಡಕ್ಕಿಗೆ! (ಹೋಗುತ್ತಾ) ಆದರೂ ಹಟಬೇಕು. ಹಟ ಇಲ್ಲದಿದ್ದವರಿಂದ ಏನಾಗುತ್ತೆ? (ತೆರಳುವನು.)

**ಲಚ್ಚಣ್ಣ**—ಅಕ್ಕ, ಅಕ್ಕ . . . .

**ರುಕ್ಮಿಣಿ**—(ಓಡಿ ಬಂದು) ಕರೆದಿಯೇ ಲಚ್ಚಣ್ಣ? . . . .

**ಲಚ್ಚಣ್ಣ**—ಈಗ, ಈಗ . . . . ಅಪ್ಪಯ್ಯ ಪೀಪಿರಿ ತಂದುಕೊಡುತ್ತಾರೆ ಎಂದರು . . . . ನಾನು ನಿನಗೆ ಕೊಡುತ್ತೇನೆ ಅಂದಿದ್ದೆ. ನನಗೆ ಇನ್ನೊಂದು ತರಲಿಕ್ಕೆ ಉಪಾಯಮಾಡುತ್ತೇನೆ ಅಂದಿದ್ದೆ. ಆದರೆ ಅಪ್ಪಯ್ಯ ನಿನ್ನ ಕೈಯಲ್ಲಿ ನನ್ನ ಪೀಪಿರಿ ಕಂಡರೆ ಏನು ಮಾಡುವುದು?

**ರುಕ್ಮಿಣಿ**—ಬೇಡ, ನನಗೆ ನಿನ್ನ ಪೀಪಿರಿ ಬೇಡವೇ ಬೇಡ. ಭಾರೀ . . . . ಇವನು! ಪೀಪಿರಿ ಕೊಡುತ್ತೇನೆ ಎಂದು ಈಗ ಅಪ್ಪಯ್ಯ ಕಂಡರೆ ಅಂತ ಹೆದರಿಸುತ್ತಾನೆ . . . . ನನಗೆ ನಿನ್ನ ಪೀಪಿರಿ ಬೇಡ ಏನು ಬೇಡ . . . . ನಿನ್ನ ಪೀಪಿರಿ ನಿನಗೆ . . . . ನನ್ನ ಮುಳ್ಳ ನನಗೆ. ಮತ್ತೂ ಹೆಚ್ಚು ಮಾತನಾಡಿದರೆ ಆ ದಿನ ನಾನು ನಿನಗೆ ಕೊಟ್ಟ ತಂಬಿಟ್ಟಿನ ಉಂಡೆ ನನಗೆ ಕೊಡು . . . . ನನ್ನ ಕರಡಿಗೆ ನನಗೆ ಕೊಡು . . . . ನಾನು ಕೊಟ್ಟದ್ದೆಲ್ಲ ನನಗೆ ಕೊಡು!

**ಲಚ್ಚಣ್ಣ**—ಹುಂ. ಹಾಗಾದರೆ . . . . ನನ್ನ ಪೀಪಿರಿ ಬೇಡವೋ ನಿನಗೆ?

**ರುಕ್ಮಿಣಿ**—ನಿನ್ನ ಪೀಪಿರಿ! ಬಂದುಕೊಳ್ಳಲಿ ಅದು. ಅಪ್ಪಯ್ಯ ತರುವುದು ಸುಳ್ಳೇ. ಕಳೆದ ಸಂತೆಗೆ ತರುತ್ತೇನೆ ಅನ್ನಲಿಲ್ಲವೇ? ತಂದರೇ? ಅದರ ಮೊದಲಿನ ಸಂತೆಗೆ ತರುತ್ತೇನೆ ಅಂದರಲ್ಲ? ತಂದರೇನು? ಅವರು ಸುಮ್ಮನೆ ಹೇಳುವುದು. ನಿನ್ನ ಪೀಪಿರಿ ನಂಬಿ ನನ್ನ ಮುಳ್ಳ ನಿನಗೆ ಕೊಟ್ಟರೆ . . . .

**ಲಚ್ಚಣ್ಣ**—ಅಪ್ಪಯ್ಯ ಪೀಪಿರಿ ತಂದುಕೊಟ್ಟರೆ? . . . .

**ರುಕ್ಮಿಣಿ**—ನನಗೆ ಅಮ್ಮ ಪೀಪಿರಿ ತಂದುಕೊಡುತ್ತೇನೆ ಅಂದಿದ್ದಾಳೆ.

**ಲಚ್ಚಣ್ಣ**—ಅಮ್ಮ ಪೀಪಿರಿ ತರುವುದು ಸುಳ್ಳೇ. ಅಮ್ಮನ ಹತ್ತಿರ ದುಡ್ಡು ಉಂಟೇ?

**ರುಕ್ಮಿಣಿ**—ಅಮ್ಮನ ಹತ್ತಿರ ಸುಮಾರು ದುಡ್ಡಿದೆ. ನಾನು ಕಂಡಿದ್ದೇನೆ. ನಾಗಂದಿಗೆಯಲ್ಲಿಟ್ಟಿದ್ದಾಳೆ.

**ಲಚ್ಚಣ್ಣ**—ಸುಳ್ಳೇ, ನಾಗಂದಿಗೆಯಲ್ಲಿ ದುಡ್ಡೇ ಇಲ್ಲ. ನಾನು ಬೆಳಿಗ್ಯೆ ನೋಡಿದ್ದೇನೆ.

**ರುಕ್ಮಿಣಿ**—ಪೆಟ್ಟಿಗೆಯಲ್ಲಿ ಇದೆ.

**ಲಚ್ಚಣ್ಣ**—ಪೆಟ್ಟಿಗೆಯಲ್ಲಿರುವುದು ಚಿನ್ನ.

**ರುಕ್ಮಿಣಿ**—ಚಿನ್ನ ಮಾರುತ್ತಾಳೆ.

**ಲಚ್ಚಣ್ಣ**—ಮಾರಿದರೆ ಅಪ್ಪಯ್ಯ ಹೊಡೆಯುತ್ತಾನೆ.

**ರುಕ್ಮಿಣಿ**—ಅಮ್ಮ ಹೊಡೆಯುತ್ತಾಳೆ . . . . ನೀನು ಹೋಗು. ನಿನಗೆ, ಅಮ್ಮ ಪೀಪಿರಿ ತಂದುಕೊಡುವುದು ಹೊಟ್ಟೆಕಿಚ್ಚು. ಅದಕ್ಕೆ ಹೀಗೆಲ್ಲ ಮಾತನಾಡುತ್ತೀ . . . .

**ಲಚ್ಚಣ್ಣ**—ಅಪ್ಪಯ್ಯ ನನಗೆ ಪೀಪಿರಿ ತಂದು ಕೊಡುವುದು ನಿನಗೆ ಹೊಟ್ಟೆಕಿಚ್ಚು . . . .

**ರುಕ್ಮಿಣಿ**—(ಅಣಕಿಸುತ್ತಾ) ಹೌದು, ಹೊಟ್ಟೆಕಿಚ್ಚು . . . .

**ಲಚ್ಚಣ್ಣ**—ನೀನು ಅಣಕಿಸುವುದು ಬೇಡ.

**ರುಕ್ಮಿಣಿ**—ನೀನು ಅಣಕಿಸುವುದು ಬೇಡ.

**ಲಚ್ಚಣ್ಣ**—ನಾನು ಹೇಳಿದ ಹಾಗೆ ಹೇಳುವುದು!

**ರುಕ್ಮಿಣಿ**—ನಾನು ಹೇಳಿದ ಹಾಗೆ ಹೇಳುವುದು!

**ಲಚ್ಚಣ್ಣ**—ನಿನಗೆ ನನ್ನ ಸುದ್ದಿ ಬೇಡ . . . .

**ರುಕ್ಮಿಣಿ**—ನಿನಗೆ ನನ್ನ ಸುದ್ದಿ ಬೇಡ . . . .

**ಲಚ್ಚಣ್ಣ**—ನೀನು ಅಣಕಿಸಿದರೆ ನೋಡು . . . . (ಎಂದು ಅಕ್ಕನನ್ನು ಹೊಡೆಯುವನು. ಅಕ್ಕನು ಇವನನ್ನು ಹೊಡೆಯುವಳು. ತಾನು ಗಟ್ಟಿಯಾಗಿ ಅಳುವನು) ಅಮ್ಮಾ! ಇಲ್ಲಿ ರುಕ್ಮಿಣಿ ನನ್ನನ್ನು ಹೊಡೆದಳು! . . .

**ರುಕ್ಮಿಣಿ**—ಮೊದಲು ನೀನಲ್ಲವೋ ಹೊಡೆದದ್ದು?

(ಗೌರಮ್ಮ ಒಳಗಿನಿಂದ 'ರುಕ್ಮಿಣಿ—ರುಕ್ಮಿಣಿ' ಎಂದು ಎರಡು ಮೂರು ಸಲ ಕರೆಯುವಳು. ರುಕ್ಮಿಣಿಯು ಧಾವಿಸುವಳು. ಲಚ್ಚಣ್ಣನು ಅತ್ತಿತ್ತ ತಿರುಗಾಡುತ್ತಲಿರುವಷ್ಟರಲ್ಲಿ ಭಂಗಾರಮ್ಮ ಬರುವಳು. ಅವಳನ್ನು ಕಂಡು—)

**ಲಚ್ಚಣ್ಣ**—ಈ ಭಂಗಾರಿ ಯಾವ ಬಾಗಿಲಿನಿಂದ ಬಂದಳು? ಹೆಬ್ಬಾಗಿಲ ಚಾವಡಿ ಬಾಗಿಲು ಹಾಕಲೇ ಇಲ್ಲವೇ? . . . . ಬಂಗಾರಿ, ಬಂಗಾರಿ . . . . ಅಪ್ಪಯ್ಯ ಇಲ್ಲ, ಮಿಂಯಲಿಕ್ಕೆ ಹೋಗಿದ್ದಾರೆ . . . .

**ಬಂಗಾರಮ್ಮ**—ಕೆರೆಗೆ ಹೋದರೇ? ಅಮ್ಮ ಇದ್ದಾರಲ್ಲ. ಅಮ್ಮ ಬರಲಿಕ್ಕೆ ಹೇಳಿದ್ದಳು . . . . ಹ್ಯಾಗಿದ್ದೀ ಪುಟ್ಟು? ಅಮ್ಮನಿಗೆ ಹೇಳುತ್ತೀಯಾ ನಾ ಬಂದೆ ಅಂತ. ರುಕ್ಮಿಣಿಗೆ ಹೇಳಿದರೂ ಸಾಕು.

**ಲಚ್ಚಣ್ಣ**—ಅಮ್ಮ ಒಲೆ ಮುಂದಿದ್ದಾಳೆ. ಇವತ್ತು ನಮ್ಮನೆಯಲ್ಲಿ ಅಪ್ಪಚ್ಚು ಮಾಡುತ್ತಾರೆ . . . .

**ಬಂಗಾರಮ್ಮ**—ರುಕ್ಮಿಣಿಯನ್ನು ಕರೆ.

**ಲಚ್ಚಣ್ಣ**—ಅವಳ ಹತ್ತಿರ ನಾನು ಮಾತನಾಡುವುದಿಲ್ಲ.

**ಬಂಗಾರಮ್ಮ**—ಜಗಳವೋ? ಅಕ್ಕನ ಹತ್ತಿರ ಆಗದಪ್ಪ. ಹಾಗೆಲ್ಲ ಮಾಡಬಾರದು.

**ಲಚ್ಚಣ್ಣ**—ಅವಳು ಜೋರಾಗಿದ್ದಾಳೆ. ಅವಳಿಗೆ ನನ್ನನ್ನು ಕಂಡರೆ ಹೊಟ್ಟೆಕಿಚ್ಚು.

**ಬಂಗಾರಮ್ಮ**—ಹೌದೋ? . . . . ಜೋರು ಹೊಟ್ಟೆಕಿಚ್ಚೆ? ಹಾಗಾದರೆ ಇಲ್ಲಿ ನೋಡು, ಅಮ್ಮನ ಹತ್ತಿರ ಹೋಗಿ ನಾನು ಬಂದಿದ್ದೇನೆ ಅನ್ನು.

**ಲಚ್ಚಣ್ಣ**—ನಾನು ಅನ್ನುವುದಿಲ್ಲ. ನೀನು ರುಕ್ಮಿಣಿಯ ದೋಸ್ತಿ. ಬೇಕಾದರೆ ನೀನೇ ಹೋಗು.

**ಬಂಗಾರಮ್ಮ**—ಅವರು ಕೆಲಸದಲ್ಲಿರಲಿಕ್ಕೂ ಸಾಕು. ನೋಡು, ನನಗೆ ಒಂದು ತುಂಡು ಹಲಸಿನ ಹಣ್ಣು ಕೊಡುತ್ತೇನೆ ಅಂದಿದ್ದಾಳೆ ಅಮ್ಮ. ತೆಗೆದುಕೊಂಡು ಬಂದರೂ ಸಾಕು. ನನ್ನ ಗಿಣಿ ಬುದ್ಧಿವಂತ! ನಮ್ಮ ಲಚ್ಚನಷ್ಟು ಹುಷಾರು ಯಾರು ಇಲ್ಲಪ್ಪ!

**ಲಚ್ಚಣ್ಣ**—ಹಲಸಿನ ಹಣ್ಣು ಎಲ್ಲ ಚಟ್ಟು! ಅದನ್ನು ಇವತ್ತು ಪಾಯಸ, ಮುಳ್ಕ ಮಾಡಿಯಾಯಿತು . . . .

**ಬಂಗಾರಮ್ಮ**—ಸುಳ್ಳೇ.

**ಲಚ್ಚಣ್ಣ**—ನನಗೇನು? ನೀನೇ ಹೋಗಿ ನೋಡು. ನಾನು ಒಳಗೆ ಹೋಗುವುದಿಲ್ಲ. ಹೆಬ್ಬಾಗಿಲ ಚಾವಡಿ ಬಾಗಿಲು ಹಾಕಿ ಬರಬೇಕು. ಹೋಗುತ್ತೇನೆ, ಹೋಗುತ್ತೇನೆ . . . . (ತೆರಳುವನು.)

**ಬಂಗಾರಮ್ಮ**—ಅಮ್ಮಾ! ಅಮ್ಮಾ! (ತುಸು ತಡೆದು) ಗೌರಮ್ಮ! ನಾನು ಬಂದಿದ್ದೇನೆ. ಏನೊ ಕೆಲಸ ಇದೆ ಅಂದಿರಲ್ಲ.

**ಗೌರಮ್ಮ**—(ಬಂದು) ಬಂಗಾರಿ, ಒಟ್ಟು ಮೋಸ ಆಯಿತು ನಿನಗೆ ಹೇಳಿದ್ದು ಹೌದು. ಆದರೆ ಒಡೆದು ನೋಡುವಾಗ ಹಣ್ಣು ಕೊಳೆತು ಹುಳ ಆಗಿತ್ತು. ಏತಕ್ಕೂ ಬೇಡವೆಂದು ಕಲಗಚ್ಚಿಗೆ ಹಾಕಿತು. ನಾಳೆ ಎಲ್ಲಿಂದಲೋ ಒಂದು ತರುವ ಅಂದರಪ್ಪ ಯಜಮಾನರು. ನಾನು ಹೇಳಿ ಕಳುಹಿಸುತ್ತೇನೆ, ಏನು? ಬಂಗಾರಿ, ಜಾಜಿ ತಂದು ಇರಿಸಿದೆಯೋ? ತುಂಬ ಬೇಕಾದೀತು. ಇಷ್ಟೆಲ್ಲ ಅಂಗಣ ಪಡಸಾಲೆಗೆ ಆಗಬೇಡವೇ?

**ಬಂಗಾರಮ್ಮ**—ಇಲ್ಲದಿದ್ದರೆ ಏನು ಮಾಡುವುದು. ಮಗು ಅಳುತ್ತದೆ. ಏನಾದರೂ ಹಪ್ಪಳದ ಚೂರುಗೀರು ಕೊಡುತ್ತೀರಾ? ಇಲ್ಲದಿದ್ದರೆ ಏನಾದರೂ ತಿಂಡಿ ತೀನಿ . . . .

**ಗೌರಮ್ಮ**—ಬಂಗಾರಮ್ಮ, ನಿನ್ನಾಣೆಗೂ ಏನು ಕಾಣುವುದಿಲ್ಲಪ್ಪ. ಹಪ್ಪಳ ಈ ವರುಷ ತಿಂಗಳಿಗೆ ಮುಂಚೆಯೇ ಪಟ್ಟ ಆಯಿತು. ಇನ್ನೇನಾದರೂ ಚಕ್ಕುಲಿಗಿಕ್ಕಲಿ ಉಂಟು ಅಂದರೆ, ಚೌತಿ ಸಮಯಕ್ಕೆ ನಾನು ಮೊಯಲಿಕ್ಕಾಗಿ, ಮಕ್ಕಳ ಬಾಯಿಗೆ ಏನಿಲ್ಲದಾಯಿತು. ನೀನು ಜಾಜಿ ತೆಗೆದುಕೊಂಡು ನಾಳೆ ಸಾಯಂಕಾಲ ಬಾ, ಏನು? ಇನ್ನೂ ಅಡಿಗೆಯಾಗಲಿಲ್ಲ, ಹೋಗುತ್ತೇನೆ . . . . (ಒಳಕ್ಕೆ ಹೋಗುವಳು.)

**ಬಂಗಾರಮ್ಮ**—ಇವರು ರಕ್ಕು ಅನ್ನುತ್ತಾರೆ ನನ್ನ ಹತ್ತಿರ. ಲಚ್ಚಣ್ಣ ಹೇಳಿದ ಹಾಗೆ ಏನೋ ಒಳಗೆ ಮಾಡುತ್ತಿದ್ದಾರೆ. ಪರಿಮಳ ಸಹ ಬಂದಾಗೆ ಆಗುತ್ತೆ . . . . ಇಲ್ಲ ಅಂದ ಮೇಲೆ ಏನು ಮಾಡುವುದು ಮತ್ತೆ. ಬೇಡುವವರು ಕೊಡಿ ಅನ್ನಲಿಕ್ಕೆ ಬರುತ್ತದೆಯೇ? (ತೆರಳುವಳು.)

(ಸೀತಾರಾಮಯ್ಯ, ಸದಾಶಿವಯ್ಯನವರು ಬರುವರು. ಜತೆಯಲ್ಲಿ ಲಚ್ಚಣ್ಣ ಇದ್ದಾನೆ.)

**ಲಚ್ಚಣ್ಣ**—ಅಪ್ಪಯ್ಯ ಇಲ್ಲ. ಮಿಂದುಕೊಂಡು ಎಲ್ಲೋ ಊಟಕ್ಕೆ ಹೋಗುತ್ತೇವೆ ಅಂತ ಹೊರಟುಹೋದರು. ಸಾಯಂಕಾಲದ ತನಕ ಬರಲಿಕ್ಕಿಲ್ಲ.

**ಸೀತಾರಾಮಯ್ಯ**—ಏನು ಮಾಡುವುದು ಸದಾಶಿವಯ್ಯ? ಬಂದದ್ದು ವ್ಯರ್ಥವಾಯಿತು. ಕೆಲಸ ಆಗುವುದು ಹೇಗಿತ್ತೋ. ಆದರೂ ಕೇಳುವುದಕ್ಕೆ ಅಡ್ಡಿಯಿಲ್ಲವಿತ್ತು. ಹೋಗುವ ಏಳಿ.

**ಸದಾಶಿವಯ್ಯ**—ಸ್ವಲ್ಪ ತಡಿ ಮಹಾರಾಯ, ಸ್ವಲ್ಪ ಬೆಲ್ಲ ನೀರಾದರೂ ಕೇಳಿ ಕುಡಿದುಕೊಂಡು ಹೋಗುವ. ಮಗು, ಒಳಗೆ ಹೋಗಿ ಸ್ವಲ್ಪ ಬೆಲ್ಲ ನೀರು ತರುತ್ತೀಯಾ?

(ಹುಡುಗನು ಒಳಗೆ ಹೋಗುತ್ತಾನೆ)

**ಸೀತಾರಾಮಯ್ಯ**— ಹೌದೋ ಸದಾಶಿವಯ್ಯ, ಏನು ವಿಶೇಷ ಇವತ್ತು? ಹಲಸಿನ ಹಣ್ಣಿನ ಮುಳ್ಕದ ಪರಿಮಳ ಬರುತ್ತದೆ.

**ಸದಾಶಿವಯ್ಯ**— ನಿನಗೆ ಭ್ರಮೆ. ಹಲಸಿನ ಹಣ್ಣು ಊರಲ್ಲೆಲ್ಲ ಮುಗಿದಾಯಿತು.

**ಸೀತಾರಾಮಯ್ಯ**— ಎಲ್ಲಿ ಮುಗಿದರೂ ನಮ್ಮ ಸುಬ್ರಾಯರ ಮನೆಯಲ್ಲಿ ಮುಗಿಯುವುದಂತಿಲ್ಲ. ಮರ ಉಂಟು ಅವರಿಗೆ ಒಂದೆ ರಡೊ? . . . . ನಿಜಕ್ಕೂ ಹಲಸಿನ ಹಣ್ಣಿನದೇ ಪರಿಮಳ. ಈ ವರುಷ ಇಡೀ ಕಾಯಿಲೆಯಾಗಿ ಒಂದು ತೊಳೆಯ ರುಚಿನೋಡಲಿಲ್ಲ ನಾನು.

**ಸದಾಶಿವಯ್ಯ**— ನನ್ನ ಮೂಗಿಗೆ ಶೀತವಾಗಿ, ಪರಿಮಳವೂ ಇಲ್ಲ, ವಾಸನೆಯೂ ಇಲ್ಲ . . . .

(ಸ್ನಾನ ಮಾಡಿ ಸುಬ್ರಾಯರು ಬರುತ್ತಾರೆ.)

**ಸುಬ್ರಾಯ**— ಇದೇನಪ್ಪ, ಎರಡೆರಡು ಅರಿಷ್ಟಗಳು ಮನೆ ಜಗು ಲಿಯ ಮೇಲೆ ಕಾದು ಕುಳಿತಿದ್ದಾವೆ! ಅತ್ತಲಾಗಿ ಪರೇಲರೂ ಇಲ್ಲ . . . . ಇವು ಯಾಕೆ ಬಂದುವಪ್ಪ.

**ಸೀತಾರಾಮಯ್ಯ**— ಏನು ಸುಬ್ರಾಯರೇ, ಅಪೂರ್ವಕ್ಕೆ ಮನೆ ಯಲ್ಲಿ ಹಲಸಿನ ಹಣ್ಣಿನ ಮುಳ್ಕ ಮಾಡಿಸಿದ ಹಾಗೆ ಕಾಣುತ್ತದೆ. ಏನು ವಿಶೇಷ ಇವತ್ತು? ಅಗ್ಗಕ್ಕೆ ಎರಡು ಅತಿಥಿಗಳು ಬಂದಿದ್ದಾರೆ ನೋಡಿ!

**ಸುಬ್ರಾಯ**— ಅತಿಥಿಗಳು ಬಂದದ್ದು ಸಂತೋಷವೇ ಆಯಿತು. ಆದರೆ ಹಲಸಿನ ಹಣ್ಣನ್ನು ಮಾತ್ರ ಬ್ರಹ್ಮ ಈ ವರುಷ ಹಣೆಯ ಮೇಲೆ ಬರೆಯದೆ ಹೋದ.

**ಸೀತಾರಾಮಯ್ಯ**— ಛೇ, ಪರಿಮಳ ಬರುತ್ತದೆ!

**ಸುಬ್ರಾಯ**— ಅದು ನಮ್ಮನೆಯಲ್ಲಿ ತಪ್ಪಿದ್ದಲ್ಲ. ಹಣ್ಣಿಲ್ಲ ದಿದ್ದರೂ ಹಣ್ಣಿನ ಪರಿಮಳ ನಮ್ಮಲ್ಲಿ ತುಂಬಾ . . . .

**ಸದಾಶಿವಯ್ಯ**— ಹಾಗೆಂದರೆ?

**ಸುಬ್ರಾಯ**—ನಮ್ಮ ಬೇಲಿಯಲ್ಲಿನ ಕಾಡು ಹಿಂಡಲುಗಳಲ್ಲಿ ತಪ್ಪದೆ ಕಡಂಬಳ ಹಾವು ಇದೆ. ಅದರ ಪರಿಮಳ ಇದು. 'ಕೆಲವರ ಮೂಗಿಗೆ ಹುರಿದ ಹಪ್ಪಳ, ಕೆಲವರಿಗೆ ಅಂಬೋಡೆ, ಕೆಲವರಿಗೆ ಮುಳ್ಕ'- ಅಂತ ಕಾಸೂ ಖರ್ಚಿಲ್ಲದೆ ಔತನ ನಡೆಸುತ್ತದೆ.

**ಸದಾಶಿವಯ್ಯ**—ಸೀತಾರಾಮು, ಒಳ್ಳೇ ಮೂಗು ನಿನ್ನದು. ಹೋಗೋಣ .... ನೀರು ಬರಲೇ ಇಲ್ಲ! ಇಲ್ಲ, ತಂದನಲ್ಲ. ನಿಮ್ಮ ಲಚ್ಚಣ್ಣ ಅಂದರೆ ತೇಟು ಮರಿಚಿಟಕ.

**ಸುಬ್ರಾಯ**—(ಬರೀ ನೀರನ್ನು ಕಂಡವರಂತೆ) ಲಚ್ಚ, ಬೆಲ್ಲ ತರಲೇ ಇಲ್ಲವೇನೋ?

**ಲಚ್ಚಣ್ಣ**—ಅಮ್ಮ ಅಂಗಣ ಸಾರಿಸುತ್ತಿದ್ದಾಳೆ!

**ಸದಾಶಿವಯ್ಯ**—ಇರಲಿ, ಬೆಲ್ಲಗಿಲ್ಲ ಏನು ಬೇಡ, ಹೊತ್ತಾಯಿತು. (ನೀರು ಕುಡಿಯುತ್ತ) ಹೌದೋ ಸುಬ್ರಾಯರೇ, ನಿಮಗೆ—ನಮ್ಮ ಪರಮೇಶ್ವರಯ್ಯ ಏನು ಗಡಿಬಿಡಿಯಲ್ಲಿದ್ದಾನೆ ತಿಳಿದಿದೆಯೋ? ಏನೋ ಹಣ ಹಣ ಅಂತ ತಿರುಗುತ್ತಿದ್ದಾನೆ. ಯಾಕೆ, ಏನು, ಎಂಬುದೇನು ತಿಳಿಯಿತೋ? ....

**ಸುಬ್ರಾಯ**—ಯಾರು ಪರಮೇಶ್ವರಯ್ಯನೇ? ಅವನಿಗೇಕೆ ಹಣ?

**ಸದಾಶಿವಯ್ಯ**—ನಿಮಗೂ ಗೊತ್ತಿಲ್ಲವೋ?

**ಸುಬ್ರಾಯ**—ಅವನನ್ನು ಕಾಣದೆ ತಿಂಗಳು ಒಂದಾಗುತ್ತ ಬಂತು. ಏನು ಕೋರ್ಟು ಗೀರ್ಟು ಲೇವಾದೇವಿ ಮೇಲಿದ್ದಾನೋ .... ನಿಮಗೆ ಯಾರು ಹೇಳಿದರು ಸುದ್ದಿಯನ್ನು? ....

**ಸದಾಶಿವಯ್ಯ**—ಪರೇಲರು ಅನ್ನುತ್ತಿದ್ದರು. ಅವನಿಗೆ ಕೈಕಾಲು ಬಡಿತ ಶುರುವಾಗಿದೆ. ಹಣ ೪೦೦ ರೂಪಾಯಿ ನಾಳೆ ಶುಕ್ರವಾರದೊಳಗೆ ಕಟ್ಟದಿದ್ದರೆ ದೊಡ್ಡದೊಂದು ಗಂಟೇ ಮುಣುಗುವುದಂತೆ! ಅದು ಸಿಕ್ಕದ ಹಾಗೆ ಮಾಡುವುದು ಅವರ ಛಲ.

**ಸುಬ್ರಾಯ**—ನಮ್ಮ ಪರೇಲರು ಸುಮ್ಮನಿರುವುದಿಲ್ಲಪ್ಪ. ಪರಮೇಶ್ವರಯ್ಯನವರ ಬಿಡುಬಾಲ ಹಿಡಿದು ಬಿಟ್ಟಿದ್ದಾರೆ . . . . ಯಾರಿಗೆ ಜಯವೋ, ಯಾರಿಗೆ ಅಪಜಯವೋ! ಆಗಲಿ . . . . ಆಗಲಿ . . . . ಏನು ಎದ್ದಿರಾ? . . . . ಊಟಕ್ಕೆ ನಿಲ್ಲಿ ಅನ್ನುತ್ತಿದ್ದೆ . . . . ಮನೆಯಲ್ಲಿ ಅವಳಿಗೂ ಮೈ ನೆಟ್ಟಗಿಲ್ಲದೆ ಅಡುಗೆ ಒಲೆ ಮುಂದೆ ನಾನೇ ಆಗಾಗ ನುಳಿಯಬೇಕಾಗುತ್ತದೆ . . . ಹೋಗಿರಿ, ಯಾಕೆ ನಿಲ್ಲಿಸಿಕೊಳ್ಳುವುದು. ಮನೆಗಾದರೂ ಹೋಗಿ ಊಟಮಾಡಿ . . . . (ಒಳಕ್ಕೆ ತೆರಳುವರು)

**ಸೀತಾರಾಮಯ್ಯ**—ಸುಬ್ರಾಯರಿಗೂ ಸಂಗತಿ ತಿಳಿದಿಲ್ಲ ಅಂದರೆ ಆಶ್ಚರ್ಯ. ಇನ್ನು ಯಾರ ಮುಖಾಂತರ ಅವನು ಕಟಿಪಿಟಿ ಮಾಡುತ್ತಾನಂತೆ? ಬಂದರೆ ಇಲ್ಲಿಗೇ ಬರಬೇಕು ಅಂದರು ಪರೇಲರು. ಹೋಗುವ.

**ಸದಾಶಿವಯ್ಯ**—ಹೋಗುವ. ಬಂದದ್ದು ವ್ಯರ್ಥವಾಯಿತು. ನಿನ್ನ ಹಲಸಿನ ಹಣ್ಣಿನ ಮುಳ್ಳವೂ ಇಲ್ಲೇ ಉಳಿಯಿತು.

**ಸೀತಾರಾಮಯ್ಯ**—ಅದರ ಪರಿಮಳ ಯಾವಾಗ ಬಂದರೂ ಸಿಗುತ್ತದಲ್ಲ! . . . . ನನಗೆ ಇನ್ನೂ ಸಂಶಯವೇ. ಒಳಗೆ ಜೋರಿನ ಒಗ್ಗರಣೆ ಶಬ್ದ ಕೇಳಿತು.

**ಸದಾಶಿವಯ್ಯ**—ಮನೆಯೆಂದು ಮಾಡಿಕೊಂಡವರು ಒಗ್ಗರಣೆ ಕಾಯಿಸದೆ ಇರುತ್ತಾರೆಯೇ? (ಇಬ್ಬರೂ ಹೋಗುವರು)

**ಸುಬ್ರಾಯ**—(ತಿರುಗಿ ಬಂದು) ಅರೇ, ಪರೇಲರು ಏನು ಇನ್ನೂ ಕಾಣುವುದಿಲ್ಲ? ಗೌರಿ! ಅಡುಗೆಯೆಲ್ಲಾ ಆಯಿತೇ? ಹೇಗೆ?

**ಗೌರಮ್ಮ**—(ಬಂದು) ಒಳಗಿನ ಕೆಲಸವೆಲ್ಲಾ ಮುಗಿಯಿತು. ಆದರೆ ಬಾಳೆ ಎಲೆ ಇಲ್ಲ. ಹಿತ್ತಲಿಗೆ ಹೋಗಿ ತೆಗೆದುಕೊಂಡು ಬರುತ್ತೀರಾ?

**ಸುಬ್ರಾಯ**—ಆಗಲೇ ಹೇಳಿದ್ದರೆ ಸ್ನಾನಕ್ಕೆ ಹೋದವನೇ ತರುತ್ತಿದ್ದೆ. ಈಗ ಬಿಸಿಲಿನಲ್ಲಿ ನನ್ನನ್ನು ದಣಿಸಿದರೇ ನಿನಗೆ ಸಂತೋಷವೆಂದು ಕಾಣುತ್ತದೆ. ಆಗಲಿ ಹೋಗುತ್ತೇನೆ . . . . ಅಷ್ಟರೊಳಗೆ ಇನ್ನೆಷ್ಟು ಹಪ್ಪುಗಳು ಹಲಸಿನ ಹಣ್ಣಿನ ಪರಿಮಳಕ್ಕೆ ಬಂದು ಕಾಯಬೇಕೋ! . . . . (ತೆರಳುವನು.)

(ಗೌರಮ್ಮ ಒಳಗೆ ಹೋಗುವಳು. ತಿಂಡಿಯನ್ನು ಹಿಡಿದುಕೊಂಡು ರುಕ್ಮಿಣಿಯು ಹೊರಗೆ ಬರುವಳು. ಲಚ್ಚಣ್ಣಗೆ ಬಾಯಿನೀರು ಬರಲು ತೊಡಗುವುದು.)

**ಲಚ್ಚಣ್ಣ**—ತಾನು ಒಬ್ಬಳೇ ತಿನ್ನುವುದು. ನನಗೇನಾದರೂ ಸಿಕ್ಕಿದರೆ ಇನ್ನು ನಿನಗೆ ಕೋಡುತ್ತೇನೆ ನೋಡು! . . . .

**ರುಕ್ಮಿಣಿ**—ಇದು ನನಗೆ ಅಮ್ಮ ಕೊಟ್ಟದ್ದು. ಬಿಸೀ ಮುಳ್ಕ!

**ಲಚ್ಚಣ್ಣ**—ಮುಳ್ಕವಾದರೆ ಅಮ್ಮನ ಹತ್ತಿರ ನಾನೀಗ ಕೇಳಿ ತರುತ್ತೇನೆ, ನೋಡು.

**ರುಕ್ಮಿಣಿ**—ಅಮ್ಮ ಈಗ ಅಲ್ಲಿಲ್ಲ, ಮಿಂಯಲಿಕ್ಕೆ ಹೋದಳು. ಅವಳು ಬರುವುದರಲ್ಲೆಲ್ಲಾ ತಣಿಯುತ್ತದೆ. ಆ ಮೇಲೆ ನಿನಗೆ ತಣಿದ ಮುಳ್ಕ! ಬಿಸಿ ಮುಳ್ಕ ನನಗೆ ಮಾತ್ರ! . . . .

**ಲಚ್ಚಣ್ಣ**—ನನಗೆ ಕೊಡುವುದಿಲ್ಲವೋ? ಬೇಡ, ಹೋಗು. ಒಬ್ಬರೇ ಏನಾದರೂ ತಿಂದರೆ ಹೊಟ್ಟೆನೋವು ಆಗುತ್ತದೆ ಎಂದು ಅಪ್ಪಯ್ಯ ಹೇಳಿದ್ದಾರೆ . . . .

**ರುಕ್ಮಿಣಿ**—ಹೊಟ್ಟೆ ನೋವಾದರೆ ಗಜ್ಜಿಗನ ಕಾಯಿ ತಿನ್ನುತ್ತೇನೆ.

**ಲಚ್ಚಣ್ಣ**—ನನ್ನ ಗಜ್ಜಿಗ ನೀನು ಮುಟ್ಟಬಾರದು . . . . ನೀನು ಒಳ್ಳೆಯವಳಲ್ಲವೋ?

**ರುಕ್ಮಿಣಿ**—ನೀನು ನನಗೆ ಪೀಪಿರಿ ಕೊಡುತ್ತೀಯಾ?

**ಲಚ್ಚಣ್ಣ**—ನಾನು ಕೊಡುವುದಿಲ್ಲ ಎಂತ ಹೇಳಿದೆನೇ?

**ರುಕ್ಮಿಣಿ**—ನಾನು ಮುಳ್ಕ ಕೊಡುವುದಿಲ್ಲ ಎಂತ ಹೇಳಿದೆನೇ? .... ನಿನಗೆಂತಲೇ ತಂದುದು. ಅಮ್ಮ ನೋಡಲೇ ಇಲ್ಲ! ಯಾರಿಗೆ ತೋರಿಸಬೇಡ! ....

**ಲಚ್ಚಣ್ಣ**—(ತಿನ್ನುತ್ತ) ಖಂಡಿತ ನನ್ನ ಪೀಪಿರಿ ನಿನಗೆ. ಅಕ್ಕ ... ಅಕ್ಕ .... ಯಾಕೆ ಇವತ್ತು ಮುಳ್ಕ ಮಾಡಿದ್ದು? ಹಣ್ಣನ್ನೇ ಕತ್ತರಿಸಿ ತಿನ್ನಬೇಕು ಅನ್ನುತ್ತಿದ್ದಳು ಅಮ್ಮ.

**ರುಕ್ಮಿಣಿ**—ಇವತ್ತು ಯಾರೋ ಮನೆಗೆ ಬರುತ್ತಾರಂತೆ. ಅವಕ್ಕೆ ಪಾಯಸ, ಮುಳ್ಕ, ಎಲ್ಲ ಮಾಡಿದ್ದು.

**ಲಚ್ಚಣ್ಣ**—ಈಗ ಮಾಡಿದ್ದು ಅವರಿಗೋ? ನಮಗಲ್ಲ! ....

**ರುಕ್ಮಿಣಿ**—ನಮಗೂ ಕೊಡುತ್ತಾಳೆ ಅಮ್ಮ.

**ಲಚ್ಚಣ್ಣ**—ಅವರೇ ಎಲ್ಲ ತಿಂದು ಹಾಕಿ ಬಿಟ್ಟರೆ?

**ರುಕ್ಮಿಣಿ**—ಅದಕ್ಕೆ ನಾನು ಕದ್ದು ತಂದದ್ದು.

**ಲಚ್ಚಣ್ಣ**—ಇನ್ನು ಕದ್ದಿಟ್ಟಿದ್ದಿಯಾ?

**ರುಕ್ಮಿಣಿ**—ಇಲ್ಲ, ಅಮ್ಮ ತೆಗೆದಿರಿಸಿದ್ದೇ ಸ್ವಲ್ಪ. ಇದು ಬಂಗಾರಿಗೆ ಅಂತ ಮೂಲೆಯಲ್ಲಿ ಮರಿಗೆಯ ಕೆಳಗೆ ಇರಿಸಿದ್ದಳು. ಅವಳು ಕೈ ತೊಳೆಯಲಿಕ್ಕೆ ಹೋದಾಗ ನಾನು ನಾಲ್ಕನ್ನು ತೆಗದೆ.

(ಹೊರಗಿನಿಂದ ಕದ ಬಡಿಯುವ ಶಬ್ದ ಕೇಳಿಬರುವುದು.)

**ಲಚ್ಚಣ್ಣ**—ಯಾರೋ ಬಂದರಂತೆ ಕಾಣುವುದು. ಬಾಗಿಲು ಬಡಿಯುತ್ತಿದ್ದಾರೆ. ಅವರೇ ಏನೊ—

**ಲಚ್ಚಣ್ಣ**—ಅವರೇಯೇ? ನಮ್ಮ ಮುಳ್ಕ ಎಲ್ಲ ತಿನ್ನಲಿಕ್ಕೆ ಬಂದಂತೆ ಕಾಣುತ್ತೆ.

**ರುಕ್ಮಿಣಿ**—ನಾನು ಹೋಗಿ ಬಾಗಿಲು ತೆಗೆಯುತ್ತೇನೆ.

(ಓಡುವಳು)

**ಲಚ್ಚಣ್ಣ**—ಬೇಡ, ಅವರು ಹೋಗಲಿ ಹಾಗೆ. ಇವಳು ಓಡಿ ಹೋಗಿಯಾಯಿತು. (ತಾನೂ ತುಸು ದೂರ ಓಡಿ, ಅಕ್ಕನು ಪಠೇಲರ ಸಂಗಡ ಬರುವುದನ್ನು ಕಂಡು) ಇವಳು ಎಲ್ಲ ಮೋಸ ಮಾಡಿದಳು. ಅವರು ಬರುವುದೇ ಬೇಡವಿತ್ತು. ಅಬ್ಬಾ, ಎಷ್ಟು ದೊಡ್ಡ ಹೊಟ್ಟೆಯೆ! ಇವರು ಒಂದು ಚೂರು ಇಡುವುದಿಲ್ಲ!

**ಅಚ್ಯುತರಾಯರು**—(ಪಠೇಲರು)—ನಿನ್ನ ತಮ್ಮನೇ ಅದು? ಏನು ಮರಿ, ಅಪ್ಪಯ್ಯ ಮನೆಯಲ್ಲಿದ್ದಾರೆಯೋ?

**ಲಚ್ಚಣ್ಣ**—ಅಪ್ಪಯ್ಯ ಬೆಳಿಗ್ಗೇ ಎದ್ದು ಕುಂದಾಪುರಕ್ಕೆ ಹೋದರು.

**ಅಚ್ಯುತರಾಯರು**—ಈ ಹೊತ್ತು ಶನಿವಾರ ಸಂತೆ ಎಂದು ಹೋದರೇ? ಬರಲಿಕ್ಕೆ ಹೇಳಿದ್ದರು. ಮರೆತೇ ಬಿಟ್ಟರೇನು? ಯಾವಾಗ ಬರುತ್ತಾರಂತೆ?

**ಲಚ್ಚಣ್ಣ**—ಸಂಜೆಯ ಹೊರತು ಬರಲಿಕ್ಕಿಲ್ಲವಂತೆ.

**ಅಚ್ಯುತರಾಯರು**—ಏ ಸುಬ್ರಾಯರೇ, ಒಟ್ಟು ಮೋಸ ಕೊಟ್ಟಿರಲ್ಲ! ಹಾಗಾದರೆ ಹೋಗುತ್ತೇನೆ. ಬಂದ ಕೂಡಲೆ ಹೇಳು ಮಗು, ನಾನು ಬಂದು ಹೋದೆ ಎಂದು. (**ಹೋಗುವರು.**)

**ಲಚ್ಚಣ್ಣ**—ಆಗಲಿ, ನಾನು ಹೇಳುತ್ತೇನೆ.

**ರುಕ್ಮಿಣಿ**—ನಾನು ಹೇಳುತ್ತೇನೆ.

**ಲಚ್ಚಣ್ಣ**—ನೀನು ಹೇಳುವುದು ಬೇಡ, ನಾನು ಹೇಳುತ್ತೇನೆ.

**ರುಕ್ಮಿಣಿ**—ನಾನು ಹೇಳುತ್ತೇನೆ . . . . ಲಚ್ಚಣ್ಣ, ಹೋದರು! ಹೊರಟು ಹೋದರೇ ಹೋದರು!

**ಲಚ್ಚಣ್ಣ**—ಅವರು ಇದ್ದಿದ್ದರೆ, ಅವರಿಗೇ ಎಲ್ಲಾ ಪಾಯಸ ಆಗುತಿತ್ತು.

**ರುಕ್ಮಿಣೀ**—ಅವರ ಹೊಟ್ಟೆಯೊಳಗೆ ಐನೂರು ಸಾವಿರ ಮುಳ್ಳ ಹಿಡಿದೀತು!

**ಲಚ್ಚಣ್ಣ**—ಓಡಿಸಿದೆನೋ ಇಲ್ಲವೋ! .... ಅಪ್ಪಯ್ಯ ಬಂದರು.

(ಸುಬ್ರಾಯರ ಆಗಮನ.)

**ಸುಬ್ರಾಯ**—ಮಾಣಿ, ಯಾರಾದರೂ ಬಂದರೊ ಈಗ?

**ಲಚ್ಚಣ್ಣ**—ಆಗ ಇಬ್ಬರು ಬಂದರಲ್ಲ ಅವರೇ.

**ಸುಬ್ರಾಯ**—ಅವರಲ್ಲ. ಒಬ್ಬರು ಡೊಳ್ಳು ಹೊಟ್ಟೆಯವರು. ದಪ್ಪನಾಗಿ ಗಲ್ಲಮೀಸೆಯಿದೆ. ಎಷ್ಟು ಕಾಯಿಸುತ್ತಾರಪ್ಪ ಇವರು? ಕಾಯದೆ ಉಪಾಯವಿದೆಯೇ?

**ಲಚ್ಚಣ್ಣ**—ಅವರೇ! ಅವರು ಈಗ ಬಂದುಹೋದರು.

**ಸುಬ್ರಾಯ**—ಬಂದು ಹೋದರೇ ಪರೇಲ ಅಚ್ಯುತಯ್ಯ? ಬಂದು ಹೋದರೇ? ಯಾಕೆ ಹೋದರಂತೆ? ನಾನಿದ್ದೇನೆ ಅಂತ ಹೇಳಲಿಲ್ಲವೇ? ಅಥವಾ—ನಾನು ಇಲ್ಲ ಅಂಡುಬಿಟ್ಟರೇ?

**ಲಚ್ಚಣ್ಣ**—(**ಅತ್ತಿತ್ತ ಕಂಡು**) ಅಲ್ಲ .... ಎಂಥದೋ ಶನಿವಾರ ಸಂತೆ, ಹೋಗುತ್ತೇನ ಕುಂದಾಪುರಕ್ಕೆ, ಈ ಹೊತ್ತು ಬರುವುದಿಲ್ಲ, ಎಂತ ಹೇಳಿ ಹೋದರು.

**ಸುಬ್ರಾಯ**—ಎಷ್ಟು ಹೊತ್ತಾಯಿತು? ಅಲ್ಲೆಲ್ಲಿ ಕಾಣಿಸುತ್ತಾ ಇದ್ದರೆ, ಕರೆ ನೋಡುವ! ....

**ಲಚ್ಚಣ್ಣ**—ಸುಮಾರು ಹೊತ್ತಾಯಿತು ಅವರು ಹೋಗಿ. ಮೋಟರು ಹತ್ತಿ 'ಪಾರು'! ... ಅಪ್ಪಯ್ಯ, ಈ ಹೊತ್ತು ಸಂತೆಯಿಂತೆ ನನಗೆ ಪೀಪಿರಿ ತರುವುದಿಲ್ಲವೋ? ....

**ಸುಬ್ರಾಯ**—ಪೀಪಿರಿ ಹಾಳಾಯಿತು, ಸುಮ್ಮನಿರು. ಸಂತೆಯಲ್ಲ—ಮತ್ತೇನಿಲ್ಲವೋ?

**ಲಚ್ಚಣ್ಣ**—ಇವತ್ತು ಶನಿವಾರ ಹೌದಂತೆ.

**ಸುಬ್ರಾಯ**—ಸುಮ್ಮನಿರು. ಈ ಶನಿವಾರ ಸಂತೆ ಆಗುವುದಿಲ್ಲಂತೆ .... ಈ ಅಚ್ಯುತರಾಯರು ಐನಗಳಿಗೆಯಲ್ಲಿ ಮೋಸ ಕೊಟ್ಟರಲ್ಲ!

**ರುಕ್ಮಿಣಿ**—(ಒಳಗೆ ಹೋಗಿದವಳು ಬಂದು) ಊಟಕ್ಕೆ ಆಗುತ್ತೆಂದಳು ಅಮ್ಮ.

**ಲಚ್ಚಣ್ಣ**—ಅಪ್ಪಯ್ಯ, ಪಾಯಸ ತಣ್ಣಗಾಗುತ್ತದೆ, ಹೋಗುವ.

**ಸುಬ್ರಾಯ**—ಪಾಯಸ ಕಲಗಚ್ಚಿಗೆ ಹಾಕಲಿಕ್ಕೆ ಹೇಳು!

**ಲಚ್ಚಣ್ಣ**-(ಅಕ್ಕನೊಡನೆ) ಅಪ್ಪಯ್ಯನಿಗೆ ಜೋರು ಸಿಟ್ಟು ಬಂದಿದೆ.

**ರುಕ್ಮಿಣಿ**—ಇನ್ನು ನಿನಗೆ ಪೀಪಿರಿ ಇಲ್ಲ.

**ಲಚ್ಚಣ್ಣ**—ಅಪ್ಪಯ್ಯ ಹೇಳುವುದು ಸುಳ್ಳೇ!

**ರುಕ್ಮಿಣಿ**—ಬಾ, ಮುಳ್ಳ ತಿನ್ನುವ ಬಾ!

(ಮಕ್ಕಳು ಅಡುಗೆ ಮನೆಗೆ ಧಾವಿಸುವರು.)

# ಪುನರ್ಜನ್ಮ

## [ಪ್ರಹಸನ]

**ಸೂಚನೆ:**—ಪ್ರಸಿದ್ಧ ಇಂಗ್ಲಿಷ್ ಲೇಖಕನಾಗಿದ್ದ ಡೀನ್ ಸ್ವಿಫ್ಟ್‌ನು, ಇನ್ನೂ ಜೀವಿತನಾಗಿದ್ದ ಒಬ್ಬ ಪಂಚಾಗಕರ್ತನು ಸತ್ತನೆಂದು ಸರ್ವರೂ ತಿಳಿಯುವ ಹಾಗೆ ಬರೆದುದರಿಂದ, ಆ ಪಂಚಾಂಗಕರ್ತನು ತನ್ನ ಜೀವನ್ಮೃತಾವಸ್ಥೆಯಿಂದ ವಿಮೋಚನೆ ಹೊಂದುವ ಹಾಗೆ ನ್ಯಾಯಸ್ಥಾನದಿಂದ ತೀರ್ಮಾನ ಪಡೆಯಲು, ವಿಖ್ಯಾತ ವಕೀಲನೊಬ್ಬನಿಂದ ಧಾರಾಳವಾಗಿ ವ್ಯವಹರಿಸಿದರೂ, ನ್ಯಾಯಸ್ಥಾನದಲ್ಲಿ ಸಹ, ಆತನು ಇನ್ನೂ ಜೀವಿತನೆಂಬುದನ್ನು ಸಂತೃಪ್ತಿಕರವಾದ ರೀತಿಯಲ್ಲಿ ಪ್ರಮಾಣಮಾಡಲಾರದಾದನು ಎಂದು ಪ್ರತೀತಿಯಿದೆ. ಆ ಆಖ್ಯಾನವನ್ನು ಅವಲಂಬಿಸಿ ಸುಪ್ರಸಿದ್ಧ ಶ್ರೀ। ದ್ವಿಜೇಂದ್ರಲಾಲರಾಯರು ಇದೊಂದು ಪ್ರಹಸನವನ್ನು ಬಂಗಾಳಿಯಲ್ಲಿ ಬರೆದರು. ಅವರಂತಹ ಸಾಹಿತಿಗಳು ಬಂಗಾಳದಲ್ಲಿಯೂ ತೀರ ಅಪೂರ್ವ, ಅವರ ಈ ಪ್ರಹಸನವೂ ಅತ್ಯುತ್ತಮವಾದುವುಗಳಲ್ಲಿ ಒಂದು. ಆದರೆ ಇಲ್ಲಿ ಮಾತ್ರ ಅದನ್ನು ಇದ್ದಂತೆಯೆ ಕನ್ನಡಿಸಿಲ್ಲ. ವಿದ್ಯಮಾನಗಳ ಭಿನ್ನತೆಗೂ ಕಾಲಸ್ಥಿತಿಗೂ ತಕ್ಕಂತೆ, ಮೂಲದ ಆಧಾರವನ್ನು ಮಾತ್ರ ಹಿಡಿದು, ಆದರೆ ಅಲ್ಲಲ್ಲಿ ಕೊಂಚ ಬದಲಾಯಿಸಿ, ಈ ರೂಪ ಕೊಡಲಾಗಿದೆ. ಆದುದರಿಂದ ಮೂಲ ಬಂಗಾಳೀ ಪ್ರಹಸನವು ಹಲವು ಮುಖ್ಯ ಭಾಷೆಗಳಲ್ಲಿ ಭಾಷಾಂತರವಾಗಿರುವ ಕಾರಣ, ಆ ಭಾಷಾಂತರಗಳಲ್ಲಿ ಯಾವುದನ್ನಾದರೂ ಇದರೊಡನೆ ಹೋಲಿಸಿದರೆ, ಭೇದಗಳು ತೋರದಿರಲಾರವು. ಅವು ಮನಃಪೀಡಕ ಭೇದಗಳಾಗಿರುವಲ್ಲಿ ಕ್ಷಮೆಯಿರಲಿ, ಆದರೆ, ಇದ್ದಂತೆಯೇ ಇದನ್ನೋದುವುದರಿಂದ ಪ್ರಹಸನವು ಅಷ್ಟು ಅರುಚಿಯನ್ನೇನೂ ಉಂಟುಮಾಡಲಾರದೆಂದು ನಂಬುಗೆಯಿದೆ.

---

## ವ್ಯಕ್ತಿಗಳು.

ಪೈ ಎಂಬುದೇ ಪ್ರಾಣವಾಗಿದ್ದ ಪರಮಲೋಭಿ **ರಾಮಯ್ಯ;** ಚತುರೆಯಾದ ಅವನ ದ್ವಿತೀಯ **ಪತ್ನಿ;** ಈಕೆಯ ಸೋದರ, ರಾಮಯ್ಯನ **ಭಾವ,** ಮನೆತನದ ವಕೀಲನು; ರಾಮಯ್ಯನ ವಿಶ್ವಾಸಕ್ಕೂ ಭಾವಯ್ಯನ ಪಿತೂರಿಗೂ ಯೋಗ್ಯನಾದೊಬ್ಬ **ಜೋಯಿಸನು;** ಭಾವಯ್ಯನ ಪಿತೂರಿಗೆ ಒಪ್ಪಿದ **ನಾಲ್ವರು** ನೆರೆಯವರು; **ಒಕ್ಕಲುಗಳು;** ಇಬ್ಬರು **ಮಗಂದಿರು.**

# ಪುನರ್ಜನ್ಮ

[ರಾಮಯ್ಯನವರ ಮನೆಯ ಹೊರಜಗುಲಿ. ಸಾಯಂಕಾಲ. ಹಳೆಯ ಮೇಜು, ಕುರ್ಚಿ, ಒಂದೆರಡು ಮುರುಕು ಕಾಲುಮಣೆಗಳು. ಗಡಿಯಾರದಲ್ಲಿ ೭–೧೭ ಸಮಯ.]

(ರಾಮಯ್ಯನವರ **ಭಾವನು** ಸೋದರಿಯಾದ, ರಾಮಯ್ಯನವರ **ಪತ್ನಿ** ಯೊಡನೆ ಸಂಭಾಷಿಸಿ ಕುಳಿತಿರುವನು.)

**ಭಾವ**:—ಇಂದು ಅದೇ ನಾಗಪಂಚಮಿ, ತಿಳಿಯಿತೋ. ಎಲ್ಲ ವನ್ನೂ ಸರಿಪಡಿಸಿ, ವ್ಯವಸ್ಥೆಮಾಡಿದ್ದೇನೆ.

**ಪತ್ನಿ**:—ಇರಲಿ, ಇಷ್ಟೆಲ್ಲದರ ಪ್ರಯೋಜನವಾದರೂ, ಏನೂ ಆಗುವುದುಂಟೆ? ಎಂದೇ ನನ್ನ ಚಿಂತೆ.

**ಭಾವ**:—ಪ್ರಯೋಜನವೆ! ಮತ್ತೇನಲ್ಲದಿದ್ದರೂ ಇವರ ಜೀವ ವಾದರೂ ಉಳಿದೀತು. ಇವರ ಸಾಲಗಾರರು ಒಂದಲ್ಲ ಒಂದು ದಿನ ಇವರನ್ನು ಕೊಂದಿಕ್ಕುವುದಾಗಿ ಎಷ್ಟೋ ಸಲ ಬೆದರಿಸಿದ್ದಾರಲ್ಲ!

**ಪತ್ನಿ**:—ಅವರು ಬೆದರಿಸಿದರೇನು! ಇವರ ತಪ್ಪೇನಣ್ಣ? ಸಾಲ ಕೊಟ್ಟಿದ್ದಾರೆ, ಬಡ್ಡಿ ಕೂಡಿಸಿ ವಸೂಲ್ಮಾಡಿಕೊಳ್ಳುತ್ತಾರೆ. ಸಾಲಕೊಟ್ಟವ ಬಡ್ಡಿ ತೆಕ್ಕೊಳ್ಳದೆ . . . .

**ಭಾವ**:—ಬಡ್ಡಿಯೆಂದು ಅವರ ಮನೆ ಮಾಡಿನ ಕಡ್ಡಿ ಕೋಲು ಕೂಡ ಉಳಿಯದಂತೆ ಮಾಡಿದ್ದಾರೆ ಬಲ್ಲೆಯಾ? ಸಾಲ ವಸೂಲಿಯೆಂದು ಅವರನ್ನು ಮೂಲ ಸಹಿತ ಸುಡುವುದೆ? ನೋಡವ್ವ. ಊರಲ್ಲಿ ಬೆಳಗ್ಗೆ ಎದ್ದು ಇವರ ಹೆಸರನ್ನು ಎತ್ತುವದೂ ಪಾಪವೆಂದು, ಊರಿಂದ ರಾಮ ನಾಮವೂ ಮಾಯವಾಗಿದೆ. ಮತ್ತೆಲ್ಲಿಯಾದರೂ ಇವರ ಮೋರೆ ಕಂಡರೆ!—ಗೂಗೆಯನ್ನಾದರೂ ಕಂಡಾರು, ಇವರನ್ನಲ್ಲ! ಇವರು ಎಂದು

ಸಾಯುವರೋ ಎಂದು ಕಣ್ಣಲ್ಲಿ ಎಣ್ಣೆ ಇಕ್ಕಿ ಕೂತವರೆಷ್ಟಿಲ್ಲ? ಬಡ್ಡಿಯ ಪರಿಣಾಮವಿಷ್ಟಾಗಿದೆ!

**ಪತ್ನಿ**:—ಹಾಗೆಂದು ಈ ಚಿಕಿತ್ಸೆ ಮಾಡುವುದೆ? ನಾನು ಸುಮ್ಮನೆ ವಿಧವೆಯಾಗೋದೆ?

**ಭಾವ**:—ಅದೆಂತಹ ವಿಧವೆ? ಇವರು ಜ್ಯೋತಿಶ್ಶಾಸ್ತ್ರದಲ್ಲಿ ಬಹಳ ವಿಶ್ವಾಸವುಳ್ಳವರು. ಜೋಯಿಸನೇ ಸ್ಫುಟವಾಗಿ ಬರೆದಿದ್ದಾನೆ. ರಕ್ತಾಕ್ಷಿ ಸಂವತ್ಸರದ 'ನಾಗಪಂಚಮಿ ದಿನ, ನಡು ಮಧ್ಯಾಹ್ನ, ತನ್ನ ಕೋಣೇಲಿ, ಸರ್ಪ ಕಚ್ಚಿ ಮರಣ' ಎಂದು. ಅದನ್ನೇ ನಂಬಿ ಇವರೂ ಕೂತಿದ್ದಾರೆ.

**ಪತ್ನಿ**:—ಮತ್ತೀಗೆಲ್ಲಿರುವರು?

**ಭಾವ**:—ಈಗ? ಅದೇ ನಾಗಪಂಚಮಿ ದಾಟಲಿ ಎಂದು ಕದಿರೇ ಕೊಳದಲ್ಲಿ ಬೆಳಗ್ಗಿನಿಂದ ಮಿಂಯುತ್ತಿದ್ದಾರೆ. ಮನೆಗೆ ಬಂದರೆ ಮೋಸ ವಾದೀತೋ ಎಂದು. ತಾನು ದೂರದ ಕೊಳದಲ್ಲಿರುವಾಗ, ಮನೇ ಕೋಣೆಯಲ್ಲಿ, ಸರ್ಪ ಕಚ್ಚುವುದು ಹೇಗೆ ನೋಡೋಣ, ಎಂದು.

**ಪತ್ನಿ**:—ವ್ಹಾ!

**ಭಾವ**:—ಏನು ತಮಾಸೆಯಾಗುವುದೋ ನೋಡುವೆಯಂತೆ!

**ಪತ್ನಿ**:—ಹಗಲು ದಾಟಿತಲ್ಲ! ಇನ್ನೂ ಬಂದಿಲ್ಲ. ಇನ್ನೂ ಆ ಹುಚ್ಚೇ?

**ಭಾವ**:—ಇಷ್ಟರಲ್ಲೇ ಬಂದಾರು, ನಾನು ಹೇಳಿದ್ದೆಲ್ಲ ನೆನಪಿನಲ್ಲಿದೆಯಷ್ಟೆ? ಹಾಗೆಯೆ ಮಾಡಬೇಕು.

**ಪತ್ನಿ**:—ಒಹೋ! ಮಾಡದೆ ಮತ್ತೆ?

**ಭಾವ**:—ಸರಿ, ಇನ್ನು ಒಳಗೆ ಹೋಗವ್ವ. (**ಹೋಗುವಳು.**)

ರಾಮಯ್ಯನವರು ಪೂರ್ವಜನ್ಮದಲ್ಲಿ ಬಹಳ ತಪಸ್ಸು ಮಾಡಿ ಇಂತಹ ಪತ್ನಿಯನ್ನು ಈ ಜನ್ಮದಲ್ಲಿ ಪಡೆದರು. ಹಣವು ಎಣಿಕೆಯಿಲ್ಲ

ದಷ್ಟು ಅಪಾರವಾಗಿದೆಯಾದರೂ ಇಂತಹ ಪತ್ನಿಗೂ ಹೊಟ್ಟೆ ತುಂಬ ಊಟಕ್ಕಿಲ್ಲ, ಮೈತುಂಬ ಬಟ್ಟೆಯಿಲ್ಲ. ಆದರೂ ಇವಳೆಷ್ಟು ಆನಂದ ವಾಗಿದ್ದಾಳೆ! ನಿಜವಾಗಿಯೂ ನಾವೂ ಹೂಡಿಸಿರುವುದು ಒಂದು ತಮಾಸೆಯೆ? ಆದರೂ ನಗುತ್ತ ಒಳಕ್ಕೆ ಹೋದಳು. ಲೋಭಿಗಳ ಮೊಕ್ತೇಸರ ನಿವ! ಮುದುಕನಾಗಿ ಮದುವೆಯಾಗಿದ್ದಾನೆ, ಅತ್ತ ಜಾತಕದಲ್ಲಿ ವಿಶ್ವಾಸ.

(ಜೋಯಿಸನೂ ಭಾವನ ಗೆಳೆಯರಲ್ಲಿ ನಾಲ್ವರೂ ಬರುವರು.)

ಸರಿ. ಒಳ್ಳೇ ಸಮಯಕ್ಕೆ ಬಂದಿರಿ. ರಾಮಯ್ಯೋರು ಇಷ್ಟರಲ್ಲೆ ಬಂದಾರು.

**ಜೋಯಿಸ:**— ಎಲ್ಲವೂ ಸರಿಯಾಗಿದೆಯಷ್ಟೆ?

**ಭಾವ:**— ಸರಿಯೆ. ಆದರೆ, ಅವರಿಬ್ಬರು ಹುಡುಗರು ಮಾತ್ರ ಸಿಕ್ಕಿಲ್ಲ. ಮನೆಗೆ ಬಾರದೆ ಮೂರು ದಿನವಾಗಿದೆ. ಕಾಸು ಖರ್ಚಾದೀತು ಎಂದು ಅವರಿಗೆ ಶಾಲೆಯೂ ಬೇಡವೆಂದಿದ್ದಾರೆ ಮತ್ತೆ ಅವರು ಬೇರೆಯಾಗದೆ ಇರುವರೆ? ಇಬ್ಬರೂ ಅಪರಂಜಿಗಳಾಗಿ ಬೆಳೆದಿದ್ದಾರೆ.

**ಜೋಯಿಸ:**— ಹಾಗೆಯೇ ಸರಿ.

**ಭಾವ:**— ಆದರೆ ಅವರು ಈ ವರ್ತಮಾನ ತಿಳಿದರೆ, ನಮ್ಮ ಗಾಳ ನುಂಗುವರು. ತಂದೆ ಎಂದಿಗೆ ಸತ್ತಾನು ಎಂದೇ ಕಾದಿರುವರು. ಊರಲ್ಲಿ ಲೋಭಿಗಳ ಮಕ್ಕಳೇ ಹೀಗಿರುವರು. ತಂದೆ ಸತ್ತನೆಂದ ಕೂಡಲೆ ಈ ಮಕ್ಕಳು ಏನು ಮಾಡುವರೆಂದೂ ಇವರು ಕಣ್ಣಾರೆ ಕಾಣಲಿ. (ಸದ್ದಾಗುವುದು.) . . . . ಹೂಂ, ಸದ್ದಾಗುವುದು. ಸರಿ. (ಕೂಡಲೆ ಎಲ್ಲರೂ ಸೇರಿ ರಾಮಯ್ಯನು ಮಲಗುವ ಮಂಚದ ಮೇಲೆ ಬರೇ ಹಾಸಿಗೆಯನ್ನು ಸಿಂಗರಿಸಿ ಹೆಣಬಿದ್ದಂತೆ ತಯಾರಿಸುವರು.) ನೀವೆಲ್ಲ ಇದರ ಸುತ್ತಲೂ ಕುಳ್ಳಿರಿ. (ಹಾಗೆ ಮಾಡುವರು.)

**ಭಾವ:**— ದುಃಖಭಾರವಾದ ಮುಖಮಾಡಿ ಕೂತಿರಿ. (ಹಾಗೆ ಮಾಡುವರು.) ಸರಿ. ಇನ್ನು ನಾನು ಹೊರಡುವೆನು. ಯಥಾಕಾಲ

ದಲ್ಲಿ ಬರುವೆನು. ಚೆನ್ನಾಗಿ ದುಃಖ ಮಾಡುತ್ತಿರಿ. (**ಅವರು ಹಾಗೆ ಮಾಡುವರು; ಭಾವನು ಹೋಗುವನು.**)

[ರಾಮಯ್ಯನು ಬರುವನು.]

**ರಾಮಯ್ಯ**:—(ಸ್ವ) ಗ್ರಹಚಾರ ತಪ್ಪಿಸಿಕೊಂಡೆ, ಮಹಾರಾಯಾ! ಬದುಕಿಕೊಂಡೆ. ನಾನು ನಿಜವೊ, ಜಾತಕ ನಿಜವೋ? ಜೋಯಿಸನೇ ನೋಡಲಿ. ಮಧ್ಯಾಹ್ನ ಎಂದೋ ದಾಟಿದೆ ಎಂದ ಮೇಲೆ ಇನ್ನೂ ಭಯವೇಕೆ?

**೧ನೆಯವ**:—ಹಾ ಹಾ! ಪಾಪ, ಸತ್ತನಲ್ಲಾ!

**೨ನೆಯವ**:—ಮಧ್ಯಾಹ್ನಕ್ಕೆ ಸರಿಯಾಗಿ!

**೩ನೆಯವ**:—ಸರ್ಪ ಕಚ್ಚಿ!

**ರಾಮಯ್ಯ**:—ಯಾರು? ಯಾರು ಸತ್ತರು?

**ಜೋಯಿಸ**:—ಅದೃಷ್ಟ! ಬ್ರಹ್ಮ ಬರೆದಂತೆ . . . .

**೧ನೆಯವ**:—ಅದನ್ನು ಮೀರುವವರು ಯಾರು?

**೨ನೆಯವ**:—ಇಷ್ಟಾದರೂ ಜ್ಯೋತಿಷ್ಯವನ್ನು ನಂಬುವವರಿಲ್ಲ.

**ರಾಮಯ್ಯ**:—ಯಾರು ಸತ್ತರು, ಎಂದರೆ?

**೩ನೆಯವ**:—ಎಲ್ಲಿ? ಆ ಹುಡುಗರು ಇನ್ನೂ ಬರಲಿಲ್ಲವಲ್ಲ!

**ಜೋಯಿಸ**:—ಇನ್ನೆಷ್ಟು ಕಾದು ಕೂತಿರೋದು?

**೧ನೆಯವ**:—ಹೇಗೂ ಸತ್ತಾಗಿದೆ. ಇನ್ನು ಸ್ಮಶಾನಕ್ಕೇ ಒಯ್ಯುವುದು, ಮತ್ತೇನು?

**ರಾಮಯ್ಯ**:—ಅರರೆ! ಯಾರನ್ನಯ್ಯಾ ಸ್ಮಶಾನಕ್ಕೆ ಕೊಂಡೊಯ್ಯೋದು?

**ಜೋಯಿಸ**:—ಅಯ್ಯೊ! ರಾಮಯ್ಯೋರೇ, ಹಾ! . . . .

**೧ನೆಯವ**:—ಕೊನೆಗೆ ಹೀಗಾಗಿ . . . .

**೨ನೆಯವ:**— ಸತ್ತ . . . .

**ರಾಮಯ್ಯ:**—ಆಂ! ರಾಮಯ್ಯೋರು ಸತ್ತರು? ಯಾವ ರಾಮಯ್ಯ?

**ಜೋಯಿಸ:**—ಇಂತಹ ದಿವ್ಯ ಅರಮನೆಯಂತಹ ಮನೆ ಬಿಟ್ಟು . . . .

**೧ನೆಯವ:**— ಎರಡನೆ ಎಳೆಯ ಪತ್ನಿಯನ್ನು ಸಹ ಬಿಟ್ಟು . . . .

**೨ನೆಯವ:**— ಹಾ! ಹಾ! ಹಾ! . . . .

**ರಾಮಯ್ಯ:**— ಸತ್ತವರ್ಯಾರಯ್ಯ?

**ಜೋಯಿಸ:**— ರಾಮಯ್ಯನವರು, ಸ್ವಾಮಿ.

**ರಾಮಯ್ಯ:**— ರಾಮಯ್ಯನವರು ಯಾಕೆ ಸಾಯುವರಯ್ಯ?

**೧ನೆಯವ:**— ಯಾಕೆ ಸಾಯುವರೆಂದು ಯಾರು ಹೇಳುವರು? ಅಂತು ಸತ್ತರು.

**ರಾಮಯ್ಯ:**— ಇದೆಲ್ಲಿಯದು?

**೧, ೨, ೩ನೆಯವರು:**— ಹಾ! ಹಾ! ಹಾ! . . . .

**ರಾಮಯ್ಯ:**— ತಾವು ಏನೆನ್ನುವಿರಿ? ನಾನು ಇಲ್ಲಿ ಬದುಕಿಯೇ ಇದ್ದೇನಲ್ಲ.

**೧ನೆಯವ:**— ತಾವು ಬದುಕಿಯೇ ಇದ್ದೀರೆಂದು ತಮ್ಮನ್ನು ಕಂಡರೇ ಗೊತ್ತು. ಆದರೆ, ರಾಮಯ್ಯನವರು ಮಾತ್ರ ಸತ್ತರು. ತಮ್ಮ ವಿಷಯ ಯಾರು ಏನೆಂದರು?

**ಜೋಯಿಸ:**— ತಾವ್ಯಾರು?

**ರಾಮಯ್ಯ:**— ನಾನೇ ರಾಮಯ್ಯ.

**೧ನೆಯವ:**— ಹಂ, ಹಾಗೆ! (**ಎಂದು ಅವನನ್ನೇ ನೋಡುತ್ತಾ ಗಂಭೀರವಾಗಿ ಹೇಳುವನು.**)

**ರಾಮಯ್ಯ:**—'ಹಾಗೆ' ಎಂದ್ರೆ?

**೨ನೆಯವ**:—ಅಡವಿಡಲು ಬಂದಾಗ ಬಂಗಾರವನ್ನು ನೋಡಿ, 'ಹಾಗೆ ಇದೆ' ಎಂದು ರಾಮಯ್ಯನವರು ಎಂದ ಹಾಗೆ. ನೀವೂ ರಾಮಯ್ಯನ ಹಾಗೆ . . . .

**ರಾಮಯ್ಯ**:-ತಾವೆಲ್ಲ ತಪ್ಪೆಣಿಸಿದ್ದೀರಿ. ಕಾಣೋದಿಲ್ವೆ! ನಾನೇ ರಾಮಯ್ಯ!

**ಜೋಯಿಸ**:—ಸ್ವಾಮಿೊ, ಅತ್ತಹೋಗಿ! ಹೊರಗೆ ಹೋಗಿ! ಇದು ದುಃಖದ ಮನೆ. ಹೊಲೆಯಿದೆ. ಇಲ್ಲಿ ತಮಾಸೆ ಮಾಡದಿರಿ.

**೧ನೆಯವ**:—ಭಂಗೀಖೋರನೆ ಏನು?

**೨ನೆಯವ**:—ಎಲಾ, ಎದ್ಹೋಗು!

**ರಾಮಯ್ಯ**:—ಅರೆ, ದೇವರೆ-ಇದೆಂತಹ ಪೀಡೆ! ನೋಡಿ, ಕಣ್ತೆರೆದು ನೋಡಿ; ನಾನಲ್ಲವೆ ರಾಮಯ್ಯ? ನನ್ನ ಮೋರೆ ನೋಡಿರಿ.

**ಜೋಯಿಸ**:—ಆಯ್ತು ನೋಡೋಣ. (ನೋಡುವನು.)

(೧ನೆಯವನು ಅವನ ತಲೆಯನ್ನು ಆಚೆ ಈಚೆ ಮತ್ತು ಕಾಲಿನಿಂದ ತಲೆಯವರೆಗೂ, ೨ನೆಯವನು ಇವನನ್ನು ನಾಲ್ಕು ಸುತ್ತಲೂ ತಿರುಗಿಸಿಯೂ ನೋಡುವರು.)

**೧ನೆಯವ**:—ಅಯ್ಯ! ಸಾಧಾರಣ ಅವರ ಹಾಗೆ ಇದ್ದಾನೆ.

**೨ನೆಯವ**:—ಚಿಂತಿಲ್ಲ ಈ ವೇಷ!

**ಜೋಯಿಸ**:—ವ್ಹಾ!

**ರಾಮಯ್ಯ**:—ವೇಷ! ಎಂತಹ ವೇಷ?

**ಜೋಯಿಸ**:—ಬಹಳ ಪಸಂದಾಗಿದೆ! ಆದರೆ ಮೂಗು ಮಾತ್ರ ಸ್ವಲ್ಪ ಗಿಡ್ಡವಾಯಿತು.

**ರಾಮಯ್ಯ**:—ಯಾವ ಮೂಗು ಗಿಡ್ಡವಾಯಿತು?

**೧ನೆಯವ**:—ಮೈಬಣ್ಣ ಸುಮಾರು ಅಷ್ಟೆ ಚೆನ್ನಾಗಿ ಮಾಡಿಕೊಂಡಿದ್ದಾನೆ!

**ರಾಮಯ್ಯ:**—ಮಾಡಿಕೊಂಡಿದ್ದಾನೆ!

**೨ನೆಯವ:**—ತಲೆ ಕೂದಲು ಹಾಗೆ ಇದೆ.

**ಜೋಯಿಸ:**—ಆದರೆ ಮೂಗು!

**೧, ೨, ೩ನೆಯವರು:**—ಹೌದು, ಹೌದು, ಮೂಗು, ಮೂಗು?

**ರಾಮಯ್ಯ:**—ಏನು! ಮೂಗಿಗೆ ಏನಾಗಿದೆ?

**ಜೋಯಿಸ:**—ಇಲ್ಲಿಲ್ಲ. ಹಾಗೇನೂ ಆಗಲಿಲ್ಲ.

**೧ನೆಯವ:**—ಊಹುಂ.

**೨ನೆಯವ:**—ಗೊತ್ತಿದ್ದವರು ಮೋಸಹೋಗಲಾರರಯ್ಯಾ!

**ರಾಮಯ್ಯ:**—ಅಂದರೆ, ನಾನು ರಾಮಯ್ಯನಲ್ಲವೆಂದು ನಿಮ್ಮ ಅಭಿಪ್ರಾಯವೊ?

**ಜೋಯಿಸ:**—ನೋಡಿದಿರಾ! ಮಾತು ಸಹ ಹಾಗೇ ತಯ್ಯಾರು ಮಾಡಿಕೊಂಡಿದ್ದಾನೆ!

**೧ನೆಯವ:**—ಪ್ರವೀಣ, ಪ್ರವೀಣ!

**೩ನೆಯವ:**—ಚಿಂತಿಲ್ಲ!

**ಜೋಯಿಸ:**—ಅಯ್ಯೋ! ಇಂತಹ ಎರಡನೆಯ ಹೊಸ ಹೆಂಡತಿ!

**೧ನೆಯವ:**—ಒಳ್ಳೇ ಕಲಿತವಳು!

**೩ನೆಯವ:**—ಕೇವಲ ಯುವತಿ!

**ರಾಮಯ್ಯ:**—ಯುವತಿಯಾಗಲಿ, ಮುದುಕಿಯಾಗಲಿ, ನಿಮಗೇನು ಸಂಕಟ ಬಂತಯ್ಯ? ಯಾರೇ ಇರಲಿ! ಅವಳು ನನ್ನ ಹೆಂಡತಿ.

**ಜೋಯಿಸ:**—ಅಂದರೆ, ಮನೆಮಾರು ಮಾತ್ರ ಹಾರಿಸುವ ಇಚ್ಛೆ ಅಲ್ಲ, ಆ ಹುಡುಗಿಯ ಮೇಲೂ ಕಣ್ಣಿದೆ!

**೧ನೆಯವ:**—ಅಷ್ಟು ಜೋರೆ?

**೨ನೆಯವ:**—ಹೂಂ!

**ರಾಮಯ್ಯ**:—ಅದಿರಲಿ, ನೀವು ಯಾರು?

(ಇಬ್ಬರು ಒಕ್ಕಲುಗಳು ಬರುವರು.)

**೧ನೆ ಒ**:—ಸ್ವಾಮಿ! ರಾಮಯ್ಯನವರು ಸತ್ತರಂತಲ್ಲ?

**ಜೋಯಿಸ**:—ಏನು ಮಾಡುವುದು? ಇನ್ನಿಷ್ಟರಲ್ಲೆ ಸ್ಮಶಾನ ಯಾತ್ರೆ.

**ರಾಮಯ್ಯ**:—ಅಲ್ಲಲ್ಲ. ರಾಮಯ್ಯನವರು ಸದ್ಯದಲ್ಲಿ ನಿಮ್ಮ ಕಣ್ಣ ಮುಂದೆ ಜೀವಂತ ನಿಂತಿದ್ದಾರೆ.

**೨ನೆ ಒ**:—ಒಹೋ! ಇದು ಆ ಆಸಾಮಿಯೊ?

**೧ನೆಯುವ**:—ಯಾವ ಆಸಾಮಿ?

**೨ನೆ ಒ**:—ಅವ್! ರಾಮಯ್ಯನವರ ಹಾಗೆ ವೇಷಹಾಕಿ ಬಂದವ!

**ರಾಮಯ್ಯ**:—ವೇಷ ಮಾಡಿದವ?

**೩ನೆಯುವ**:—ಹೌದೌದು, ಅವನೆ.

**೧ನೆ ಒ**:—ಎಲಾ, ಮೂರ್ಖಾ!

**ರಾಮಯ್ಯ**:—ನನ್ನ ಮನೆಗೆ ಬಂದು ನನ್ನನ್ನು ಮೂರ್ಖಾ ಎನ್ನುತ್ತೀಯಾ? ಹೊರಡು.

**೧ನೆ ಒ**:—ನೀನು ಹೊರಡು.

**ರಾಮಯ್ಯ**:—ಇದು ನನ್ನ ಮನೆ.

**೧ನೆ ಒ**:—ನೋಡು. ಈ ಮನೆ ನಮ್ಮದು. ನಮಗೆ ಗೊತ್ತೇ ಇದೆ—ನಿಮ್ಮ ವೇಷ.

**೨ನೆ ಒ**:—ಸಾಯಲಿ! ಎಷ್ಟು ಹೊತ್ತು ಇಲ್ಲಿ ನಿಂತಿದ್ದಾನೆ, ನೋಡಪ್ಪಾ! ಇನ್ನು ಬೇರೊಂದು ಮನೆಗೆ ಹೋಗು. ಇಕೊ ಒಂದು ಪೈ. ರಾಮಯ್ಯನವರು ಬದುಕಿದ್ದರೆ ಎಂತಹ ವೇಷಗಾರರಿಗೂ ಹತ್ತತ್ತು ದಿನ ಕುಣಿಸಿ ಒಂದು ಪೈ ಕೊಟ್ಟವರಲ್ಲ. ತಿಳಿಯಿತೊ?

**೧ನೆ ಒ**:—ಅವರು ಸತ್ತದ್ರಿಂದ ಇನ್ನಿದೆಲ್ಲ ನಮ್ಮದೆ, ನಾವು ಅವರ ಹಾಗಲ್ಲ. ಇಕೊ ಒಂದು ಪೈ.

**ಜೋಯಿಸ**:—ಆಯ್ತು, ಇನ್ನು ಸ್ಮಶಾನ ಯಾತ್ರೆಗೆ ಹೊರಡಿ.

(ಎಲ್ಲರೂ ಸೇರಿ ಹೆಣದಂತಿದ್ದುದನ್ನು ಒಯ್ಯುವರು.)

**ರಾಮಯ್ಯ**:—ಅಯ್ಯೋ, ಹೆಣವು ಹೊರಗೆ ಹೋಯಿತು. ರಾಮಯ್ಯನವರದಂತೆ, ಹಾಗಾದರೆ ನಾನ್ಯಾರು?

**೨ನೆ ಒ**:—ವೇಷಧಾರಿ!

**ರಾಮಯ್ಯ**:—ನೋಡಿ, ಸುಮ್ಮನಿರಿ.

**೧ನೆ ಒ**:—ಥೂ!

**ರಾಮಯ್ಯ**:—ಹೊಡೆದೇನು.

**ಇಬ್ಬರು**:—ಹೊಡೀ ತಪ್ರಾಕು.

**ರಾಮಯ್ಯ**:—ಸ್ವಾಮಿ, ಹೊಡಿಯಬೇಡಿ. ಬಹಳ ದವಡೆ ನೋವು. ಬಾತಿದೆ ನೋಡಿ.

**೧ನೆ ಒ**:—ಬಾಯ್ಮುಚ್ಚು.

**ರಾಮಯ್ಯ**:—ಓ ಪೋಲೀಸು . . . .

(ಭಾವ ಬರುವನು.)

**ರಾಮಯ್ಯ**:—ಭಾವ, ಭಾವ, ನೋಡಯ್ಯ!

**೧ನೆ ಒ**:—ಸುಮ್ಮನಿರು.

**ಭಾವ**:—ಏನು, ಏನಾಗಿದೆ ಇಲ್ಲಿ?

**ರಾಮಯ್ಯ**:—ಇಲ್ಲಿ, ಇವರೆಲ್ಲ ಸೇರಿ . . . .

**೨ನೆ ಒ**:—ಸುಮ್ಮನಿರು—ಅಂದೆ.

**ಭಾವ**:—ಅಲ್ಲ, ಏನಾಗಿದೆ ಇಲ್ಲಿ? ಕೇಳೋಣ.

**೨ನೆ ಒ**:—ಸ್ವಾಮಿ, ರಾಮಯ್ಯನವರು ಸತ್ತರು.

೧ನೆ ಒ:—ಅದನ್ನು ಕೇಳಿ ನಾವು ಬಂದೆವು.

೨ನೆ ಒ:—ಆದರೆ, ಈತ ತಾನೇ ರಾಮಯ್ಯ ಅಂತೆ.

ರಾಮಯ್ಯ:—ನಾನು, ಭಾವಾ! ನಾನು!

೧ನೆ ಒ:—ಬಾಯ್ಮುಚ್ಚು!

ಭಾವ:—ನಾನೆಲ್ಲ ಸರಿ ಕೇಳುತ್ತೇನೆ! ಅಂದರೆ ರಾಮಯ್ಯನವರು ಸತ್ತರೆ?

೧ನೆ ಒ:—ಸತ್ತರು, ದಿವಂಗತರಾದರು.

೨ನೆ ಒ:—ಸ್ವರ್ಗಸ್ಥರಾದರೊ, ನರಕಸ್ಥರಾದರೋ ಗೊತ್ತಿಲ್ಲ.

ಭಾವ:—ಆದರೆ, ನಾನೇನೂ ಆವಾರ್ತೆ ಕೇಳಿಲ್ಲ, ಅದು ಸುಳ್ಳು.

ರಾಮಯ್ಯ:—ಭಾವ, ನೋಡಬಾರದೆ, ನಾನಿಲ್ಲೆ ಕದಿರೆಗೆ ಸ್ನಾನಕ್ಕಾಗಿ . . . .

೧ನೆ ಒ:—ಬಾಯ್ಮುಚ್ಚುತ್ತೀಯೊ, ಮುಚ್ಚಬೇಕೊ?

ಭಾವ:—ಹ್ಹಾ! ರಾಮಯ್ಯನವರು ಸತ್ತರೆ?

೨ನೆ ಒ:—ಸತ್ತರು ಮಾತ್ರವೆ? ಅವರನ್ನು ಸ್ಮಶಾನಕ್ಕೂ ಒಯ್ದರು.

ಭಾವ:—ಯಾವಾಗ ಸತ್ತರು?

೧ನೆ ಒ:—ನಡುಮಧ್ಯಾಹ್ನಕ್ಕೆ.

ಭಾವ:—ಏನಾಗಿ ಸತ್ತರು?

೨ನೆ ಒ:—ಸರ್ಪ ಕಚ್ಚಿತು.

ಭಾವ:—ನಡುಮಧ್ಯಾಹ್ನಕ್ಕೆ ಸರ್ಪಕಚ್ಚಿತೆಂದರೆ! ಛೆ!!

ರಾಮಯ್ಯ:—ಭಾವಾ ನೀನೂ ನಂಬುವುದೊ? ಇಂತಹ ಅನ್ಯಾಯವುಂಟೊ? ನಾನಿಲ್ಲಿ ಜೀವಂತನಿರುವಾಗ . . . .

೨ನೆ ಒ:—ನೂಕಿ ಅವನನ್ನು ಹೊರಗೆ.

ಭಾವ:—ಮಧ್ಯಾಹ್ನದ ವೇಳೆ ಸರ್ಪಕಚ್ಚಿತೆಂದರೆ, ಹೇಗೆ?

**೧ನೆ ಒ:**—ಅವರೇನು ಮಾಡಿಯಾರು? ಜಾತಕದಲ್ಲಿ ಮೊದಲೇ ಬರೆದಿತ್ತು. ಪಾಪ! ಅವರದೇನು ತಪ್ಪು?

**ಭಾವ:**—ನೋಡುವ, ಜಾತಕ ನೋಡುವ. (ನೋಡುವನು.) ಸರಿ. ಸರಿ! ಹಾಗೆ ಇದೆ.

**೨ನೆ ಒ:**—ಮತ್ತೆ ನಾವು ಸುಳ್ಳಾಡುವೆವೊ?

**ರಾಮಯ್ಯ:**—ಸುಳ್ಳಲ್ಲದೆ ಮತ್ತೇನು? ನಾನು ಬದುಕಿಯೆ ಇದ್ದೇನೆ.

**ಭಾವ:**—ಇಲ್ಲಿ ಸ್ಫುಟವಾಗಿ ಬರೆದೇ ಇದೆ. ಮತ್ತೇನು?

**ರಾಮಯ್ಯ:**—ಈ ಅತ್ಯಾಚಾರದಲ್ಲಿ ನೀನೂ ಸೇರುವುದೆ ಭಾವಾ? ಇವರೆಲ್ಲರೂ ಸಾಯಲಿ. ನಿನಗೂ ನನ್ನ ಗುರುತು ಇಲ್ಲವೆ?

**ಭಾವ:**—ಸ್ವಲ್ಪ ತಡಿ. ಇಲ್ಲಿ ನೋಡು. 'ನಾಗಪಂಚಮಿಯ ದಿನ, ಎರಡನೆಯ ಪ್ರಹರದಲ್ಲಿ ಕೇತು ದಶೆಯು ಮುಕ್ತವಾಗುವಾಗ ತನ್ನ ಮನೆಯಲ್ಲಿ ಸರ್ಪ ಘಾತದಿಂದ ಮುಕ್ತಿ.'

**ರಾಮಯ್ಯ:**—ಅಂದರೆ, ನನ್ನ ಗುರುತೇ ಇಲ್ಲವೆ?

**ಭಾವ:**—ಊಹೂಂ!

**೧ನೆ ಒ:**—ಅದೂ ಅಲ್ಲದೆ ಸ್ವಾಮಿ, ಇಲ್ಲಿ ಡಾಕ್ಟರರ ಸರ್ಟಿಫಿಕೇಟು ಇದೆ.

**ಭಾವ:**—ಇಲ್ಲಿ? ಎಲ್ಲಿದೆ?

**೨ನೆ ಒ:**—'I certify that Ramayya is defunct, is as dead as a door nail.' (ಎಂದು ಓದಿ ಹೇಳುವನು.)

**ರಾಮಯ್ಯ:**—ಕನ್ನಡದಲ್ಲಿ ಕೊಂದುದು ಸಾಲದೆ ಇಂಗ್ಲಿಷಿನಲ್ಲಿಯೂ ಕೊಂದಿರೆ? ದುಬಾರಿ ಮರಣವಾಯಿತಯ್ಯ!

**ಭಾವ:**— ನಾವೇನು ಮಾಡುವ? ಇತ್ತ ಜಾತಕ. ಅತ್ತ ಸರ್ಟಿಫಿಕೇಟು.

**೧ನೆ ಒ:**—ಅದಲ್ಲದೆ ನಾವಿಷ್ಟು ಜನರೂ ಸಾಕ್ಷಿ.

**ಭಾವ:**—ನೀವೆಲ್ಲರೂ ನೋಡಿದಿರಾ?

**ಒಕ್ಕಲುಗಳು:**—ಎಲ್ಲರೂ.

**ಭಾವ:**—ಸರಿ. ಇನ್ನೇನು ಬೇಕು—ಇಷ್ಟು ರುಜುವಾತಿರುವಾಗ? ಇನ್ನೂ ರಾಮಯ್ಯನು ಬದುಕಿಕೊಂಡಿದ್ದರೆ . . . .

**ರಾಮಯ್ಯ:**—ಬದುಕಿಕೊಂಡಿದ್ದರೆ?

**ಭಾವ:**—ಬದುಕಿಕೊಂಡರೂ ಅದು ಮಂಜೂರಲ್ಲ.

**ರಾಮಯ್ಯ:**—ಭಾವಾ! ನಿನಗೂ ಕುರುಡಾಯಿತೆ ಕಣ್ಣು? ನನ್ನ ಕಡೆಗೆ ನೆಟ್ಟಗೆ ನೋಡು. ಮನೇ ವಕೀಲನೆಂದು ಸಾವಿರ ಸಾವಿರ ರುಸುಂ ಪಡದರೂ ನನ್ನ ಗುರುತಿಲ್ಲವೆ ಮಹಾರಾಯಾ?

**ಭಾವ:**—ನಾನು ಇಷ್ಟೇ ಹೇಳೇನು. ನೀವು ಹೆಚ್ಚು ಕಡಿಮೆ ಸಾಧಾರಣ ರಾಮಯ್ಯನವರಂತೆ ಕಾಣುತ್ತಿರಬಹುದು.

**ರಾಮಯ್ಯ:**—ರಾಮಯ್ಯನವರ **ಹಾಗೆ.** ಕಾಣುತ್ತಿರ**ಬಹುದು.** ತಲೆ ತಿರುಗಿತಯ್ಯಾ!

**ಭಾವ:**—ಅದಕ್ಕಿಂತಲೂ ಹೆಚ್ಚಿಗೆ ಏನೂ, ಹೇಳಬರುವುದಿಲ್ಲ. ಅಲ್ಲಲ್ಲಿ ಅವಳಿ ಜವಳಿಯಾಗಿ ಹುಟ್ಟುವುದುಂಟು. ರಾಮಯ್ಯನವರ ತಂದೆಗೆ ಅವಳಿ ಮಕ್ಕಳು ಹುಟ್ಟಿದ ವಿಷಯ ಯಾವ ರಿಕಾರ್ಡೂ ಇಲ್ಲ. ಅವರನ್ನು ಮೊದಲು ಯಾರೂ ಕೇಳಿದವರು ಇಲ್ಲ. ಈಗ ಕೇಳುವುದು ಸಾಧ್ಯವೂ ಇಲ್ಲ; ಏಕೆಂದರೆ ಅವರೂ ಈಗ ಸ್ವರ್ಗದಲ್ಲಿರುವುದರಿಂದ ಅಲ್ಲಿಗೆ ಸಮ್ಮನ್ಸ್ ಜ್ಯಾರಿ ಮಾಡಬರುವುದಿಲ್ಲ.

**ರಾಮಯ್ಯ:**—ಆದರೆ ನಾನು ಹೇಳುತ್ತೇನಲ್ಲ?

**ಭಾವ:**—ಅದು ಪ್ರಮಾಣವಲ್ಲ. ನೀವ್ಯಾರೊ ನನಗೆ ಗೊತ್ತೇ ಇಲ್ಲ. ಒಂದು ವೇಳೆ ನೀವೇ ರಾಮಯ್ಯನೆಂದರೂ ಅದಕ್ಕೆ ರುಜುವಾತಿಲ್ಲ.

**ರಾಮಯ್ಯ:**—ಹಾಗಾದರೆ ಹೇಗೆ ರುಜುಪಡಿಸಲಿ?

**ಭಾವ**:—ನಿಮಗ್ಯಾರೂ ಸಾಕ್ಷಿಗಾರರಿದ್ದಾರೆಯೆ?

**ರಾಮಯ್ಯ**:—ಸಾಕ್ಷಿ! ಯಾರು?

**ಭಾವ**:—ಇವರೆಲ್ಲರೂ ನೀವು ರಾಮಯ್ಯನವರು ಅಲ್ಲವೆಂದು ಪ್ರಮಾಣವಾಗಿ ಹೇಳುತ್ತಾರೆ.

**ಒಕ್ಕಲುಗಳು**:—ಹೌದು. ಇವರು ಯಾವ ಕಾಲಕ್ಕೂ ರಾಮಯ್ಯನವರಲ್ಲ.

**ರಾಮಯ್ಯ**:—ಹಾಗಿದ್ದರೆ ಅಲ್ಲ?

**೧ನೆ ಒ**:—ಎಂದೆಂದಿಗೂ ಅಲ್ಲ.

**೨ನೆ ಒ**:—ರಾಮಯ್ಯನವರು ಹೀಗೊ?

**೧ನೆ ಒ**:—ಎಷ್ಟೆಂದರೂ ವೇಷ ಅಲ್ಲವೊ?

**ರಾಮಯ್ಯ**:—ನಾನು ಮೊಕದ್ದಮೆ ಮಾಡುತ್ತೇನೆ.

**ಭಾವ**:—ರಾಮಯ್ಯನವರ ವಕೀಲನೇ ನಾನು ಇಲ್ಲಿರುವಾಗ ನಿಮ್ಮ ಮೊಕದ್ದಮೆಗೆ ಒಂದು ಕಾಸು ಬೆಲೆ. ರಾಮಯ್ಯನವರು ಸತ್ತ ರುಜುವಾತು ನನ್ನಲ್ಲಿ ಇರುವಾಗ ಇನ್ನಾವನೂ ರಾಮಯ್ಯನಲ್ಲ. ನೋಡಿ, ನೀವು ಯಾರೇ ಇರಲಿ. ನಾನು ಮೊದಲೇ ತಿಳಿಸುತ್ತೇನೆ. ಸುಳ್ಳು ವ್ಯಾಜ್ಯಕ್ಕೆ ಕೈಹಾಕಿದರೆ ನಾಲ್ಕು ವರ್ಷ ಶಿತುವೆಯಾದೀತು. ಹೀಗೆ ಏನಾದರೂ ಅಲ್ಲಲ್ಲಿ ವೇಷಹಾಕಿಕೊಂಡು ನಾಲ್ಕು ದಿನ ಸಿಕ್ಕಿದ್ದ ರಲ್ಲಿ ತೃಪ್ತಿಯಾಗಿ ಬದುಕುವುದು ಬಿಟ್ಟು, ಒಮ್ಮೆಲೇ ರಾಮಯ್ಯನೆನಿಸಿ ಶಿಕ್ಷೆ ಅನುಭವಿಸಬೇಡಿರಿ. ಇದೊಂದು ಸರ್ಟಿಫಿಕೇಟು ಸಾಕು, ನಿಮ್ಮ ಸರ್ವನಾಶಕ್ಕೆ. ನೋಡಿ, ಅದು ಡಾಕ್ಟರರ ಸರ್ಟಿಫಿಕೇಟು. ಸತ್ತವ ರನ್ನು ಬದುಕಿಸಲಿಕ್ಕೆ ಈ ಸರ್ಟಿಫಿಕೇಟಿಗೆ ಬಲವಿಲ್ಲ; ಆದರೆ ಜೀವ ದಿಂದಿದ್ದರೂ ಅನಾಯಾಸವಾಗಿ ಅವನನ್ನು ಸಾಯಗೊಳಿಸಬಲ್ಲುದು.

**ರಾಮಯ್ಯ**:—ಅದೆಲ್ಲ ಇರಲಿ, ಭಾವಾ! ನಿನಗೂ ನನ್ನಲ್ಲಿ ಸಂದೇಹವೆ?

**ಭಾವ:**—ನನಗೂ ಅಂದರೇನು? ನೀವೇ ಆಲೋಚಿಸಿ. ನಿಮಗೇ ನಿಮ್ಮಲ್ಲಿ ಸಂದೇಹವುಂಟೊ ಇಲ್ಲವೊ? ಇತ್ತ ಸ್ಫುಟ ಜಾತಕ; ಅತ್ತ ಸರ್ಟಿಫಿಕೇಟು.

**ರಾಮಯ್ಯ:**—ನೋಡುವ ಆ ಸರ್ಟಿಫಿಕೇಟು. (ನೋಡುವನು)

**ಭಾವ:**—ಹೇಗೆ? ಈಗ ನಿಮಗೆ ಸಂದೇಹವಾಯಿತೊ ಇಲ್ಲವೊ? ಅದಲ್ಲದೆ ರಾಮಯ್ಯನವರ ಹೆಣವನ್ನು ಹೊರಗೆ ಎತ್ತಿಕೊಂಡು ಹೋದ ರೆಂದರೆ?

**ರಾಮಯ್ಯ:**—ಅದು ಹೌದು. ನಿಜ: ಸಂದೇಹ. ಆ ದೇಹ ಹೊರಗೆ ಹೋದುದರಿಂದ ಈ ಸಂದೇಹ.

[೧ನೆ, ೨ನೆ, ೩ನೆ ನೆರೆಯುವರು ಪತ್ರಿಕೆ ಹಿಡಿದುಕೊಂಡು ಪ್ರವೇಶಿಸುವರು.]

**೧ನೆಯವ:**—ರಾಮಯ್ಯ ಸತ್ತದ್ದೇ, ಪತ್ರಿಕೆಯಲ್ಲೆಲ್ಲ ಎಷ್ಟು ಸಂತೋಷ ವಾರ್ತೆಯಾಗಿ ಬರೆದಿರುತ್ತಾರೆ! 'ಜಿಗಳೆ ರಕ್ತ ಹೀರಿದಂತೆ ಬಡ್ಡಿಯ ನೆವದಿಂದ ಬಡವರ ಪ್ರಾಣವನ್ನೇ ಹೀರುತ್ತಿದ್ದ ರಾಮಯ್ಯ ನವರು ಸತ್ತರು. ಎಷ್ಟು ಕಷ್ಟದಿಂದ ಎಷ್ಟು ಹಣ ಕೂಡಿಸಿಟ್ಟರೂ ಈಗ ನಿರಾಯಾಸವಾಗಿ ಸಿಕ್ಕವರೆಲ್ಲ ಅದನ್ನೂ ಸಿಕ್ಕಾಬಟ್ಟೆ ನೀರಿನಂತೆ ಚೆಲ್ಲಿ ಧ್ವಂಸ ಮಾಡುವರು. ಇದ್ದಾಗ ಸುಖವಿಲ್ಲ. ಸತ್ತರೆ ನರಕ.'

**ಭಾವ:**—ಅದೇನು ಪತ್ರಿಕೆಯಲ್ಲಿಯೂ ಬಂದು ಹೋಯಿತೆ?

**೧ನೆಯವ:**—ಬಂದೇ ಬಿಟ್ಟಿದೆ. ಬರಾಬರಿ.

**೨ನೆಯವ:**—ಛಾಪಿಸಿಯೂ ಆಯ್ತೆಂದರೆ! ಇಕ್ಕೊಳ್ಳಿ.

**ರಾಮಯ್ಯ:**—ಕೊಂದೂ ಛಾಪಿಸಿದರು. ಛಾಪಿಸಿಯೂ ಕೊಂದರು.

(ರಾಮಯ್ಯ ನಿಂತಲ್ಲೆ ಕೂತನು.)

**ಭಾವ:**—ನೀವೆಲ್ಲರೂ ಈಗ ಮನೆಗೆ ಹೋಗಿರಿ. ರಾಮಯ್ಯ ನವರ ಮನೆತನದ ವಕೀಲನಾದ ನಾನು ಅವರ ಎಸ್ಟೇಟಿನ ಎಡ್ ಮಿನಿಸ್ಟ್ರೇಶನ್ ವಶಪಡಿಸಿಕೊಳ್ಳಬೇಕಾಗಿದೆ.

**ರಾಮಯ್ಯ**:—(ಎದ್ದು) ಲೆಟರ್ ಒಫ್ ಎಡ್‌ಮಿನಿಸ್ಟ್ರೇಶನ್ ಯಾರ ಹೆಸರಲ್ಲಿ?

**ಭಾವ**:—ಅವರ ವಿಧವೆಯಾದ ಪತ್ನಿಯ ಹೆಸರಲ್ಲಿ. ಆ ಸೊತ್ತನ್ನೆಲ್ಲ ನಾನೇ ಆಡಳಿತೆ ನೋಡಬೇಕಾಗಿದೆ. ಬಹಳ ಕಷ್ಟದ ಕೆಲಸ. ಏನು ಮಾಡಲಿ? (ಉಳಿದವರಿಗೆ) ನೀವೆಲ್ಲರೂ ಇನ್ನು ಬಾಕಿ ಉಳಿದ ಸಾಲದ ಮೇಲೆ ಬಡ್ಡಿಕೊಡಬೇಕಾಗಿಲ್ಲ.

**ರಾಮಯ್ಯ**:—ಇದೆಲ್ಲಿಯದು?

**೧, ೨, ೩ನೆಯವರು**:—ವಕೀಲರಿಗೆ ನಮಸ್ಕಾರ. ದೇವರು ನಿಮ್ಮನ್ನು ಆಶೀರ್ವದಿಸಲಿ.

**ರಾಮಯ್ಯ**:—ಯಾರ ಸಾಲಕ್ಕೆ ಯಾರು ಬಡ್ಡಿ ಮಾಫಿಮಾಡುವು ದಯ್ಯಾ?

**ಭಾವ**:—ಆ ಬಡ್ಡಿಯಾದರೂ ಏಕೆ? ಇಲ್ಲಿ ಹಣ ತುಂಬಾ ಲಕ್ಷಕಟ್ಟಲೆ ಜಮೆಯಿದೆ. ರಾಮಯ್ಯನವರು ಇಟ್ಟುಹೋಗಿದ್ದಾರೆ.

**ರಾಮಯ್ಯ**:—ಹೋಗಿದ್ದಾರೆ! ಭಾವಾ, ನಾನು ಇಲ್ಲೇ ಇದ್ದೇನಲ್ಲ, ಸತ್ತಿದ್ದೇನೆಯೆ? ದಮ್ಮಯ್ಯಾ!

**ಭಾವ**:—ನಾನೇನು ಮಾಡಲಿ, ಕಾನೂನೇ ಹಾಗೆ.

**ರಾಮಯ್ಯ**:—ಕೇಳಿದಷ್ಟು ದುಃಖವೇ ಹೆಚ್ಚುವಂತಾಯಿತಲ್ಲ. ನಾನು ಸತ್ತಿಲ್ಲ. ಇದು ನನ್ನ ಮನೆ. ಆದರೂ, ಜೀವದಿಂದಿದ್ದರೂ ಸತ್ತಂತಾಯಿತು. ಇನ್ನೇನು ಮಾಡಲಿ? . . . .

(ತೆರೆಯಲ್ಲಿ: ರೋದನ ಧ್ವನಿ)

ದೇವರೆ ನಾನೇನು ಮಾಡಲಿ. ಒಳಗಿನಿಂದ ಅಳುತ್ತಿದ್ದಾರೆ. ನಾನು ಇಲ್ಲಿದ್ದೇನೆ. ಏನು ಅತ್ಯಾಚಾರವಿದು! ನಾನು ಬದುಕಿರುವಾಗಲೇ ಹೀಗಾದರೆ ನನ್ನ ನಂತರ? ಅಳಲಿಕ್ಕಿದ್ದಷ್ಟು ಈಗಲೇ ಅತ್ತು ಮುಗಿಸಿದರೆ, ಅಗತ್ಯಬಿದ್ದಾಗ ಅಳಲಿಕ್ಕೂ ಉಳಿಯಲಿಕ್ಕಿಲ್ಲವಲ್ಲ.

**ಭಾವ:**—ಕಾನೂನು ಪ್ರಕಾರ ಅಧಿಕಾರವೆಲ್ಲವೂ ನನ್ನದು. ಎಲ್ಲ ವನ್ನೂ ವಶಪಡಿಸಿಕೊಳ್ಳುವೆನು.

**ರಾಮಯ್ಯ:**—ನಾನು ಜೀವದಿಂದಿರುತ್ತ!

**ಭಾವ:**—ಅದಕ್ಕೆ ರುಜುವಾತಿಲ್ಲ.

**ರಾಮಯ್ಯ:**—ಅದೇಕೆ? ಒಳಗೆ ಪತ್ನಿಯಿಲ್ಲವೆ? ಕರೆಯಿರಿ ಆಕೆ ಯನ್ನು.

**ಭಾವ:**—ಹೂ. ಆಯ್ತು. ನೀವೇ ಕರೆಯಿರಿ.

**ರಾಮಯ್ಯ:**—ಎಲೆ, ಏನು? ಸುಮ್ಮನೆ ಅಳಬೇಡ. ನೋಡು. ಮನೇ ಒಳಗಿದ್ದು ಫಲವಿಲ್ಲ. ಹೊರಗೆ ಬಾ. ಅಯ್ಯೊ, ಆ ಲಜ್ಜೆ ಸುಡಲಿ. ಹೊರಗೆ ಬಾ, ನಾನು ಜೀವಂತ ಸಾಯಲಿಕ್ಕದ್ದೇನೆ.

(ಪತ್ನಿ ಬರುವಳು.)

**ರಾಮಯ್ಯ:**—ನೋಡು, ಗಂಡ ಜೀವಂತ ಇದ್ದಾರೆಂದು ಅವರಿ ಗೆಲ್ಲ ಸರಿ ಹೇಳು. (ಕೈ ಹಿಡಿಯುವನು.)

**ಪತ್ನಿ:**—(ಬೆದರಿದಂತೆ ನಟಿಸಿ) ದೇವರೆ! ಅಷ್ಟರಲ್ಲಿ ಪಿಶಾಚಿಯಾ ಗಿಯೂ ಬಂತಲ್ಲ.

**ರಾಮಯ್ಯ:**—ನೋಡು. ನಾನು ನಿನ್ನ ಸ್ವಾಮಿ, ವಲ್ಲಭ, ಪ್ರಾಣೇಶ, ನಾಥ, ರಾಮಯ್ಯ, ತಿಳಿಯಿತೆ? ಮುಖ ತಿರುಗಿಸಿ ಕಣ್ಣೆತ್ತಿ ನೋಡು.

**ಪತ್ನಿ:**—(ಅವಳು ತಿರುಗಿ ನೋಡುತ್ತಲೆ) ಅಣ್ಣಾ, ಆ ಬಟ್ಟೆ ಹಾಸು. ನಾನು ಈಗಲೇ ಮೂರ್ಛೆ ಹೋಗುವೆನು. (ಬಟ್ಟೆಯ ಮೇಲೆ ಮೂರ್ಛೆ ಹೋಗುವಳು.)

**ರಾಮಯ್ಯ:**—ಇದೇನು ಕರ್ಮ, ಜನ್ಮಕ್ಕಿಲ್ಲದ ರೋಗ ಇಂದಿಗೇ ಸುರುವಾಯಿತು?

**ಭಾವ:**—ಛೆ! ಏನಯ್ಯ, ಅನರ್ಥ ಮಾಡಿದೆ!

**ರಾಮಯ್ಯ:**—ಅನರ್ಥವೆಲ್ಲಿ? ನನ್ನ ಪತ್ನಿಯಲ್ಲವೆ?

**ಭಾವ**:—ನಿಮ್ಮ ಪತ್ನಿ.

**ರಾಮಯ್ಯ**:—ಮತ್ತೆ! (ಅವಳಿದ್ದು ಕೂತುಕೊಳ್ಳುವಳು.)

**ಪತ್ನಿ**:—ಪತಿಯಿಲ್ಲದೆ ನಾನೇತು ಬದುಕಲಿ.

**ರಾಮಯ್ಯ**:—ಅಯ್ಯ, ಅಯ್ಯ, ಸಾಧ್ವೀ, ಸಾಧ್ವೀ, ಲಕ್ಷ್ಮೀ!

**ಪತ್ನಿ**:—ಅಬಲೆಯಾದ ನನ್ನನ್ನು—

**ರಾಮಯ್ಯ**:—ಬಿಡುವುದಿಲ್ಲ. ಬಲಕ್ಕಿದ್ದೇನೆ. ಬಲಕ್ಕೆ!

**ಪತ್ನಿ**:—ಈ ವ್ಯಾಕುಲ ಹಿಡಿದ ಪ್ರಾಣವನ್ನು—

**ರಾಮಯ್ಯ**:—ಇಷ್ಟರಲ್ಲೆ ಬಿಡಬೇಡ. ತಡಿ, ನನ್ನ ರುಜು ವಾತಾಗಿ ಮತ್ತೆ ಬಿಡಬಹುದು.

**ಭಾವ**:—ವಕೀಲನಾದ ನಾನೇ ಇಲ್ಲಿದ್ದೇನೆ. ಇನ್ನೂ ವ್ಯಾಕುಲ ವೇಕೆ? ಸ್ವಲ್ಪ ವಿಶ್ರಮಿಸಬಹುದು. (ಹೋಗುವಳು.)

**ರಾಮಯ್ಯ**:—ಆಗಲಿ. ಮುಂದಿನ ಆಲೋಚನೆ?

**ಭಾವ**:—ಮುಂದಿನ ಆಲೋಚನೆಯೇನು? ಎಳೆಯ ವಯಸ್ಸಿನ ವಿಧವೆ. ಸುಶಿಕ್ಷಿತೆ, ಶ್ರೀಮಂತೆ. ಇನ್ನು ವಿವಾಹವೇ ಸಿದ್ಧ.

**ರಾಮಯ್ಯ**:—ಹಾ! ಇದೆಲ್ಲಿಯದು? ಇತ್ತ ಶ್ರಾದ್ಧ. ಅತ್ತ ಮದುವೆ. ಏನು ಎರಡೂ ಒಂದೇ ಮುಹೂರ್ತದಲ್ಲಿ ಜರಗುವುದೇ? ಭಗವಂತಾ!

**ಭಾವ**:—ವಿಧವಾ ವಿವಾಹವಾಗಬಾರದೆಂದು ಎಲ್ಲಿದೆ? ನಾನೆಂತೂ ಅದಕ್ಕೆ ವಿರೋಧಮಾಡಲಾರೆ.

**ರಾಮಯ್ಯ**:—ಆದರೆ ಅವಳು ನನ್ನ ಪತ್ನಿ; ಹಾಗಿರುವಾಗ ಅದೆಲ್ಲ ಹೇಗಾದೀತು?

**ಭಾವ**:—ಹೇಗಾದೀತೆಂದರೆ! ಅವಳೇ ಗಂಡ ಇಲ್ಲಿದ್ದಾನೆಂದು ಒಪ್ಪಲಿಲ್ಲವಲ್ಲಾ! ನಿಮಗೆ ಸಾಕ್ಷಿಯೆಲ್ಲಿ? ಆದರೆ ನೋಡಿ. ನಿಮ್ಮನ್ನು ಕಂಡರೆ ನನ್ನಲ್ಲಿ ಕರುಣೆ ಹುಟ್ಟುವುದು. ರುಜುವಾತಿಲ್ಲದೆ ನೀವೆಲ್ಲ

ವನ್ನೂ ಕಳೆದುಕೊಂಡಂತಾಯಿತು. ಕಾನೂನಿಗೆ ನಿಮ್ಮ ರುಜುವಾತು ಸರಿಹೋಗುವುದಿಲ್ಲ. ನಾನೇನು ಮಾಡಲಿ.

**ರಾಮಯ್ಯ**:—ಹೌದು. (ಸ್ವ) ಕೈಹಿಡಿದಾಕೆ ನನ್ನನ್ನು ಗುರುತಿಸ ಲಿಲ್ಲ. ಅಥವಾ ನಿಜವಾಗಿಯೂ ನಾನು ಸತ್ತಿರಬೇಕು. ನೋಡುವ. ನಾನು ಇದ್ದೇನೊ ಇಲ್ಲವೊ ಇದೊಂದು ಸಮಸ್ಯೆ. ಈ ಸಂಸಾರ ಸಾಗರದಲ್ಲಿ ಎತ್ತಲೋ ಹೋಗುವ ದೋಣಿಯಂತಿದ್ದೇನೆ. ಅಥವಾ ಕತ್ತಲಲ್ಲಿದ್ದೇನೆ. ಏನಾಗಿದೆ? ಚಿವುಟಿದರೆ ನೋಯುತ್ತದೆ. ತಲೆ, ತಲೆ ಸರಿಯಿದೆ. ಉಸುರು, ಬುಸುಗುಟ್ಟುತ್ತಾ ಇದೆ. ಬದುಕಿಯೂ ಇಲ್ಲ, ಸಾಯಲೂ ಇಲ್ಲ. ಜೀವನ-ಮರಣ ಇವೆರಡೂ ಬೆರೆತುಕೊಂಡು ಏನೇನೊ ಆಗಿದೆ; ಇದೊಂದು ನಮೂನೆ!

[ಇಬ್ಬರು ಮಕ್ಕಳ ಪ್ರವೇಶ]

**೧ನೆಯವ**:—ಅರ್ಧ ಸಂಪತ್ತೆಲ್ಲ ನನ್ನದು.

**೨ನೆಯವ**:—ಒಂದೇ ಒಂದು ಕಾಸು ನಿನಗಿಲ್ಲ ಕಳ್ಳ. ಅಪ್ಪ ಸಾಯುವಾಗ ಎಲ್ಲಾ ನನಗೆಂತ ವೀಲು ಮಾಡಿ ಹೋಗಿದ್ದಾರೆ.

**ರಾಮಯ್ಯ**:—ಹೋಗಿದ್ದಾರೆ, ಯಾರು?

**೧ನೆಯವ**:—ಅದೆಲ್ಲ ಸುಳ್ಳು ವೀಲು. ನಾನು ವ್ಯಾಜ ಮಾಡುತ್ತೇನೆ.

**೨ನೆಯವ**:—ನಾನು ಮದ್ರಾಸಿನಿಂದ ಬ್ಯಾರಿಸ್ಟರ್ ತರಿಸ್ತೇನೆ.

**೧ನೆಯವ**:—ನನ್ನದು ಲಂಡನ್ ವರೆಗೂ ಸರ್ತಿ.

**೨ನೆಯವ**:—ನಾನು ಹತ್ತು ಸಾವಿರ ರೂಪಾಯಿ ಖರ್ಚು ಮಾಡುತ್ತೇನೆ.

**೧ನೆಯವ**:—ಅದಕ್ಕಿಂತಲೂ ಹತ್ತು ಸಾವಿರ ನಾನು ಹೆಚ್ಚು.

**೨ನೆಯವ**:—ಮೊದಲು ನನ್ನ ಮನೆಯಿಂದ ಹೊರಟುಹೋಗು.

**೧ನೆಯವ**:—ನಿನ್ನ ಮನೆ! ನನ್ನಪ್ಪನ ಮನೆ.

**ರಾಮಯ್ಯ:**— ಮಕ್ಕಳೆ! ಇಷ್ಟರಲ್ಲಿಯೆ ಪಾಲುಮಾಡಿಕೊಳ್ಳಲು ಹೊಡೆದಾಟವೆ? ನಾನೇನೂ ಸತ್ತಿಲ್ಲ. ಬಲ್ಲಿರಾ, ಕಣ್ಣೆತ್ತಿ ಇತ್ತ ನೋಡಿರಿ.

(ಇಬ್ಬರೂ ಭೂತವೆಂದು ಓಡುವರು. ಭಾವ ತಡೆವನು.)

**ರಾಮಯ್ಯ:**— ಹುಡುಗರಿಬ್ಬರಿಗೂ ನನ್ನ ಗುರುತು ಸಿಕ್ಕಿತು ಆದರೂ ಅವರು ನಾನಿದ್ದೇನೆಂದು ಒಪ್ಪಲಿಲ್ಲ. ಅಯ್ಯೋ ಮಕ್ಕಳೆ! ತಂದೆ ಉಪವಾಸ ಬಿದ್ದೂ ಹತ್ತು ಜನರಿಗೆ ಮೋಸ ಮಾಡಿಯಾದರೂ ಹಣಕೂಡಿಸಿಟ್ಟರೆ, ಅದೇನು ಮಕ್ಕಳು ಪುಡಿಮಾಡಲೆಂದೇ? ಲೋಭಿಗಳೆ, ಬದುಕಿಕೊಂಡಿರುವಾಗಲೇ ಈ ವಿಚಾರ ನೋಡಿಕೊಳ್ಳಿರಿ. ಸತ್ತು ಇದನ್ನು ಕಲಿತುಕೊಳ್ಳಲು ಯಾರಿಗೂ ಸಾಧ್ಯವಿಲ್ಲ.

**ಭಾವ:**— ಇನ್ನು ಸಾಕುಮಾಡಿರಿ, ಈ ತಂಟೆಯನ್ನು. ಲೋಭಿಯ ಮಕ್ಕಳ ಸ್ಥಿತಿಯೆ ಹೀಗೆ; ಇದ್ದಾಗ ಉಣ್ಣದೆ ಸಾಯುತಿದ್ದಂತೆ ತಮಗೂ ಇತರರಿಗೂ ಮಣ್ಣು ಮಾಡಿಟ್ಟು ಸಾಯುವರು. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುತ್ತಿದ್ದರೆ ಹೀಗಾಗುತ್ತಿದ್ದಿತೇ?

**ರಾಮಯ್ಯ:**— ಹಣದ ರಾಶಿಯಿರುವಾಗ ಬರಹವೇಕೆ ಎಂದಿದ್ದೆ. ಈಗ ಇವರು ಇದ್ದೂ ಫಲವಿಲ್ಲ. ಎರಡು ನಾಯಿಗಳನ್ನು ಸಾಕಿದ್ದರೆ ನನ್ನ ಗುರುತು ಹಿಡಿದು ರುಜುವಡಿಸುತ್ತಿದ್ದುವಲ್ಲ! ನೆಂಟರು ಕುಟುಂಬ ಎಲ್ಲವೂ ವ್ಯರ್ಥ. ಅಂದಿನಿಂದ ಇದುವರೆಗೂ ಮರಣ ಭಯ. ಜಾತಕದಂತಾದೀತೆಂದು ಹೆದರಿ ಆ ಅದೃಷ್ಟ ತಪ್ಪಿಸಹೋಗಿ ಈ ಅದೃಷ್ಟವಾಯಿತು. ಬಹುಶಃ ಈ ಅವಸ್ಥೆಗಿಂತ ಮರಣವಾದರೂ ಸುಖವಾಗಿತ್ತು. ಸತ್ತು ಹೆಣವಾಗಿದ್ದರೆ ಈಗ ಜೀವಂತ ಹೆಣವಾಗಿರುವುದಕ್ಕಿಂತ ಉತ್ತಮವಾಗಿದ್ದಿತು. ಲೋಭಿ ಸತ್ತರೆ ಇತರರಿಗೆ ಸಂತೋಷ. ಬೆಕ್ಕಿನ ಮರಿ ಸತ್ತರೂ ಅಳುವರು. ಲಕ್ಷಾಧಿಪತಿ ಸತ್ತರೆ ನಗುವರು. ಏನೆನ್ನಲಿ? ನಾನು ನನ್ನಷ್ಟಕ್ಕೆ ಇದ್ದುಕೊಳ್ಳುವೆನು. ಈ ಜನ್ಮವೆಂಬುದು ದುಃಸ್ವಪ್ನದಂತಾಯಿತು. ಅದನ್ನು ಇನ್ನುಳಿದ ಕೆಲವೇ ವರ್ಷ ತಪಸ್ಸಿ

ನಲ್ಲಿ ಕಳೆಯುವೆನು. ಇನ್ನು ರಾಮಯ್ಯ, ರಾಮನಾಮವೇ ನಿನಗೆ ಗತಿ. ನನ್ನನ್ನು ನಾನೇ ಮರೆತುಕೊಳ್ಳುವೆನು.

**ಭಾವ**:—[ಅವನ ಪಶ್ಚಾತ್ತಾಪವನ್ನು ತಿಳಿದುಕೊಂಡು] ಭಾವನವರೇನು ಭಾವಿಸುವಿರಿ?

**ರಾಮಯ್ಯ**:—ಯಾರು, ಭಾವಯ್ಯ!

**ಭಾವ**:—ನೀವೆ. ಮತ್ತಾರು?

**ರಾಮಯ್ಯ**:—ನಾನು ಯಾರ ಭಾವಯ್ಯನೂ ಅಲ್ಲ. ನನ್ನ ಭಾವವೇ ಬೇರೆ. ನಾನು ಇನ್ನು ಬೇರೆಯೆ.

**ಭಾವ**:—ಏಕ ಹಾಗೆನ್ನೀರಿ. ಭಾವಯ್ಯನವರೆ. ರಾಮಯ್ಯೋರೆ.

**ರಾಮಯ್ಯ**:—ರಾಮಯ್ಯ, ಯಾವ ರಾಮಯ್ಯ?

**ಭಾವ**:—ನೀವೆ, ಇಲ್ಲದಿದ್ದರೆ ಮತ್ತ್ಯಾರು?

**ರಾಮಯ್ಯ**:—ರಾಮಯ್ಯ ಎಂದೊ ಸತ್ತರು. ನಾಗ ಪಂಚಮಿಯ ದಿನ ನಡು ಮಧ್ಯಾಹ್ನದಲ್ಲಿ ಸರ್ಪ ಕಚ್ಚಿ ಸತ್ತರು. ಜಾತಕದಲ್ಲಿತ್ತು, ಅವರ ತಪ್ಪೇನು? ಅವರ ಕುಟುಂಬವೆಲ್ಲ ಸಾಕ್ಷಿಯಿದೆ. ಕೈ ಹಿಡಿದ ಹೆಂಡತಿಯೆ ಹೇಳುತ್ತಾಳಲ್ಲ! ಮಕ್ಕಳಂತೂ ಗುರುತು ಹೇಳಿಲ್ಲ. ಪತ್ರಿಕೆಗಳಲ್ಲಿದೆ ನೋಡಿ. ನಾನು ಭೀಮಯ್ಯ ಅವರ ತಮ್ಮ. ವನವಾಸಕ್ಕೆ ಹೋಗಿ ತಪಸ್ಸು ಮಾಡಿ ಉದ್ಧಾರ ಹೊಂದುವ ಭೀಮಯ್ಯ. ನೀವಿಷ್ಟು ಜನ ಸೇರಿ ಈ ವಿಷಯ ರುಜುವಾಯಿತು.

**ಭಾವ**:—ಇನ್ನು ತಪಸ್ಸೇಕೆ ಭಾವಯ್ಯ?

**ರಾಮಯ್ಯ**:—ಇನ್ನು ಹೊರಟೆ. ರಾಮಯ್ಯನ ಸೊತ್ತೆಲ್ಲ ಇಲ್ಲಿ ಉಳಿಯಿತು. ಹೀಗಾದೀತೆಂದು ಅವರು ಮೊದಲೇ ತಿಳಿದಿದ್ದರೆ ಎಷ್ಟು ಜನರಿಗೆ ಅನ್ನ ಕೊಟ್ಟು ಅವರ ಸುಖದಲ್ಲಿ ತಾನು ಸುಖ ಅನುಭವಿಸುತ್ತಿದ್ದರು! ಎಷ್ಟು ಬಡ ಮಕ್ಕಳಿಗೆ ವಿದ್ಯೆ ಕೊಡಿಸಿ ತನ್ನ ಮಕ್ಕಳಿಗೂ ವಿದ್ಯೆ ಕೊಡಿಸುತ್ತಿದ್ದರು! ಎಷ್ಟು ಮಂದಿ ಅನಾಥ ವಿಧವೆಯರಿಗೆ ಒಂದು

ಸಮಾಜ ಮಂದಿರ ಕಲ್ಪಿಸಿಕೊಡುತಿದ್ದರು! ಥೂ! ರಾಮಯ್ಯನು ಲಕ್ಷಾಧಿಪತಿಯಾಗಿದ್ದು ಭಿಕ್ಷೆಯೆತ್ತುವುದಕ್ಕೂ ಅಯೋಗ್ಯನಾಗಿ ಬದುಕಿ ಸತ್ತನು. ಅವನನ್ನು ಕಂಡು ನಾನಾದರೂ ಪಾಠ ಕಲಿಯುತ್ತೇನೆ. ಅಂತಹ ಜನ್ಮವೇ ಇನ್ನು ಯಾರಿಗೂ ಬೇಡ. ನನಗಂತೂ ಬೇಡವೇ ಬೇಡ ವೆಂದು ಈಗ ತಪಸ್ಸು ಮಾಡಲು ಹೊರಟೆ.

**ಭಾವ:**—ಹಾಗೆ ಇನ್ನು ಬದುಕುವುದು ಕಷ್ಟವಾಗದೆ ಭಾವಾ?

**ರಾಮಯ್ಯ:**—ಇಷ್ಟು ದಿನ ಬದುಕಿದ್ದುದು ಸುಖವೆ ಮತ್ತೆ? ಕಾಸನ್ನು ಬಿಡದೆ ಬೇಡುವವರಿಗೂ ಕಡಿಮೆಯಾಗಿ ಬದುಕಿದೆ. ಇಷ್ಟೆಲ್ಲ ಹಣವಿದ್ದು ಅದನ್ನು ನೋಡುವ ಚಿಂತೆ ಬೇರೆ, ಉಪವಾಸ ಬೇರೆ, ಈಗ ಅದರ ಚಿಂತೆಯಿಲ್ಲದೆ 'ಸ್ವದೇಶೋ ಭುವನತ್ರಯಂ' ಎಂದು ದಿಗಂಬರ ನಾದರೆ ತೀರಿತು. ನೋಡಿ! ಲಕ್ಷಾಧಿಪತಿ ರಾಮಯ್ಯನ ಮುಖ ನೋಡುವ ಬದಲು ಬಾಗಿಲು ಮುಚ್ಚುತ್ತಿದ್ದರು. ಈ ಭಿಕ್ಷಾಧಿಪತಿಯು ಬಾಗಿಲಿಗೆ ಬಂದರೆ–'ರಾಮಯ್ಯನ ಹಾಗೆ ನಾವಲ್ಲ,' ಎಂದು ಅಕ್ಕೀ ಕಾಳಾದರೂ ಕೊಟ್ಟಾರು. ರಾಮಯ್ಯನ ಕರ್ಮ ನಿಮ್ಮ ತಲೆ ಮೇಲಿ ರಲಿ. ನಾನು ಹೊರಟೆ.

[**ಪತ್ನಿ ಬರುವಳು.**]

**ಪತ್ನಿ:**—ಎಲ್ಲಿಗೆ ಹೊರಟಿರಿ, ಪ್ರಾಣೇಶ್ವರಾ! ಕೈಹಿಡಿದು ನನ್ನನ್ನು ಇಲ್ಲಿಗೆ ತಂದು ಈಗ ಕೈಬಿಟ್ಟು ಹೋಗುವುದೇ.

**ರಾಮಯ್ಯ:**—ನಿನ್ನ ಕೈಹಿಡಿದವ ಹೋದನೆಂದು ನೀನೇ ಹೇಳಿದೆ. ರುಜುವಾಯಿತು. ಪುನರ್ವಿವಾಹಕ್ಕೂ ಸಿದ್ಧವಾಯಿತು. ಇನ್ನೇಕೆ ಪ್ರಾ–ಣೇ–ಶ್ವ–ರಾ!

**ಪತ್ನಿ:**—ಪುನರ್ವಿವಾಹವಾಗುವುದೂ ನಿಮ್ಮೊಡನೆಯೆ.

**ರಾಮಯ್ಯ:**—ಥೂ! ಜನ್ಮ ಜನ್ಮಕ್ಕೂ ನನಗೆ ವಿವಾಹಬೇಡ ವೆಂದೇ ನನ್ನ ಇಚ್ಛೆ ವನವಾಸಕ್ಕೆ ಹೊರಟೆ.

**ಪತ್ನಿ:—** ಸಹಧರ್ಮಿಣಿಯಾಗಿ ಹಿಂದುಳಿಯುವೆನೆ? ನಾನೂ ಹೊರಟೆ. ಪ್ರತಿಜನ್ಮವೂ ನೀವೇ ನನಗೆ ಪತಿಯಾಗಬೇಕೆಂದು ತಪಸ್ಸು ಮಾಡುವೆನು.

**ರಾಮಯ್ಯ:—** ಆಗ ತಾನೆ ನಾನು ಪರಪುರುಷನೆಂದು ಕೂಗಿದೆ.

**ಪತ್ನಿ:—** ಆಗ-ಹಾಗೆ; ಈಗ-ಹೀಗೆ.

**ರಾಮಯ್ಯ:—** ಅದೇಕೆ?

**ಪತ್ನಿ:—** ಹಾಗೆ ಇದ್ದ ನಿಮ್ಮನ್ನು ಬಿಟ್ಟು, ಹೀಗೆ ಇರುವ ನಿಮ್ಮನ್ನೇ ಹಿಡಿದೆ.

**ಭಾವ:—** ಇನ್ನೂ ತಮಾಷೆಯೆ ಭಾವಾ? ಸುಮ್ಮನೆ ಸಿಟ್ಟೇ? ಅಭಿಮಾನ ಬಿಡಿರಿ. ಬ್ರಹ್ಮನಿಗೆ ಸನ್ನಿವಾತ ಹಿಡಿದಂದು ಅವನು ಏನೂ ತಿಳಿಯದೆ ಭ್ರಮಿಸಿ 'ಲಕ್ಷಾಧೀಶನಾಗೆ'ಂದು ನಿಮ್ಮ ಹಣೆಯಲ್ಲಿ ಬರೆದ ಹಾಗಾಯ್ತು. ನಂತರ ಸ್ಮೃತಿ ತಿಳಿದಾಗ ತಿದ್ದಿಕೊಂಡು, 'ಲೋಭಿಯಾಗು' ಎಂದು ಬರೆದ. ನಿಮ್ಮ ತಪ್ಪೇನು. ಈಗ ವಿವೇಕ ತಿಳಿದು ಪ್ರತ್ಯಕ್ಷ ಪಾಠದಿಂದ ಕಲಿತು ನೀವು ಬೇರೆ ಮನಸ್ಸಿನವರಾದಿರಿ. ಅಷ್ಟ ಐಶ್ವರ್ಯಗಳಿದ್ದೂ ತ್ಯಾಗಿಗಳಾದಿರಿ. ಹಿಂದಿನ ಅಕೃತ್ಯಗಳ ಪಾಪವೇ ನಿಮ್ಮನ್ನು ಕಡಿದ ಸರ್ಪ. ಆ ಹಾಳು ಮನೋವೃತ್ತಿಯು ಹೆಣವಾಗಿ ಬಿದ್ದು ಸ್ಮಶಾನ ಪಾಲಾಯಿತು. ಇನ್ನು ನೀವು ದಿವ್ಯ ಧರ್ಮಾವತಾರರು. ಇನ್ನುಳಿದಷ್ಟು ದಿನ ಧರ್ಮಪ್ರಚಾರ ಮಾಡಿ ದಿವ್ಯ ಕೀರ್ತಿಗಳಿಸಿ ಹಿಂದಿನ ರಾಮಯ್ಯನ ಹೆಸರು ಪ್ರಾತಃಸ್ಮರಣೆಗೂ ಯೋಗ್ಯವಾಗುವಂತೆ ಮಾಡಿರಿ.

**ಪತ್ನಿ:—** ಒಳಗೆ ಬನ್ನೀ ಎಂದ್ರೆ.

**ರಾಮಯ್ಯ:—** ಕೈಮುಟ್ಟದಿರು. ಪತಿವ್ರತೆ ಪರಪುರುಷನ ಕೈಹಿಡಿಯುವಳೆ?

**ಪತ್ನಿ:—** ಇನ್ನೂ ಎಷ್ಟೆಲ್ಲಾ ದೂಷಣೆ. ಬನ್ನೀ ಎಂದ್ರೆ. ಬೆಳಗಿಷ್ಟು ನೀರ್ಕುಡಿದು ಹೋದವರು ಈಗಿಷ್ಟು ಬಾಯಿಗಿಟ್ಟುಕೊಳ್ಳಿ. ನೀವು ಉಣ್ಣದೆ ನನಗೂ ಹಸಿವೆಯಾಗಿದೆ.

**ಭಾವ**:— ಬನ್ನಿ ಭಾವಯ್ಯ. ನವಜೀವನಾರಂಭವಾಗಲಿ. ನಾನೂ ಇಲ್ಲೆ ಉಣ್ಣುವೆ.

**ರಾಮಯ್ಯ**:— ಬನ್ನಿ ಭಾವಯ್ಯ. ಹೊಸ ಜಾತಕ, ಹೊಸ ಸರ್ಟಿಫಿಕೇಟು, ಹೊಸ ಪೇಪರು, ಎಲ್ಲಾ ಹೊರಡಿಸಿ ಪುನಃ ರಿಕಾರ್ಡು ರುಜುವಾತು ಸೃಷ್ಟಿಮಾಡುವೆ! ಹುಟ್ಟಿದ್ದಕ್ಕೆ ಭೇಷ ವಕೀಲನಾದೆ.

**ಭಾವ**:— ಈಗ ನೀವೇನನ್ನುವಿರೊ ಅದೆ ರುಜುವಾತು. ದಾನ ಧರ್ಮಕ್ಕೆಲ್ಲ ಏನು ಮಾಡಬಹುದಿತ್ತೆಂದು ಹೇಳಿದಿರಲ್ಲ. ಅಷ್ಟೆ ಸಾಕು. ನಿಮ್ಮ ಹೆಸರನ್ನು ಇಡೀ ಲೋಕವೇ ಕೊಂಡಾಡುವಂತೆ ಮಾಡಿಕೊಂಡಿರಿ, ವಿದ್ಯಾ ಶಾಲೆಗಳಿಗೆ, ಅನಾಥ ಮಕ್ಕಳಿಗೆ, ಬಾಲವಿತಂತುಗಳಿಗೆ, ದೇಶೀ ಕೈಗಾರಿಕೆಗೆ, ಅಸ್ಪೃಶ್ಯತಾ ನಿವಾರಣೆಗೆ ಎಲ್ಲಾ ಒಂದೊಂದು ವಾಲು ಹಣ ಆಗ ಬಾಯಿಂದ ಹೇಳಿಬಿಟ್ಟಿರಲ್ಲ. ನಿಮ್ಮಷ್ಟು ಯೋಗ್ಯ ಶ್ರೀಮಂತರು ಇನ್ನಾರೂ ಇದ್ದಾರೆಯೆ.

**ಪತ್ನಿ**:— ಇತರರೆಲ್ಲ 'ಹುಟ್ಟಿದರು, ನತ್ತರು' ಎಂದರಾಯಿತು ಹುಟ್ಟಿ, ಜೀವಿಸಿ, ನತ್ತು ಪುನಃ ಹಿಂದಣ ಜೀವನವನ್ನು ತಿದ್ದಿ ಪುಣ್ಯ ಶ್ಲೋಕರಾಗಲು ಬದುಕಿಕೊಂಡವರು ನಿಮ್ಮಂತಹ ಎಷ್ಟು ಮಂದಿ ಊರಲ್ಲಿದ್ದಾರೆ? ಮದುವೆಯಾದರೆ ನಿಮ್ಮಂತವರೊಡನಾಗ ಬೇಕು.

**ರಾಮಯ್ಯ**:— ನೀನೇನೊ ಈ ಯುಗದ ಸಾವಿತ್ರಿಯಾದೆ.

**ಭಾವ**:— ತಂಗೀನ ನಿಮಗೊಪ್ಪಿಸಿ ಕೊಟ್ಟೆ.

**ರಾಮಯ್ಯ**:— ಏನೇ ಆಗಿರಲಿ. ಬುದ್ಧಿವಂತನಾದೆ. ಇನ್ನು ಉದ್ಧಾರವಾಯಿತು.

**ಪತ್ನಿ**:— ಆ ಜನ್ಮಕ್ಕೂ ನೀವೆ. ಈ ಜನ್ಮಕ್ಕೂ ನೀವೆ. ಜನ್ಮ ಜನ್ಮಕ್ಕೂ ನೀವೆ ಪತಿರಾಜರಾದಿರಿ.

**ರಾಮಯ್ಯ**:—ನೋಡಿದಿರಾ! ಜಾತಕದ ಫಲ ನಿಜವಾಯಿತು. ಈ ಸತ್ಯವನ್ನು ಸಾರುವ ಧರ್ಮಕಾರ್ಯಗಳು ಈಗಲೇ ಜರಗಲಿ. ಬಂಡಾರ ಬರಿದು ಮಾಡಿ, ಎಲ್ಲೆಲ್ಲಿಗೆ ಎಷ್ಟೆಷ್ಟು ಕೊಡುವಿರೋ ಅದ ನ್ನಲ್ಲ ನ್ಯಾಯ ಪ್ರಕಾರವಾಗಿ ಕಳುಹಿಸಿಕೊಡುವ ನಮ್ಮ ಭಾವ, ನಮ್ಮ ವಕೀಲರೂ ಜನ್ಮ ಜನ್ಮಕ್ಕೂ ದೊರೆಯಲಿ. ಲೋಭಿ ಸತ್ತು ತ್ಯಾಗಿ ಯಾಗಿ, ಪುನರ್ಜನ್ಮ ಹೊಂದಿದ ಉಲ್ಲಾಸವನ್ನು ಊರವರೆಲ್ಲ ನಾಟಕ ಕಥೆಯೆಂದು ತಿಳಿದರೂ ಚಿಂತೆಯಿಲ್ಲ. ಸರ್ವರೂ ನನ್ನಂತೆ ಸದಾ ಸುಖಿಗಳಾಗಿರಲಿ!

ಮಂಗಳ

# ಗುರುದಕ್ಷಿಣಾ

## ಒಂದನೆಯ ದೃಶ್ಯ.

(ದ್ರುಪದನ ಒಡ್ಡೋಲಗ. ಮಂತ್ರಿಗಳೂ ಗುರುಗಳೂ ಕೆಲವುಂದಿ ಅಧಿಕಾರಿಗಳೂ ಸುತ್ತಲೂ ಕುಳಿತಿದ್ದಾರೆ. ಕಂಚುಕಿಯೊಬ್ಬನು ಓಡಿಬರುತ್ತಾನೆ.)

**ಕಂಚುಕಿ**:—ಮಹಾಪ್ರಭು! ಸರ್ವನಾಶ!

**ದ್ರುಪದ**:—ಏನಿದು ಆವೇಶ?

**ಕಂಚುಕಿ**:—ದ್ವಾರದೇಶದಲ್ಲಿ ಕೋಲಾಹಲ ಬುದ್ಧೀ!

**ದ್ರುಪದ**:—ಕಾರಣವಿಲ್ಲದ ಕೋಲಾಹಲವೇ?

**ಕಂಚುಕಿ**:—ಯಾರೋ ಒಬ್ಬ ಅಪರಿಚಿತ ವ್ಯಕ್ತಿ ದ್ವಾರಪಾಲಕರನ್ನು ಸದೆಯುತ್ತಿದ್ದಾನೆ.

**ದ್ರುಪದ**:—ಒಬ್ಬ ವ್ಯಕ್ತಿ; ದ್ವಾರಪಾಲಕರು ಹಲವರು, ಹೀಗಿದ್ದರೂ ಕೋಲಾಹಲ; ಸರ್ವನಾಶ!! ಅಲ್ಲವೇ?

**ಕಂಚುಕಿ**:—ಅಸಂಭವವಾಗಿ ಕಾಣುವ ವಿಷಯವಿದು; ಆದರೂ ಸತ್ಯ, ಮಹಾಸ್ವಾಮಿ! ವಿವರಿಸಲು ಬಾಯಿಬರುವುದಿಲ್ಲ.

**ದ್ರುಪದ**:—ಮೊದಲು ಕೈ ಬರಲಿಲ್ಲ; ಈಗ ಬಾಯಿಬರುವುದಿಲ್ಲ.

**ಕಂಚುಕಿ**:—ಸನ್ನಿಧಾನದಲ್ಲಿ ಸೇವಕನ ಬಿನ್ನಹವಿಷ್ಟೆ—ರಾಜದ್ವಾರದಲ್ಲಿ ನಿಷ್ಕಾರಣವಾಗಿ ರಕ್ತಪಾತವಾಗುತ್ತದೆ; ಅದನ್ನು ತಡೆಯಲು ಸೇವಕರಿಂದ ಸಾಧ್ಯವಿಲ್ಲ.

**ದ್ರುಪದ**:—ಭದ್ರಾಂಗ! ಯಾರೇ ಆಗಲಿ, ಮೃತ್ಯುಕ್ರೀಡೆಯಾಡುವವರಿಗೆ ಶೂಲವೇ ಗತಿಯೆಂದು ತಿಳಿಸು!

**ಕಂಚುಕಿ**:—ಮಾತಿನ ಬಿರುಗಾಳಿಯಿಂದ ಚೆದರುವ ಮೋಡವಲ್ಲ ಇದು!

**ದ್ರುಪದ**:—ಮೂರ್ಖ! ಇಗೋ! ನನ್ನ ಕೈಯಲ್ಲಿರುವ ರಾಜ ದಂಡದ ಪ್ರತಿನಿಧಿಯಾಗಿ ಸೇವಕರಿಗೆ ಅಧಿಕಾರ ದಂಡವಿದೆ. ಮೊದಲು ಅದನ್ನು ತೋರಿಸಿ, ಮತ್ತೆ ಅದರಿಂದ ಹೊಡೆದಾದರೂ ಶಾಂತಿಸ್ಥಾಪನೆ ಮಾಡಲಿ!

**ಕಂಚುಕಿ**:—ಒಮ್ಮೆ ಅಲ್ಲಿಗೆ ಚಿತ್ತೈಸಬೇಕು.

**ದ್ರುಪದ**:—(ಕ್ರೋಧದಿಂದ) ನಡೆ . . . . ಈ ದಂಡಶಕ್ತಿಗೆ ಇದಿರಾಗುವ ಶಕ್ತಿಯಾವುದೋ ನೋಡುತ್ತೇನೆ.

(ಅಷ್ಟರಲ್ಲಿ ಕೋಪಭೀಕರನಾದ ದ್ರೋಣಾಚಾರ್ಯನ ಪ್ರವೇಶ.)

**ಕಂಚುಕಿ**:—ದೇವ! ಪರ್ವತಶಿಖರದಿಂದ ಉರುಳುವ ಗಂಡಶೈಲದಂತೆ ಬಿದ್ದು—ರಾಜಸೇವಕರನ್ನು ಸದೆಬಡದ ದ್ರೋಹಿ ಈತನೇ!

**ದ್ರುಪದ**:—(ಬರುವವನನ್ನು ದೃಷ್ಟಿಸಿ) ಈತನು ಉನ್ಮತ್ತನಂತಿದ್ದಾನ. ಕಣ್ಣು ಕೆರಳಿದೆ, ತುಟಿ ನಡುಗುತ್ತಿದೆ, ಬೆವರು ಕಾಲಿಂದೀ ಪ್ರವಾಹವಾಗಿದೆ.

**ದ್ರೋಣ**:—(ರಾಜನಿದಿರಿಗೆ ಬಂದು) ದ್ರುಪದ ಮಹಾಪ್ರಭು! ನಿನಗೆ ಸಾಷ್ಟಾಂಗ ಪ್ರಣಾಮಗಳು.

**ದ್ರುಪದ**:—(ಆತ್ಮಗತ) ಸೇವಕರನ್ನು ಕೊಂದು ರಾಜನಿಗೆ ಪ್ರಣಾಮ! ಹುಂ; ಇರಲಿ! (ಪ್ರಕಾಶ) ಆಗಂತುಕನೇ ಕುಳಿತುಕೊ!

**ದ್ರೋಣ**:—ಇಲ್ಲ ಪ್ರಭು!

**ದ್ರುಪದ**:—(ಆತ್ಮಗತ) ಈತನು ದ್ವಿಜನೆಂದು ತೋರುವುದು. ಬ್ರಾಹ್ಮಣ್ಯದ ಪಾಶವು, ಯಜ್ಞೋಪವೀತವು-ನೇತಾಡುತ್ತಿದೆ! (ಪ್ರಕಾಶ) ಮಹಾ ವಿಪ್ರ! ಆಸನಗ್ರಹಣ ಮಾಡು, ಅನುಗ್ರಹ ಮಾಡು!

**ದ್ರೋಣ**:—ಬಡ ಬ್ರಾಹ್ಮಣ ನಾನು; ಚಕ್ರಾಧೀಶನ ಮುಂದೆ ನಿಂತಿರಬೇಕು.

**ದ್ರುಪದ**:—(ಆತ್ಮಗತ) ಶಬ್ದಕ್ಕೆ ದಾರಿದ್ರ್ಯವೇನು? ಹೀಗೂ ಹೇಳಿ ಬಿಡುತ್ತೇನೆ. (ಪ್ರಕಾಶ) ಅಗ್ರಜನ್ಮ! ಲೋಕಕ್ಕೆಲ್ಲ ಹಿರಿದಾದ ಜಾತಿ ಯವ ನೀನು. ಹೀಗೆ ನಿಂತಿರಬಾರದು.

**ದ್ರೋಣ**:—ಕ್ಷಮಿಸಬೇಕು ಮಹಾರಾಜ! ಅರಮನೆಗೆ ಪ್ರವೇಶ ದೊರೆಯಲು ಪ್ರಾಣಸಂಕಟವಾಯಿತು.

**ದ್ರುಪದ**:—(ಆತ್ಮಗತ) ಪ್ರಾಣಸಂಕಟ ಇತರರಿಗೆ! (ಪ್ರಕಾಶ) ಪ್ರವೇಶದ ಮಾತೆ? ಅದರ ಸಮಾಚಾರವೆ ಬೇರೆ, ಬ್ರಾಹ್ಮಣ. ನಮ್ಮ ರಾಜಗೃಹಕ್ಕೆ ಯಾರೂ ಬರಬಹುದು. ಅದರ ಬಾಗಿಲುಗಳು ಯಾವ ಸಮಯದಲ್ಲಿಯೂ ವಿವೃತವಾಗಿರುತ್ತವೆ. ಬರುವವರು ಮಾತ್ರ ಸಂದರ್ಭವನ್ನು ನೋಡಬೇಕು. ಶಿಷ್ಟಾಚಾರವೆಂಬ ಕೆಲವು ಕಟ್ಟು ಗಳಿವೆ. ಅವುಗಳನ್ನು ಮನ್ನಿಸಬೇಕು.

**ದ್ರೋಣ**:—ಶಿಷ್ಟಾಚಾರವು ನಮಗೆಲ್ಲಿ ತಿಳಿದಿದೆ? ಪ್ರಭು! ಒಳ ಬಿಡಿರೆಂದು ನಾನು ದೈನ್ಯದಿಂದ ಬೇಡಿದಾಗ ಒಲ್ಲೆವೆಂದರು . . . .

**ದ್ರುಪದ**:—ಹೌದು: ಅದೆ ನಮ್ಮ ಕಟ್ಟಪ್ಪಣೆ. ಬರುವವರ ತಾರತಮ್ಯ ನೋಡಿ ಅವರ ಸ್ವಾಗತ ಸಮಾರಂಭವು ಜರಗಬೇಡವೆ? ಅದಕ್ಕಾಗಿ ಆಗಂತುಕರು ತಮ್ಮ ಕುಲಶೀಲಗಳನ್ನು ಮೊದಲು ಅಧಿಕಾರಿ ಗಳಿಗೆ ತಿಳಿಸಬೇಕು.

**ದ್ರೋಣ**:—ರಾಜಸಭ್ಯತೆಯನ್ನು ತಿಳಿದವನಲ್ಲ ನಾನು. ನಾನು ತಿಳಿದಿರುವ ಪದ್ಧತಿ ನನ್ನಂತಹ ಬಡವರಲ್ಲಿ ಹುಟ್ಟಿದುದು! ಬಡವರಲ್ಲಿ ಬೆಳೆದುದು!

**ದ್ರುಪದ**:—ಅದು ಯಾರ ತಪ್ಪು? . . . . ಇರಲಿ; ಅದಕ್ಕೆ ಆಸನಗ್ರಹಣ ಮಾಡದಿರುವುದರಿಂದ ಪ್ರಾಯಶ್ಚಿತ್ತವಾಗುವುದೆ?

**ದ್ರೋಣ**:—ನಿಂತಿರುವುದು ಪ್ರಾಯಶ್ಚಿತ್ತವೇನೂ ಅಲ್ಲ. ರಾಜ ದರ್ಶನ ಮಾಡಿ ಗೊತ್ತಿಲ್ಲ; ಅವರೊಡನೆ ಆಡಿ ಗೊತ್ತಿಲ್ಲ; ಮಾತಾಡಿ

ಗೊತ್ತಿಲ್ಲ. ಶಿಷ್ಟಾಚಾರದ ಗಂಭೀರ ಸೂತ್ರಗಳಲ್ಲಿ ಕಟ್ಟಿ ಸ್ಥಾಪಿಸಿದ ಈ ಸಿಂಹಾಸನದ ಮುಂದೆ—ನಾನು ಒರಟನಂತೆ ಕುಳಿತರೆ, ಕುಳಿತು ಕೊಳ್ಳುವ ಪದ್ಧತಿಯಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ—ಸಭ್ಯಾಚಾರದ ದಿವ್ಯ ಪ್ರತಿಮೆಯಂತಿರುವ ತಮಗೆ ಅವಮಾನವಾಗದೆ?—ಈ ಆಲೋಚನೆಯಲ್ಲಿ ಹೆದರಿ ನಡುಗುತ್ತೇನೆ.

**ದ್ರುಪದ:**—(ಆತ್ಮಗತ) ನಂಜಿನ ಮಾತು! (ಪ್ರಕಾಶ) ಕುಳಿತುಕೊ; ಬೇಕಾದಂತೆ ಕುಳಿತುಕೊ

**ದ್ರೋಣ:**—ಬದುಕಿದೆ! (ಆಸನವನ್ನೇರುವನು.)

**ದ್ರುಪದ:**—ಇತ್ತ ಸವಾರಿಯೇಕೆ ಚಿತ್ತೈಸಿತು?

**ದ್ರೋಣ:**—ಇದುವರೆಗೆ ದೊರೆಯದ ರಾಜದರ್ಶನವನ್ನು ಮಾಡುವುದಕ್ಕೆ.

**ದ್ರುಪದ:**—ನೀನು ಇದುವರೆಗೆ ನೃಪಾಸ್ಥಾನಗಳನ್ನು ನೋಡಿದವನಲ್ಲವೆಂದು ವರ್ತನದಿಂದಲೇ ತಿಳಿಯಿತು. ದರ್ಶನದೊಂದಿಗೆ ಬೇರೇನಾದರೂ ಕಾರ್ಯವಿರಬಹುದೇ?

**ದ್ರೋಣ:**—ಹೌದು.

**ದ್ರುಪದ:**—ನಮ್ಮ ಆಸ್ಥಾನಕ್ಕೆ ಎಷ್ಟೋ ಮಂದಿ ಬರುತ್ತಾರೆ.

**ದ್ರೋಣ:**—ಬರಲೇಬೇಕು; ನೀನು ರಾಜನಲ್ಲವೆ?

**ದ್ರುಪದ:**—ಅವರ ಪೂರ್ವಾಪರಗಳನ್ನು ಅವರೆ ತಿಳಿಸುತ್ತಾರೆ.

**ದ್ರೋಣ:**—ರಾಜನಿಗೆ ಅವರ ಪರಿಚಯವಿಲ್ಲದಿದ್ದರೆ—

**ದ್ರುಪದ:**—ಹಾಗೆಯೆ ಸರಿ: ನಿನ್ನ ಸಮಾಚಾರಗಳನ್ನು ತಿಳಿಯುವ ಕುತೂಹಲವಿದೆ.

**ದ್ರೋಣ:**—ಶಿಷ್ಟಾಚಾರಕ್ಕೆ-ಅದರಲ್ಲಿಯೂ ರಾಜಸಭೆಯ ಸಭ್ಯತೆಗೂ-ನನಗೂ ಯಾವ ಸಂಬಂಧವೂ ಇಲ್ಲ. ಸನ್ನಿಧಿಯಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಸಿಟ್ಟುಗೊಳ್ಳಬಾರದು.

**ದ್ರುಪದ**:— ಕೋಪವಿಲ್ಲ—ವಿಪ್ರ! ಇದುವರೆಗೆ ಇಲ್ಲದುದು ಇನ್ನೇಕೆ ಬರುವುದು?

**ದ್ರೋಣ**:— ಪ್ರಭು! ಮುಕುಟಧಾರಿಯಾದರೂ, ಸಿಂಹಾಸನ ವನ್ನೇರುವ ಮೊದಲೇ ಸಾಮಾನ್ಯರಂತಿರುವನಲ್ಲವೆ?

**ದ್ರುಪದ**:— ಮೊದಲೆಂದೇನು? ಮತ್ತೂ ಹಾಗೆಯೆ.

**ದ್ರೋಣ**:— ಮತ್ತಿನ ವಿಚಾರ ನನಗರಿಯದು. ಮೊದಲಿನ ಸ್ಥಿತಿ, ನಾನು ಹೇಳಿದಂತೆ— ಎಂದರೆ ರಾಜಪಟ್ಟವು ದೊರಕುವ ಮೊದಲು ಬಡ ಜನರ, ಗೆಳೆಯರ ಸುಖದುಃಖಗಳು ಅವನಿಗೆ ತಿಳಿದಿರುವುವು. ಉಪಕಾರಕ್ಕೆ ಪ್ರತ್ಯುಪಕಾರವು ಅವನಿಂದ ಸಲುವುದು. ಬಡವರ ಗೆಳೆತನ ಅವನಿಗೆ ಬೇಕಾಗುವುದು.

**ದ್ರುಪದ**·—(ಆತ್ಮಗತ) ಓಹೋ! ಇವನೇನೋ ಗೊಡ್ಡು ಬ್ರಾಹ್ಮಣನಲ್ಲ. ತರ್ಕಪಂಡಿತ! (ಪ್ರಕಾಶ) ಹಾಗೆಯೆ ಭಾವಿಸಿಕೊ.

**ದ್ರೋಣ**:— ಮತ್ತೆ— ಎಂದರೆ ಸಿಂಹಾಸನವನ್ನೇರಿದ ಮೇಲೆ, ಅವನ ಪೂರ್ವ ಸ್ಮರಣೆಯೆಲ್ಲಾ ಅಡವಿಯಲ್ಲಿ ಬಿದ್ದು ಕೊಳೆತುಹೋಗುವ ಮರದ ಕೊರಡುಗಳಂತೆ— ಕೊಳೆತು ಹೋಗುವುದಲ್ಲವೆ? ನೆನಪಿದ್ದರೂ ಅದು ನಾರುವುದಲ್ಲವೆ?

**ದ್ರುಪದ**:—(ಆತ್ಮಗತ) ಇವನಿಗೆ ಕೊಟ್ಟ ಪುರಸ್ಕಾರ ಸಾಲಲಿಲ್ಲ. ಪರಿಚಯವಿಲ್ಲದಿದ್ದರೂ ಉಂಟೆಂದು ತೋರಿಸಬೇಕಿತ್ತು! ಹೇಗೆಂದರೂ "ಭೂದೇವತೆ"ಯಲ್ಲವೆ? (ಪ್ರಕಾಶ) ನೀನು ಹೇಳುವುದೇನೋ ತಿಳಿಯು ವುದಿಲ್ಲ.

**ದ್ರೋಣ**:— ಹೇಗೆ ತಿಳಿಯಬೇಕು ಯಜ್ಞಸೇನ? ಹಿಂದಿನ ನೆನಪುಗಳೆಲ್ಲ ಆಕಾಶಕ್ಕೆ ಬಿಟ್ಟ ಬಿರುಸು ಬಾಣಗಳಂತೆ ಎಲ್ಲೆಲ್ಲಿಯೂ ಅಡಗಿ ಹೋಗುವುವು ರಾಜರಾಜೇಶ್ವರರಿಗೆ! ನೆಲದಿಂದ ಎಷ್ಟೋ ಎತ್ತರವಾಗಿ ಸಿಂಹಾಸನವಿದೆ. ಅಲ್ಲಿ ಕುಳಿತುಕೊಂಡು ಪ್ರಪಂಚವನ್ನು ನೋಡು

ವವರು ಚಕ್ರಾಧೀಶ್ವರರು! ಲೋಕದಲ್ಲಿ ಹುಟ್ಟಿ ಸಾಯುವ ಅಸಂಖ್ಯಾತ ಜನರು ನಡೆಯುವುದು ನೀಚ ಭೂಮಿಯಲ್ಲಿ! ಅಲ್ಲದೆ, ಶ್ವೇತಛತ್ರ ವುಂಟು ನಿನ್ನ ತಲೆಯ ಮೇಲೆ! ಅದರ ನೆರಳು ಬೀಳುವಾಗ ಮನಸ್ಸನ್ನು ಕತ್ತಲೆ ಕವಿಯುತ್ತದೆ. ಸಾಲದುದಕ್ಕೆ ದಿನಂಪ್ರತಿ ಸಂಗೀತವುಂಟು; ಸರಸವುಂಟು. ಅವು ಆರ್ತನಾದವನ್ನು ಕೇಳಬಿಡುವುದಿಲ್ಲ. ರಾಜತ್ವ ವೆಂದರೆ ಮುಳ್ಳುಬೇಲಿಯೊಳಗೆ ಹುಲುಸಾಗಿ ಬೆಳೆದ ಹೂಗಿಡ.

**ದ್ರುಪದ**:—ತಾತ್ವಿಕ ವಿಷಯಗಳನ್ನು ನನಗೆ ಬೋಧಿಸಲು ಇಲ್ಲಿ ರಾಜಗುರುಗಳಿದ್ದಾರೆ.

**ದ್ರೋಣ**:—ನಾನು ಬೋಧಿಸ ಬಂದವನಲ್ಲ. ರಾಜ್ಯ ವ್ಯವ ಹಾರಗಳ ವಿಷಯದಲ್ಲಿ ಬೋಧನೆಕೊಳ್ಳಲು ಬಂದಿದ್ದೇನೆ.

**ದ್ರುಪದ**:—ಸರ್ವಥಾ ಅಲ್ಲ. ಬ್ರಾಹ್ಮಣನಾಗಿ ಹುಟ್ಟಿದರೆ ಸಾಕು; ಅವನಿಗೆ ಕಲಿಯುವ ವಿಷಯಗಳಿರುವುದಿಲ್ಲ!

**ದ್ರೋಣ**:—ಪದೇ ಪದೇ ಬ್ರಾಹ್ಮಣ ಬ್ರಾಹ್ಮಣ ಎಂದು ಹಂಗಿಸು ವುದೇಕೆ ದ್ರುಪದ? ಈ ಜನ್ಮವನ್ನು ನಾನೇನೂ ಕಿತ್ತುಕೊಳ್ಳಲಿಲ್ಲ . . . . ಇರಲಿ. ನಿನಗೆ ಹಿಂದಿನ ನೆನಪುಗಳಿಲ್ಲ ಇವೆಯೋ?

**ದ್ರುಪದ**:—(ಆತ್ಮಗತ) ನನ್ನ ಊಹೆ ಸರಿ. ಇವನು ಎಂದೋ "ಭಿಕ್ಷಾಂ ದೇಹಿ" ಎಂದುಕೊಂಡು ಆಸ್ಥಾನಕ್ಕೆ ಬಂದುದಿರಬಹುದು. ನಾನೇನೋ ಒಂದೆರಡು ಕಾಸುಗಳನ್ನು ಬಿಸಾಡಿದುದಿರಬಹುದು. ಅದರ ಸ್ಮರಣೆ ಈಗ ಇಲ್ಲದಿರುವುದೆ ಇವನಿಗಾದ ಅಪಮಾನ! (ಪ್ರಕಾಶ) ಹೇಗೆ ಬೇಕಾದರೂ ಭಾವಿಸಿಕೊ! ಸಂಭಾವನೆಯನ್ನು ಕೇಳಿ ತೆಗೆದು ಕೊಳ್ಳುವವರಿಗೆ ಕೊಡುವ ಅಧಿಕಾರಿಗಳನ್ನು ನೇಮಿಸಿದ್ದೇನೆ.

**ದ್ರೋಣ**:—ಪ್ರತಿಗ್ರಹ ಮಾಡುವುದು ನಮ್ಮ ಅಧಿಕಾರ. ಇದು ಶಾಸ್ತ್ರಗಳ ದೋಷವೋ, ಪದ್ಧತಿಯ ದೋಷವೋ, ವ್ಯಕ್ತಿ ದೋಷವೊ ತಿಳಿಯದು. "ದೇಹಿ" ಎಂಬ ವಚನಕ್ಕೆ ನಾವೇ ಅಧಿಕಾರಿಗಳು

ಮಹಾರಾಜ . . . . ಆ ಮಾತು ಹಾಗಿರಲಿ. ನನ್ನ ಪರಿಚಯ ಇರ ಬಹುದೆ ನಿನಗೆ?

**ದ್ರುಪದ:**—ಇರಬಾರದೆಂದು ಯಾರು ಹೇಳುತ್ತಾರೆ?

**ದ್ರೋಣ:**—ವಕ್ರೋಕ್ತಿಯು ಬೇಡ ಯಜ್ಞಸೇನ! ನೀನು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾಗ-ಇದೇ ಮುಖಭಾವದ ಬ್ರಾಹ್ಮಣ ವಟುವೊಬ್ಬನು ನಿನ್ನ ಬಳಿಯಲ್ಲಿ-ನಿನ್ನ ನೆಳಲಂತೆ ಒಡನಾಡುತ್ತಿದ್ದುದರ ನೆನಪಿದೆಯೊ ನಿನಗೆ?

**ದ್ರುಪದ:**—(ಆತ್ಮಗತ) ಓಹೋ ನನ್ನ ಸಹಪಾಠಿ! ಅಲ್ಪ ಸ್ವಭಾವದ ಬ್ರಾಹ್ಮಣರಿಂದ ಶಿಕ್ಷಣ ಹೊಂದುವುದರಿಂದ ಆಗುವ ಪರಿಣಾಮ ಇಂತಹದು! (ಪ್ರಕಾಶ) ವಿದ್ಯಾಭ್ಯಾಸವನ್ನು ಬಿಟ್ಟು ಬಹು ವರ್ಷವಾಯಿತು. ಕಲಿತ ವಿದ್ಯೆ ಮುಕ್ಕಾಲು ಪಾಲು ಮರೆತಿದೆ ಈ ವಯಸ್ಸಿನಲ್ಲಿ . . . .

**ದ್ರೋಣ:**—ಹಾಗೆಯೆ ಹೇಳು. ಅದೆ ರಾಜತೆಗೆ ಭೂಷಣ ಬಾಲ್ಯದಲ್ಲಿ ಆಚಾರ್ಯರು ಕಲಿಸಿಕೊಟ್ಟ ವಿದ್ಯೆ ಮರೆತು ಹೋಗದಿದ್ದರೆ, ಇಂತಹ ದರ್ಪ ಬರುವುದು ಹೇಗೆ? ಚಿತ್ರಕಾರನು ತಾನು ಪ್ರಾರಂಭಿಸುವ ಚಿತ್ರವನ್ನು ಪೂರ್ಣಮಾಡಲು ಎಷ್ಟು ಹಗಲು, ಎಷ್ಟು ರಾತ್ರಿಗಳನ್ನು ಕಳೆಯುವುದಿಲ್ಲ? ಆ ಕಷ್ಟದಿಂದ ಎಷ್ಟು ವೇಳೆ ಕಣ್ಣೀರು ಸುರಿಸುವುದಿಲ್ಲ? ಆದರೇನು? ಆ ಚಿತ್ರಕ್ಕೆ—ತನ್ನ ಭಾವ ರಚನೆಯನ್ನು ಮಾಡಿದವರಾರೆಂದು ಗೊತ್ತಿದೆಯೆ? ಜೀವಕಳೆಯನ್ನು ಹೊಂದಿದ ಚಿತ್ರವು ತನ್ನ ಮೂಲವನ್ನೆ ಮರೆಯುವುದಿಲ್ಲವೆ? ಮತ್ತೆ—ಕುಂಚದ ಬಣ್ಣದ ಪಾಡೇನು?

**ದ್ರುಪದ:**—(ಆತ್ಮಗತ) ಎಂತಹ ಉದ್ಧತ! ಇವನು ದೊಡ್ಡ ಚಿತ್ರಕಾರ! ನಾನು ಬರಿ ಚಿತ್ರ. ಅದು ಇದು ಎಂಬ ನಪುಂಸಕ ವಾಚಕಕ್ಕೆ ಪಾತ್ರನಾದವ! ಇದೀಗ ಜಾತಿ ಸ್ವಭಾವ! (ಪ್ರಕಾಶ) ಚಿತ್ರರಚನೆಯಲ್ಲಿ ನೈಪುಣ್ಯವಿಲ್ಲ ನನಗೆ!

**ದ್ರೋಣ:**—ಇದು ರಾಜ್ಯವಾಳಲು ಬೇಕಾದ ವಿದ್ಯೆಯಲ್ಲ. ಪ್ರಜೆಗಳ ನೆತ್ತಿಯನ್ನು ತುಳಿದು ದಬ್ಬಾಳಿಕೆ ಮಾಡಲು ಉಪಯೋಗಕ್ಕೆ ಬರುವ ವಿದ್ಯೆಯಲ್ಲ. ಇದು ಗೊತ್ತಿದೆ. ಆದರೂ ಕೇಳುತ್ತೇನೆ—ನೀನು ಎಳೆಯನಾಗಿದ್ದಾಗ ನಿನ್ನ ಮುಗ್ಧ ನಿರ್ಮಲ ಹೃದಯದಲ್ಲಿ ತನ್ನ ಆತ್ಮದ ಅಚ್ಚನ್ನೊತ್ತಿದ ಗುರುವೊಬ್ಬನಿದ್ದಾನೆಂದು ಬಲ್ಲೆಯೋ?

**ದ್ರುಪದ:**—ಪೂಜ್ಯ ಭರದ್ವಾಜ ಮಹರ್ಷಿಗಳೆ ನನ್ನ ಗುರುಗಳು!

**ದ್ರೋಣ**·—ಅವರನ್ನೆ ನಿನ್ನ ಸ್ಮರಣೆಗೆ ತಂದುದು. ಅವರ ಬಳಿಯಲ್ಲಿ, ನಿನ್ನ ವಕ್ಕದಲ್ಲಿ, ಅವರ ಪುತ್ರನಾಗಿ, ನಿನ್ನ ಸಹೋದರನಾಗಿದ್ದ ಯಾವನಾದರೊಬ್ಬನು ನಿನ್ನ ಸ್ಮೃತಿಯಲ್ಲಿರುವನೊ?

**ದ್ರುಪದ** —ನಮ್ಮ ಗುರುಗಳಲ್ಲಿಗೆ ನಾನಾ ದೇಶದಿಂದ ಛಾತ್ರರು ಬರುತ್ತಿದ್ದರು.

**ದ್ರೋಣ.**—ಮತ್ತೂ ಅದೇ ಮಾತು. ಆಗ ದ್ರೋಣನೆಂಬ ವಟು ನಿನ್ನ ಎರಡನೆಯ ಜೀವದಂತೆ ನಿನ್ನೊಡನೆಯೆ ಅಲೆದಾಡುತ್ತಿದ್ದುದು ಗೊತ್ತಿದೆಯೆ?

**ದ್ರುಪದ:**—(ಆತ್ಮಗತ) ಯಾರು? ದ್ರೋಣ! ಅಂದಿನ ವಿನೀತನೆಲ್ಲಿ? ಇಂದಿನ ಉದ್ಧತನೆಲ್ಲಿ? ಜನ್ಮ ಮಾತ್ರದಿಂದ ಉತ್ಕೃಷ್ಟರೆನ್ನುವವರ ಹಣೆ ಬರಹವಿದು. (ಪ್ರಕಾಶ) 'ದ್ರೋಣ' ಪದದ ಅರ್ಥವನ್ನು ಕಲಿಸಿದ್ದಾರೆ ಗುರುಗಳು.

**ದ್ರೋಣ:**—ಈಗಲೂ ಗೊತ್ತಿದೆಯೊ?

**ದ್ರುಪದ:**—ಇಲ್ಲದಿದ್ದರೆ ನೀನು ಹೇಳಿಕೊಡುವೆಯಲ್ಲವೆ?

**ದ್ರೋಣ:**—ಅಂದು–ನಿನ್ನ ಜತೆಯಲ್ಲಿ–ಚೈತ್ರದ ಬಳಿಯ ವೈಶಾಖದಂತೆ ಒಡನಾಡಿದ್ದ ಆ ದ್ರೋಣನೇ ನಾನು.

**ದ್ರುಪದ:**—ಹಾಗಾದರೆ ಸಹಾಧ್ಯಾಯಿಯೆಂಬುದನ್ನು ಒಪ್ಪಬೇಕಾಯಿತು.

**ದ್ರೋಣ:**—ನೀನು ಎಷ್ಟೋ ವೇಳೆ ಲಕ್ಷ್ಯಭೇದವನ್ನು ಕಲಿವ ಅವಸರದಲ್ಲಿ ಎಡವಿ ತಡವಿ ಬೀಳುತ್ತಿದ್ದೆ. ಬಿರುಗಾಳಿಯ ಹೊಡೆತ ದಿಂದ ಎಲ್ಲೆಲ್ಲಿಯೂ ಎಸೆಯಲ್ಪಡುವ ಕಸಕಡ್ಡಿಗಳಂತೆ ನಿನ್ನ ಬಾಣ ಗಳು ಗುರಿತಪ್ಪಿ ಎಲ್ಲೆಲ್ಲಿಯೊ ಹೋಗುತ್ತಿದ್ದುವು. ಆಗ ನನ್ನ ವಿದ್ಯಾ ಭ್ಯಾಸವನ್ನು ಮರೆತು—ನಿನ್ನ ಆತ್ಮವು ಕಳೆಗೂಡಿದರೆ ಕೃತಾರ್ಥನಾದೇ ನೆಂದು ಬಗೆದು, ಈಗ ವಿಚಾರಿಸುವಾಗ ಅದು ಹುಚ್ಚು ಭಾವನೆಯೆಂದು ತಿಳಿಯುತ್ತದೆ—ನಿನ್ನ ಗುರಿ ನೇರಾಗುವಂತೆ ತಿದ್ದಿಲ್ಲವೆ ನಾನು?

**ದ್ರುಪದ:**—ಅದಕ್ಕೆ ಕೃತಜ್ಞತೆಗಳು ಸಲಲಿಲ್ಲ. ಈಗ ಸಲುತ್ತವೆ!

**ದ್ರೋಣ:**—ಹಾ! ದ್ರುಪದ! ನಿನ್ನ ರಾಜವೇಷವು ಎಲ್ಲವನ್ನೂ ಮರೆಯಿಸಿತೆ? ಅಂದು—ಮಲ್ಲಯುದ್ಧವನ್ನು ಕಲಿವ ಅವಸರದಲ್ಲಿ—ನೀನು ಹಸಿಮಣ್ಣಿನ ಬೊಂಬೆಯಂತೆ—ಒಂದೇಟಿನಿಂದ ನೆಲ ಹಿಡಿಯು ತ್ತಿದ್ದೆ. ಶೈಶವದಲ್ಲಿ ಅನುಭವಿಸಿದ್ದ ಲಾಲನ ಪಾಲನಗಳನ್ನು ಸ್ಮರಿಸಿ, ವಿದ್ಯಾಭ್ಯಾಸದ ಕಾಯಕ್ಲೇಶಗಳನ್ನು ಅವುಗಳೊಡನೆ ಹೋಲಿಸಿ, ಕಣ್ಣೀರು ಸುರಿಸುತ್ತಿದ್ದೆ. ಆಗ ನಿನ್ನ ಪ್ರತಿಮಲ್ಲನಾಗಿ ನಾನೆ ನಿಂತು ರಾಜ ಪುತ್ರನ ಅಭಿಮಾನವನ್ನು ಉಳಿಸುವ ಉದ್ದೇಶದಿಂದ, ಸ್ವಶಕ್ತಿಯನ್ನು ಉಪಯೋಗಿಸದೆ, ನಿನ್ನ ಆಘಾತಗಳನ್ನು ಸಹಿಸಿ, ನಿನ್ನಿಂದ ಪರಾಜಿತ ನಾದವನಂತೆ ನಟಿಸಿ—ಪುರುಷಕಾರದಲ್ಲಿ ನಿನಗೆ ವಿಶ್ವಾಸ ಹುಟ್ಟುವಂತೆ ಮಾಡಿ—ನಿನ್ನನ್ನೊಬ್ಬ ಮನುಷ್ಯನೆಂದು ಹೇಳಿಸಿದವನಾರು ದ್ರುಪದ?

**ದ್ರುಪದ:**—ನನ್ನ ರಾಜದಂಡವು ನಿನ್ನಿಂದ ದೊರೆತುದೆ?

**ದ್ರೋಣ:**—ನಿನಗಾಗಿ ಕಣ್ಣೀರು ಸುರಿಸುತ್ತೇನೆ ದ್ರುಪದ! ನಿನ್ನ ದ್ವಾರಪಾಲಕರ ಪೆಟ್ಟನ್ನು ಸಹಿಸಿದುದರಿಂದ ಈ ದೇಹಕ್ಕೆ ನೋವಾಗಿರ ಲಿಲ್ಲ. ಆದರೆ—ಈ ಸ್ನೇಹನಿರಾಕರಣವು ಮನಸ್ಸನ್ನು ಹೊಡೆದು ಪುಡಿ ಮಾಡುವುದು.

**ದ್ರುಪದ:**—ಚಿಕಿತ್ಸೆ ಮಾಡಿಸೋಣ!

**ದ್ರೋಣ**:—ರಾಜದ್ವಾರದಲ್ಲಿ ಹಣದಾಸೆಗೆ ನಿಂತಿದ್ದ ಆ ಗೃಧ್ರಗಳನ್ನು ನೂಕಿಕೊಂಡಾದರೂ ನಿನ್ನಲ್ಲಿಗೆ ಬಂದೆ. ಯಾಕೆಂದು ಕೇಳುವೆಯಾ? ಎಳನೀರ ಹೊರ ತೊಗಲು ಗಟ್ಟಿಯಾದರೂ, ಅದನ್ನು ಕಡಿಯುವ ಪರಿಶ್ರಮವನ್ನು ವಹಿಸಿದರೆ ಒಳಗೆ ಅಮೃತಮಧುರ ರಸವು ದೊರೆಯುವುದು; ಅದರಂತೆ ನಿಷ್ಠುರ ಹೃದಯರಾದ ಈ ಅಧಿಕಾರಿಗಳ—ದಾಸರ ನಡುವೆ ವಿರಾಜಿಸುವ ನಿನ್ನಲ್ಲಿ ಒಂದು ವಿಶಾಲ ಹೃದಯ, ಒಂದು ಸ್ನಿಗ್ಧಭಾವ, ಒಂದು ಪ್ರೀತಿಯ ಮಾತು ಇರಬಹುದೆಂದು ಭಾವಿಸಿದೆ.

**ದ್ರುಪದ**:—ದ್ರೋಣ! ನಿನಗೆ ತಿಳಿವಿದೆಯೆ? ನಾವು ರಾಜರು—ನಾವು ಗಮನಿಸಬೇಕಾದ ಕಾರ್ಯಗಳು ಬಹಳವಾಗಿವೆ.

**ದ್ರೋಣ**:—ನಮ್ಮದು ಹರಟೆ ಮಾತು. ಅದರಲ್ಲಿಯೂ ಪೂರ್ವಸ್ಮರಣೆ, ಉಪಕಾರ ಸ್ಮರಣೆ—ಇದರಷ್ಟು ಹರಟೆಯಾದುದು ಮತ್ತೇನು?

**ದ್ರುಪದ**:—ಬಂದ ಕಾರ್ಯವನ್ನು ಕ್ಷಿಪ್ರವಾಗಿ ಹೇಳು.

**ದ್ರೋಣ**.—ದೇವರ ಮೂರ್ತಿಯನ್ನು ನೋಡಬಂದವ ನಾನು,-ರಾಕ್ಷಸ ಮೂರ್ತಿಯನ್ನು ನೋಡಿದೆ.

**ದ್ರುಪದ**:—ನಾಲಗೆಯ ಮೇಲೆ ಅಂಕೆಯಿಟ್ಟು ಮಾತಾಡು.

**ದ್ರೋಣ**:—ನಮ್ಮ ಪ್ರಯತ್ನಗಳೆಲ್ಲಾ ವಿಫಲವಾದುದನ್ನು ನೋಡಿದರೆ—ಇಂದ್ರಿಯಗಳು ನಮ್ಮ ಅಂಕೆಯನ್ನು ಮೀರಿ ಓಡುವುವು.

**ದ್ರುಪದ**:—ಹಾಗಾದರೆ ಇಲ್ಲಿಂದ ದಯಮಾಡಿಸಬಹುದು.

**ದ್ರೋಣ**:—ಹಾಗೆಯೆ ಮಾಡುತ್ತೇನೆ. ಆದರೆ ದರಿದ್ರರ ಗೋಳು ಏನೆಂಬುದನ್ನು ತಿಳಿಸಿಬಿಡುತ್ತೇನೆ.

**ದ್ರುಪದ**:—ತಿಳಿಸುವ ಅವಶ್ಯಕತೆಯಿಲ್ಲ. ನಿನಗೆ ಬೇಕಾದುದನ್ನು ಕೊಡುತ್ತೇನೆ. ಇಲ್ಲಿಂದ ಹೋಗುವ ಅನುಗ್ರಹವನ್ನು ಮಾಡು!

**ದ್ರೋಣ**:—ದರಿದ್ರರಿಗೆ ಏನು ಬೇಕೋ ಅದನ್ನು ಕೊಡು.

**ದ್ರುಪದ**:—ನಾಲ್ಕಾರು ನಾಣ್ಯಗಳನ್ನು . . . .

**ದ್ರೋಣ**:—ಛೀ! ನಿನ್ನ ಸ್ವಭಾವವನ್ನು ತಿಳಿದ ಮೇಲೆ ಈ ದಾನಕ್ಕೆ ಕೈಯೊಡ್ಡುವೆನೆ?

**ದ್ರುಪದ**:—ಹಾಗಾದರೆ ಇಲ್ಲಿ ನಿನಗೇನೂ ಕೆಲಸವಿಲ್ಲ.

**ದ್ರೋಣ**:—ನಿನ್ನ ರಾಜ್ಯದಲ್ಲಿ ನನ್ನಂತಹ ಸಾವಿರಾರು ಜನರ—ಅಲ್ಲ, ಎಲ್ಲಾ ಜನರ ಮನೆಯಲ್ಲಿ ದಾರಿದ್ರ್ಯ ದೇವತೆ ಕುಣಿದಾಡುತ್ತಾಳೆ. ಅವರೆಲ್ಲರನ್ನೂ ಹೀಗೆಯೇ ದೇಶದಿಂದೋಡಿಸಿದರೆ ನೀನು ಆಳುವುದು ಏನನ್ನು?

**ದ್ರುಪದ**:—ಅದು ನನ್ನೊಬ್ಬನ ಕರ್ತವ್ಯ ವಿಚಾರ.

**ದ್ರೋಣ**:—ಬಡವರ ಹಸಿವೆ ನಿಮಗೆ ಕಾಣುವುದಿಲ್ಲ. ನಿಮ್ಮ ಮುಂದೆ ನಿಂತವರೆಲ್ಲಾ ಉದರಂಭರರು. ಹೊಟ್ಟೆ ತುಂಬಿಸಿ ತೇಗುವವರು. ನಾಣ್ಯಗಳಿಗಾಗಿ ಆತ್ಮವನ್ನು ಮಾರುವ ಪಾಷಂಡಿಗಳು. ಅವರು ಹೊಗಳುತ್ತಾರೆ. ನೀವು ಹೊಗಳಿಸಿಕೊಳ್ಳುತ್ತೀರಿ.

**ದ್ರುಪದ**.—ಸಾಕು ನಿನ್ನ ಪ್ರವಚನ. ಇದು ರಾಜಾಸ್ಥಾನವೆಂಬುದನ್ನು ಇನ್ನಾದರೂ ತಿಳಿ.

**ದ್ರೋಣ**:—ರಾಜನಾಗಿ ಹುಟ್ಟಿದುದರಿಂದ ನೀನೊಬ್ಬ ರಾಜ. ಪ್ರಜಾರಂಜನ ಮಾಡುವುದರಿಂದಲ್ಲ.

**ದ್ರುಪದ**:—ಹೇಗೂ ಇರಬಹುದು. ನಮ್ಮಂತಹ ರಾಜನಾಮ ಧಾರಕರಲ್ಲಿ ಮಹಾತ್ಮರಿಗೇನು ಕೆಲಸ?

**ದ್ರೋಣ**:—ದರ್ಪವೇಕೆ ಪ್ರಭು! ಈ ಮಕುಟವು ಕೊಟ್ಟ ಅಹಂಕಾರವಿದು. ಇದು ಕಣ್ಣ ಮುಂದೆ ಉರುಳುವಾಗ ಅಹಂಕಾರವು ಉರುಳುವುದು.

**ದ್ರುಪದ**:—ಶಕ್ತಿಯಿರುವಲ್ಲಿ ಸರ್ವವೂ ಸೇರುತ್ತದೆ. ಪ್ರಭುತ್ವವು ನೆಲಸುತ್ತದೆ.

**ದ್ರೋಣ**:—ಕ್ಷುಧೆಯ ಮುಂದೆ ಇದರ ಪ್ರಭಾವಕ್ಕೆ ಎಡೆಯಿಲ್ಲ, ದ್ರುಪದ! ಇದು ಪ್ರಜಾಧಿಕಾರದ ಕಾಲ. ಸ್ವಚ್ಛಂದತೆಯ ಯುಗ ವಲ್ಲ. ತಾವೆ ಸೃಷ್ಟಿಯ ಅಧಿರಾಜರೆಂದು ಸ್ವೇಚ್ಛಾಪ್ರವರ್ತನೆ ಮಾಡಿದ ಎಷ್ಟೋ ಮಂದಿಯ ಅಹಂಕಾರವು ಮಣ್ಣುಪಾಲಾಗಿದೆ.

**ದ್ರುಪದ**:—(ಆತ್ಮಗತ) ರಾಜಸನ್ನಿಧಿಯಲ್ಲಿಯೂ ಬುಸುಗುಟ್ಟು ತ್ತದೆ ಈ ಸರ್ಪ! ಇದಕ್ಕೆ ತಕ್ಕ ಪ್ರತೀಕಾರವಾಗುವುದು! (ಪ್ರಕಾಶ) ದುಷ್ಟಬ್ರಾಹ್ಮಣ! ನಿನ್ನ ಜಾತಿಯೊಂದೆ ಇದುವರೆಗೆ ನಿನ್ನ ತಲೆಯನ್ನು ಕಾಪಾಡಿದುದು.

**ದ್ರೋಣ**.—ಇನ್ನೂ ಅದೇ ಜಾತಿಬಲವು ಕಾಪಾಡುವುದು.

**ದ್ರುಪದ**:—ನಿನಗೂ ಒಂದು ಜಾತಿಯಿದ್ದರೆ ಅದು ಕ್ಷುದ್ರ ಜಾತಿ. ದರಿದ್ರ ಜಾತಿ. ಬೇಡುವ ಜಾತಿ. ಹೊಟ್ಟೆ ಹೊರುವುದಕ್ಕಾಗಿ ಅಕ್ಷರ ವನ್ನು ಮಾರುವ ಜಾತಿ.

**ದ್ರೋಣ**:—ಹೌದು. ಹಸಿವೆಯ ಜಾತಿ ನಮ್ಮದು. ಸಂದರ್ಭ ಬಂದರೆ ಲೋಕವನ್ನೇ ದಹಿಸುವುದು.

**ದ್ರುಪದ**·—ಬ್ರಾಹ್ಮಣ್ಯ! ಇದಕ್ಕೆ ಧಿಕ್ಕಾರ.

**ದ್ರೋಣ**:—ನೀನು ಧಿಕ್ಕರಿಸಬೇಕಾದುದು ಬ್ರಾಹ್ಮಣ್ಯವನ್ನಲ್ಲ. ನಿನ್ನಂತಹ ಅಧಮ ಕ್ಷತ್ರಿಯರಿಂದ ಬೇಡ ಬಂದ ನಮ್ಮಂತಹ ದರಿದ್ರ ರನ್ನು.

**ದ್ರುಪದ**·—ಮನೆ ಬಾಗಿಲಿಗೆ ಬೇಡಿ ಬಂದಿದೆ ಬ್ರಾಹ್ಮಣ್ಯ!

**ದ್ರೋಣ** —**ಈ** ಸ್ಥಿತಿಯೊದಗಲು ಕಾರಣವೇನೆಂದು ತಿಳಿದಿರು ವೆಯಾ? ನಿಮ್ಮಂತಹ ದುಷ್ಟರ ತಲೆಯ ಮೇಲೆ ಸಿರಿಮುಡಿ ಕುಳಿತುದ ರಿಂದ!

**ದ್ರುಪದ**:—ಮೂರ್ಖ ಬ್ರಾಹ್ಮಣ! ಉಚ್ಚ ಜಾತಿಯಂತೆ ನಿಮ್ಮದು. ಬ್ರಹ್ಮತೇಜವೇ ನಿಮ್ಮ ಕಣ್ಣಲ್ಲಿ ಹೊಳೆಯುವುದು. ಬ್ರಹ್ಮಶಕ್ತಿಯೆ ಗಂಟ

ಲಲ್ಲಿ ವೇದಮಂತ್ರೋಚ್ಚಾರಣೆಯನ್ನು ಮಾಡಿಸುವುದು. ಆದರೆ ಅದಕ್ಕೆ ಹೊಟ್ಟೆ ತುಂಬಿಸಲಾಗುವುದಿಲ್ಲ. ಆ ಒಲೆಯಲ್ಲಿ ಬೆಂಕಿ ಕನಲುವಂತೆ ಜಠರಾಗ್ನಿ ಪ್ರಜ್ವಲಿಸುವಾಗ—ಆ ಶಕ್ತಿ ಬೆಣ್ಣೆಯಂತೆ ಕರಗುವುದು. ಆಗ ಅದು ಅಸಹಾಯವಾಗಿ ಭಿಕ್ಷೆ ಬೇಡುವುದು . . . . ಹೀಗೆ ಜನ್ಮಮಾತ್ರದಿಂದ ಬ್ರಾಹ್ಮಣರೆಂದು ಲೋಕದ ಆರಾಧನೆಯನ್ನು ಬಯಸುವ ಕಾಲವು ಇದಲ್ಲ ಬ್ರಾಹ್ಮಣ . . . .

**ದ್ರೋಣ**:—ಜನ್ಮಸಿದ್ಧವಾದ ರಾಜತ್ವವು ಮಾತ್ರ ಈ ಕಾಲದಲ್ಲಿ ಉಳಿಯಬಹುದಲ್ಲವೆ?

**ದ್ರುಪದ**:—ಅದನ್ನು ಇತರರಿಂದ ಅಳಿಸಲು ಸಾಧ್ಯವಿಲ್ಲ. ತನ್ನ ಪ್ರಭಾವದಿಂದಲೆ ಉಳಿಯುವುದದು.

**ದ್ರೋಣ**:—ಸಂದೇಹವೇನು?

**ದ್ರುಪದ**:—ನೀನು ಅಂದು ಹುಟ್ಟಬೇಕಾಗಿತ್ತು ಸತ್ಯ ಯುಗದಲ್ಲಿ. ಬ್ರಾಹ್ಮಣರು 'ಮಮ ದೇವತೆ'ಗಳಾಗಿದ್ದ ಕಾಲದಲ್ಲಿ. ತಡವಾಗಿ ಹುಟ್ಟಿದೆ ದ್ರೋಣ. ಇದೇ ತಪ್ಪು.

**ದ್ರೋಣ**·—ಹೌದು ದ್ರುಪದ. ಅದರಲ್ಲಿಯೂ ನಿನ್ನಂಥ ದುರ್ಜನರ ಕಾಲದಲ್ಲಿ ನಾವು ಹುಟ್ಟಬಾರದಿತ್ತು.

[ಅಷ್ಟರಲ್ಲಿ ಸೈನಿಕರ ಪ್ರವೇಶ.]

**ದ್ರುಪದ**:—ದ್ರೋಣ! ಹಸಿವೆ ಹಸಿವೆಯೆಂದು ಬೊಬ್ಬೆ ಹೊಡೆದೆಯೆಲ್ಲಾ. ನಿನಗೆ ಆಹಾರ ಸಿಕ್ಕುವುದೀಗ.

**ದ್ರೋಣ**:—ನನಗೆ ಒಬ್ಬನಿಗಲ್ಲ. ನಿನ್ನ ರಾಜ್ಯದಲ್ಲಿ ಪ್ರತಿಯೊಬ್ಬನ ಹೊಟ್ಟೆಯಲ್ಲಿಯೂ ಹಸಿವೆ ತಾಂಡವವನ್ನಾಡುತ್ತದೆ.

**ದ್ರುಪದ**:—ಅವರೆಲ್ಲಾ ಅರಮನೆಗೆ ಬರಲಿಲ್ಲ. ಬಂದವನೊಬ್ಬನೆ . . . .

**ದ್ರೋಣ**:—ಬಡವರ ದೂರು ಅರಮನೆಯ ವರೆಗೆ ಬರುವುದೆ? . . . . ಅರಮನೆಯಲ್ಲಿರುವುದು ಕಿವುಡಾದ ಶಿಲಾಪ್ರತಿಮೆಯೆಂದು ಅದಕ್ಕೆ ಗೊತ್ತಿದೆ!

**ದ್ರುಪದ**:—ರಾಜಗೌರವವನ್ನು ಪಡೆಯ ಬಂದವನು ನೀನೊಬ್ಬನೆ. ತಕ್ಕ ಮರ್ಯಾದೆಯು ಆಗಿಯೇ ಬಿಡುವುದು.

**ದ್ರೋಣ**:—ನಿನ್ನ ಕುತಂತ್ರ ತಿಳಿದಿದೆ ದ್ರುಪದ . . . . ಆದರೆ ಅದನ್ನು ನೆನೆದು ನಗು ಬರುತ್ತದೆ.

**ದ್ರುಪದ**.—ಸೆರೆಮನೆಯಲ್ಲಿ ಹೊಟ್ಟೆತುಂಬಾ ಅನ್ನ ಕೊಡುತ್ತಾರೆ.

**ದ್ರೋಣ**·—ಬೆಂಕಿಯನ್ನು ಯಾವ ಸೆರೆಮನೆಯಲ್ಲಿಡುವೆ ದ್ರುಪದ?

**ದ್ರುಪದ**:—ಬೆಂಕಿ . . . .

**ದ್ರೋಣ**:—ಹೌದು. ನೊಂದ ಬೆಂದ ಈ ಜೀವದ ಸತ್ವವೀಗ ಬೆಂಕಿಯಂತೆ ದಳ್ಳಿಸುತ್ತಿದೆ. ಇದನ್ನು ಯಾವುದರಿಂದಲೂ ಕಟ್ಟಲಾರೆ.

**ದ್ರುಪದ**·—ಅದಕ್ಕೆ ಪ್ರತ್ಯೇಕ ಅಗ್ನಿಕುಂಡವಿದೆ.

**ದ್ರೋಣ**:—ಬಡವರ ಶಾಪವಿದು. ನಿನ್ನ ರಾಜ್ಯವು ಹಾಳಾಗುವುದು. ಕೋಟೆಕೊತ್ತಳಗಳು ಮುಗ್ಗರಿಸಿ ಬೀಳುವುವು. ಇದು ನಿಜವೆಂದು ಭಾವಿಸಿಕೋ!

**ದ್ರುಪದ**:—ಏಕೆ ಬೆಂಕಿ ಉರಿಯುವುದಿಲ್ಲ? . . . .

**ದ್ರೋಣ**:—ಇಲ್ಲಿ ಉರಿಯಲಾರದು. ನಿನ್ನ ದೇಶವನ್ನು ಸುಟ್ಟು, ಅರಮನೆಯನ್ನು ಬೂದಿಮಾಡಿ, ಕೋಶವನ್ನು ಸೂರೆ ಮಾಡಿ ನಿನ್ನ ಮೈಯನ್ನು ಭಯಂಕರ ಜ್ವಾಲೆಗಳಿಂದ ಆವರಿಸುವುದು. ಆಗ ನೀನು ಪ್ರಲಯ ವೃಷ್ಟಿಯಂತೆ ಕಣ್ಣೀರು ಸುರಿಸಿದರೂ ಆ ಬೆಂಕಿ ನಂದದು. ಸರ್ವಥಾ ನಂದದು.

**ದ್ರುಪದ**:—ಸೈನಿಕರೇ ನೋಡುವುದೇನು?

**ದ್ರೋಣ**:—ಹಾ! ನಿನ್ನ ದುರ್ಬುದ್ಧಿಯೇ. ಅದು ಹೆಚ್ಚಲಿ! ದುರಾಚಾರವು ನಿರಾತಂಕವಾಗಿ ಸಾಗಲಿ. ಪ್ರಜೆಗಳ ಮನಸ್ಸು ಬೇಯಲಿ. ದರಿದ್ರರ ಶಾಪಕೋಪವು ಪ್ರವಾಹವಾಗಿ ಹರಿಯಲಿ. ಅದರಲ್ಲಿ ನಿನ್ನ ರಾಜತ್ವವು ಹೊಡೆದು ತೇಲಿ ಹೋಗುವುದು ದ್ರುಪದ! ಪ್ರಜೆಗಳ ಸೆರೆಯಾಳಾಗಿ ಪಂಜರದ ಇಲಿಯಂತೆ ಚೀರುತ್ತಿರುವಾಗ ನನ್ನ ನೆನಪಾಗುವುದು ನಿನಗೆ!

**ದ್ರುಪದ**:—ಸೇನಾಪತಿ! ವಿಲಂಬವೇಕೆ? ಹಿಡಿ ಈತನನ್ನು.

**ದ್ರೋಣ**:—ಸಾಧ್ಯವಿಲ್ಲ ಪ್ರಭು. ಕ್ಷಾತ್ರಬಲವೆಲ್ಲಾ ಒಂದಾಗಿ ಬಂದರೂ ಸಾಧ್ಯವಿಲ್ಲ.

**ದ್ರುಪದ**:—ಈತನು ಅಬದ್ಧ ಮಾತಾಡುವನು. ಕೇಳಬೇಡ. ಹಿಡಿ.

**ದ್ರೋಣ**:—ರಾಜಸತ್ತೆಯೆ! ನಿನ್ನ ಬಾಳ್ವೆ ಇನ್ನೆಷ್ಟು ಕಾಲ?

**ದ್ರುಪದ**:—ಕಟ್ಟಿರಿ! ಒಯ್ಯಿರಿ!

**ದ್ರೋಣ**:—ನನ್ನ ಘೋರ ಪ್ರತಿಜ್ಞೆಯನ್ನು ಕೇಳು.

**ದ್ರುಪದ**:—ಹುಂ; ಮಾಡುವುದನ್ನು ಮಾಡು, ಒಯ್ಯಿರಿ ಈತನನ್ನು!

**ದ್ರೋಣ**:—ನನ್ನ ಶಿಷ್ಯರಿಂದ-ನಿನ್ನಂತೆಯೇ ಕ್ಷತ್ರಿಯ ವಂಶದಲ್ಲಿ ಹುಟ್ಟಿದವರಿಂದ ನಿನ್ನ ಮಕುಟಚ್ಛೇದನವನ್ನು ಮಾಡಿಸುತ್ತೇನೆ.

**ದ್ರುಪದ**:—ಅದು ಮತ್ತಿನ ಮಾತು. ಈಗ ಸೆರೆ ಹಿಡಿಯಿರಿ.

[ಸೈನಿಕರು ಮತ್ತೂ ಸಮೀಪಿಸುವರು.]

**ದ್ರೋಣ**:—ಇದು ಸತ್ಯ. ಇದು ಶಿಲಾಕ್ಷರ.

**ದ್ರುಪದ**:—ಹೇಡಿಗಳು ಸಾಯುವಾಗ ಬಡಿವಾರವೆ ಗಂಗೋದಕ.

**(ಸೈನಿಕರು ಅವನನ್ನು ಆವರಿಸುವರು. ಒಬ್ಬನ ಕೈಯಿಂದ ಖಡ್ಗವನ್ನು ಕಿತ್ತು ದ್ರೋಣನು ಅದನ್ನು ಬೀಸುವನು.)**

**ದ್ರೋಣ**:—ಸೈನಿಕರೇ! ನೋಡುವುದೇನು? ರಾಜಾಜ್ಞೆಯನ್ನು ಪಾಲಿಸಿರಿ!

**ದ್ರುಪದ**:—ಸೈನಿಕರೆ! ಹೇಡಿಗಳೇ! ಯಾಕೆ ಸುಮ್ಮನೆ ನಿಂತಿರುವಿರಿ?

**ಸೇನಾಧಿಪತಿ**:—ಏನದ್ಭುತವಿದು? ಈತನ ದೇಹವೇ ಕಾಣುವುದಿಲ್ಲ. ಮಂಡಲಾಕಾರದಲ್ಲಿ ಬೀಸುವ ಖಡ್ಗವು ಕಣ್ಣಿಗೆ ಮಿಂಚನ್ನು ಕವಿಸುತ್ತದೆ. . . . . ಅಯ್ಯೋ . . . .

**ದ್ರುಪದ**:—ಇದೆಲ್ಲಾ ಹೇಡಿಗಳಿಗೆ ಕಾಣುವ ಚಿತ್ರ . . . . ಒಬ್ಬನನ್ನು ಸೆರೆಹಿಡಿಯಲು ಸಾಧ್ಯವಿಲ್ಲದ ನೀವು ಕುರಿಗಳಲ್ಲವೆ?

**ಸೇನಾಪತಿ**:—ಸಾಧ್ಯವಾಗುವುದಿಲ್ಲ ಪ್ರಭೋ! ಓಡುತ್ತಾನೆ ಆತ!

[ಅಷ್ಟರಲ್ಲಿ ನಾಲ್ಕಾರು ಸೈನಿಕರ ತಲೆ ನೆಲಕ್ಕುರುಳುವುದು.]

**ದ್ರುಪದ**:—ಏನದ್ಭುತವಿದು? ನಾನೇ ಹೊರಡುತ್ತೇನೆ.

**ದ್ರೋಣ**:—ಕಾಲ ಬರಲಿಲ್ಲ. ಆಗ ಹೊರಟು ಬಾ. (**ಎಂದು ದಾರಿ ಬಿಡಿಸಿ ದ್ರೋಣನು ಹೋಗುವನು.**)

**ದ್ರುಪದ**:—ಅಯ್ಯೋ! ಎಂತಹ ಭಯಂಕರ ದೃಶ್ಯ!

**ಸೇನಾಪತಿ**:—ಎಲ್ಲಿಯ ಸಿಡಿಲು! ಎಲ್ಲಿಯ ಮಿಂಚು!

**ದ್ರುಪದ**:—ಅಯ್ಯೋ! ರಾಜನ ಕಣ್ಣ ಮುಂದೆ ರಕ್ತದ ಹೊಳೆ.

**ಸೇನಾಪತಿ**:—ನಮ್ಮ ಅಪರಾಧವನ್ನು ಕ್ಷಮಿಸಿರಿ. ಸಾಧ್ಯವಾಗದ ಕೆಲಸಕ್ಕೆ ನಾವೇನು ಮಾಡಲಿ?

**ದ್ರುಪದ**:—ಎಲ್ಲಿಂದಲೋ ಒಂದು ಉಲ್ಕಾಪಾತವಾದಂತೆ ನನ್ನ ಸಭೆಗೆ ಬಿದ್ದು ನನ್ನ ಕಣ್ಣೆದಿರಲ್ಲಿಯೇ ಕ್ಷಾತ್ರಬಲವನ್ನು ಹೀಗೆ ಸದೆದು ಬಿಟ್ಟನಲ್ಲಾ! ಇದೇ ವ್ಯಸನ.

**ಸೇನಾಪತಿ**:—ಕ್ಷಮಿಸಿರಿ ಪ್ರಭು! ನಮ್ಮನ್ನು ಕ್ಷಮಿಸಿರಿ!

**ದ್ರುಪದ**:—ಇಲ್ಲ ಸೇನಾಪತಿ! ನಿಮ್ಮ ತಪ್ಪಲ್ಲ. ಈ ಹುಲಿಯನ್ನು ಬಂದೊಡನೆ ಗೂಡಿಗೆ ಸೇರಿಸಬೇಕಿತ್ತು. ಹಾಗೆ ಮಾಡದ ತಪ್ಪು ನನ್ನದು.

**ಸೇನಾ**:—ಹಾಗೆನ್ನಬಾರದು ಪ್ರಭು! ತಪ್ಪು ನನ್ನದು.

**ದ್ರುಪದ**·—ಯಾರದೆ ಇರಲಿ. ಗುಣದೋಷಗಳ ವಿಚಾರವು ಮತ್ತೆ. ನನ್ನ ಮನಸ್ಸಿಗೆ ಸಿಡಿಲು ಬಿದ್ದಂತಾಗಿದೆ. ಸತ್ತ ಸೈನಿಕರ ಶವಗಳಿಂದ ಸುರಿಯುವುದಕ್ಕಿಂತಲೂ ಹೆಚ್ಚು—ನನ್ನೆದೆಯಿಂದ ನೆತ್ತರು ಸುರಿಯುತ್ತದೆ. ನನ್ನ ಆಸ್ಥಾನದಲ್ಲಿ, ನನ್ನ ಇದಿರಲ್ಲಿ ಇಂತಹ ಅಪಮಾನ. ಸೈನಿಕರು ಸತ್ತರೆ ಬೇರೆ ಸೈನಿಕರನ್ನು ಒದಗಿಸಬಹುದು. ಆದರೆ ಅಭಿಮಾನವು ಸತ್ತರೆ? . . . . ಸೇನಾಪತಿ! ದಾರಿ ತೋರಿಸು. ಈ ಭೀಕರ ಚಿತ್ರವನ್ನು ನೋಡಲಾರೆ . . . .

[**ಹೋಗುವನು**]

## ಎರಡನೆಯ ದೃಶ್ಯ

[**ಪಾಂಡವ ಕೌರವರ ಧನುರ್ವಿದ್ಯಾಶಾಲೆ. ದ್ರೋಣಾಚಾರ್ಯನು ಅಗ್ರಾಸೀನನಾಗಿರುವನು. ಯುಧಿಷ್ಠಿರ ಕೌರವಾದಿ ನೂರೈವರು ಸುತ್ತಲೂ ಕುಳಿತಿರುವರು.**]

**ಪಾರ್ಥ** —ಈ ರೀತಿಯಲ್ಲಿ ಇನ್ನೆಷ್ಟು ಕಾಲಗಳನ್ನು ಕಳೆಯಬೇಕು ಗುರುದೇವ? ನಮ್ಮ ಧನುರ್ವಿದ್ಯೆಯೆಲ್ಲ ನಿರ್ಜೀವ ವಸ್ತುಗಳೊಡನೆ ಹೋರಾಡುವುದರಲ್ಲಿ ವ್ಯಯವಾಗುತ್ತಿದೆ ಗುರುದೇವ, ಇದಾಗದು!

**ದ್ರೋಣ**:—ಹೌದು ಮಗು! ಇನ್ನೂ ನೀವು ಬಾಲ್ಯಾವಸ್ಥೆಯಲ್ಲಿದ್ದೀರಿ.

**ಪಾರ್ಥ**:—ಆದರೇನು? ನಮಗೆ ಜೀವವಿಲ್ಲವೆ? ಸಜೀವ ವಿದ್ಯೆ ಬೇಕು ನಮಗೆ. ಜೀವಂತರಲ್ಲಿ ಹೋರಾಡುವ ವಿದ್ಯೆಬೇಕು. 'ಇದು ಜಿಂಕೆ; ಗುರಿಯಿಟ್ಟು ಹೊಡೆ' ಎಂದು ಜಿಂಕೆಯ ಮೂರ್ತಿಗೆ ಹೊಡೆಯು

ವುದು; 'ಇದು ಯುದ್ಧ; ಇದು ವ್ಯೂಹ; ಇವರು ಶತ್ರುಗಳು' ಎಂದು ಸಹೋದರರ ನೆಳಲುಗಳೊಡನೆ ಹೋರಾಡುವುದು, ಇನ್ನೆಷ್ಟು ಕಾಲ ದೇವ? ಬರಿಯ ಕವಡೆಂದು ತಿಳಿದರೆ ಇಂತಹ ಯುದ್ಧದಲ್ಲಿ ಹೃದಯ ಶಕ್ತಿಯು ಕೈಯಲ್ಲಿ ಹೊಮ್ಮುವುದಿಲ್ಲ ತಂದೆ! ನಮ್ಮ ಶಕ್ತಿಯೇ ಕುಗ್ಗಿ ಹೋಗುವುದು, ಸಾಕು. ನಮಗೆ ಬೇರೆ ವಿಧದ ವಿದ್ಯೆಯನ್ನು ಕಲಿಸು ತಂದೆ!

**ದ್ರೋಣ:**— ಮಕ್ಕಳೆ! ನಿಮ್ಮೆಲ್ಲರ ಅಭಿಪ್ರಾಯ ಹೀಗೆಯೆ?

**ಎಲ್ಲರೂ:**— ಹೌದು ಗುರುದೇವ.

**ಪಾರ್ಥ:**— ಗುರಿಯಿಡಲು ಕಲಿಯುವುದೆಂದು ಮರಗಳ ಎಲೆಯನ್ನೆಲ್ಲಾ ಹೊಡೆದುರುಳಿಸಿದೆವು. ಛಾಯಾಲಕ್ಷ್ಯವೆಂದು ಆಕಾಶದಲ್ಲಿ ಹಾರಾಡುವ ಹಕ್ಕಿಗಳ ನೆಳಲನ್ನು ನೋಡಿ ಹಕ್ಕಿಗಳನ್ನೆಷ್ಟೊ ಹೊಡೆದುಕೊಂದಾಯಿತು. ಇನ್ನು ಮನುಷ್ಯರಲ್ಲಿ ಬಲುಹನ್ನು ತೋರಬೇಕು. ನೀನೆ ಅನುಗ್ರಹಮಾಡಬೇಕು ಗುರುದೇವ! (ಎಂದು ಧನುರ್ಬಾಣಗಳ ಸಮೇತ ದ್ರೋಣನ ಪಾದಕ್ಕೆ ಅಡ್ಡಬೀಳುವನು.)

**ದ್ರೋಣ:**—(ಆತ್ಮಗತ) ಇದೀಗ ಪ್ರಯೋಗ ತಿಳಿಯದ ವಿದ್ಯಾಪ್ರಭಾವ. ಹಲ್ಲು ಮೂಡುವ ಮಗುವಿಗೆ ಕಂಡುದನ್ನೆಲ್ಲಾ ಕಡಿಯಬೇಕೆಂದು ತೋರುತ್ತದೆ. ಇದರಂತೆ ಅರ್ಜುನನ ಸ್ಥಿತಿಯಿದೆ. (ಪ್ರಕಾಶ) ಮಕ್ಕಳೆ! ಎಲ್ಲರೂ ಸಾವಧಾನವಾಗಿ ಕೇಳಿರಿ.

**ಎಲ್ಲರೂ:**— ಹಾಗೆಯೆ ಮಾಡುತ್ತೇವೆ.

**ದ್ರೋಣ:**— ಪ್ರಿಯ ಶಿಷ್ಯರೆ! ನಿಮಗೆ ಆಶ್ಚರ್ಯವಾಗಬಹುದು ಈ ಮಾತನ್ನು ಕೇಳಿದರೆ; ಈ ಶಾಲೆಯೊಳಗೆ ಗುರು ಕಲಿಸುವ ವಿದ್ಯೆ ಇಷ್ಟೆ, ಮಕ್ಕಳೆ!

**ಎಲ್ಲರೂ:**— ಹಾಗೆಂದರೆ?

**ಪಾರ್ಥ:**— ಹಾಗೆಂದರೆ . . . .?

**ದ್ರೋಣ:**—ನನ್ನ ಬಾಯಿಯಿಂದ ಕೇಳಬೇಕಾದ ವಿಷಯಗಳನ್ನೆಲ್ಲಾ ಈ ಮೊದಲೇ ಕೇಳಿರುವಿರಿ.

**ಪಾರ್ಥ:**—ಇಲ್ಲ ಗುರುವರ! ಇಲ್ಲ. ನಮ್ಮ ಪ್ರಪಂಚವಿನ್ನೂ ಈ ಶಾಲೆಯಿಂದ ಹೊರಗೆ ವಿಸ್ತರಿಸಲಿಲ್ಲ!

**ದ್ರೋಣ:**—ಆ ಪ್ರಪಂಚವನ್ನು ನೀವೇ ಹುಡುಕಬೇಕು.

**ಪಾರ್ಥ:**—ಸಾಧ್ಯವಿಲ್ಲ ಗುರುದೇವ! ಶಸ್ತ್ರಾಗಾರದಲ್ಲಿ ಅಡ್ಡಾದಿಡ್ಡಿ ಬಾಣಗಳನ್ನು ಬಿಸುಟಂತೆ, ನಮ್ಮ ಜ್ಞಾನವೆಲ್ಲಾ ಅಸ್ತವ್ಯಸ್ತವಾಗಿ ಬಿದ್ದಿರುವುದು. ಯಾವ ಬಾಣವನ್ನು ಹೇಗೆ ಪ್ರಯೋಗಿಸಬೇಕು? ಎಂಬುದನಿನ್ನೂ ಕಲಿಯಲಿಲ್ಲ, ತಂದೆ!

**ದ್ರೋಣ:**—ಅದನ್ನು ನಿಮ್ಮ ಪ್ರತಿಭೆಗನುಸಾರವಾಗಿ ಕಂಡು ಹಿಡಿಯಿರಿ! ಗುರು ಹೇಳಿಕೊಡುವುದು ಇಷ್ಟನ್ನೇ. ಕೈಯ್ಯಲ್ಲಿ ಧನುರ್ಬಾಣಗಳನ್ನು ಕೊಡುವುದು, ಅನುಸಂಧಾನದ ಕ್ರಮವನ್ನು ತಿಳಿಸುವುದು, ಇಷ್ಟೆ. ಬಾಣ ಪ್ರಯೋಗವು ಎಲ್ಲಿಗೆ? ಏಕೆ? ಎಂದರಿವುದು ಶಿಷ್ಯನ ಕೌಶಲ.

**ಪಾರ್ಥ:**—ಪ್ರಪಂಚರಂಗಕ್ಕಿಳಿಯುವಾಗ ಈ ಶಾಲೆಯೊಳಗೆ ಪಡೆದ ಜ್ಞಾನವೆಲ್ಲಾ ಇಂಗಿಹೋಗುತ್ತದಲ್ಲಾ! ಅದಕ್ಕೇನು ಮಾಡಲಿ?

**ದ್ರೋಣ:**—ಹಾಗಾಗದಂತೆ ನೀವೆ ನೋಡಿಕೊಳ್ಳಬೇಕು ನಿಮ್ಮ ಹೃದಯವನ್ನು ಬೆದೆಮಾಡಿದ್ದೇನೆ. ಜ್ಞಾನ ಬೀಜವನ್ನು ಬಿತ್ತಿದ್ದೇನೆ. ಅದು ಅಂಕುರಿಸಿದೆ. ಹುಲುಸಾಗಿ ಬೆಳೆದು ಸಮೃದ್ಧ ಫಲವನ್ನು ಕೊಡುವಂತೆ ಮಾಡುವುದು ನಿಮ್ಮ ಕೆಲಸವಲ್ಲವೆ ಶಿಷ್ಯರೆ?

**ಪಾರ್ಥ:**—ಇದುವರೆಗೆ ನಮಗೆ ಯಾವುದೂ ಕಷ್ಟತೋರಲಿಲ್ಲ ಪ್ರಪಂಚವು ಭಯಂಕರವಾಗಿ ಕಾಣುತ್ತಿದೆ ಈ ಸಮಯದಲ್ಲಿ . . .

**ದ್ರೋಣ:**—ಲೋಕವು ಭಯಂಕರವಲ್ಲದಿದ್ದರೆ ಇನ್ನಾವುದು ಭಯಂಕರ? ಮಕ್ಕಳೆ! ಆದರೂ ಬೆದರಬೇಡಿರಿ. ಇದರಲ್ಲೆ ನೀವು ಕಲಿತ ವಿದ್ಯೆಯ ಪ್ರಯೋಜನವಾಗಬೇಕು.

**ಪಾರ್ಥ**:- ಹೊಳೆ ದಾಟಲು ಕಲಿಯಬೇಕಾದರೆ ಒಮ್ಮೆ ಯಾರಾದ ೊಬ್ಬರು ಹಿಡಿದು ಇನ್ನೊಂದು ದಡಕ್ಕೆ ಹಾಯಿಸಿಬಿಡಬೇಕು. ಮತ್ತೆ ಇನ್ನೊಂದು ಹೊಳೆಯನ್ನು ದಾಟುವ ಬಗೆ ತಿಳಿಯುತ್ತದೆ.

**ದ್ರೋಣ**:— ಅದು ನದಿಯ ಮಾತು. ಆದರೆ ಈ ಪ್ರಪಂಚ ಾಗಲ್ಲವಲ್ಲ? ಇದರ ಇನ್ನೊಂದು ದಡವೇ ಕಾಣುವುದಿಲ್ಲ. ನಮ ಂದಲ್ಲ, ಯಾರಿಗೂ ಕಾಣಲಿಲ್ಲ; ವೇದ ಪುರಾಣಗಳಿಗೆ ಸಿಲುಕಲಿಲ್ಲ; ತ್ವದ ದರ್ಶನಗಳಿಗೆ ಸಿಲುಕಲಿಲ್ಲ.

**ಪಾರ್ಥ**:— ಆದುದರಿಂದಲೆ ನಿಮ್ಮಲ್ಲಿ ಹೀಗೆ ಬಿನ್ನೈಸಿಕೊಳುತ್ತೇವೆ.

**ದ್ರೋಣ**:— ಆ ದಡವೊಂದಿದ್ದರೆ ಅಲ್ಲೊಬ್ಬ ಅಂಬಿಗನಿದ್ದಾನೆ. ೋಣಿಯಲ್ಲಿ ಕುಳಿತು ಈ ಕಡೆಯವರನ್ನೂ ನೋಡುತ್ತಿದ್ದಾನೆ. ತೇಲು ವವರನ್ನೂ ನೋಡುತ್ತಾನೆ. ಮುಳುಗುವವರನ್ನೂ ಪರೀಕ್ಷಿಸುತ್ತಾನೆ. ಮುಳುಗುವ ದೋಣಿಗೆ ಹುಟ್ಟು ಹಾಕಿ ಉದ್ಧರಿಸುತ್ತಾನೆ ಎಂಬ ಶ್ವಾಸದಿಂದ ಪ್ರವಾಹಕ್ಕೆ ದುಮುಕಬೇಕು ಶಿಷ್ಯರೆ!

**ಪಾರ್ಥ**:—(ಆಲೋಚಿಸಿ) ಹೀಗೆ ಮಾಡಬೇಕೆಂಬುದು ನಿಜ. ಮಾಡುವುದು ಮಾತ್ರ ಕಷ್ಟ.

**ದ್ರೋಣ**:— ಅಂಜಬೇಡಿರಿ! ನಿಮ್ಮ ಹಿಂದಣವರೆಷ್ಟೊ ಮಂದಿ ಈ ಸಾಹಸವನ್ನು ಮಾಡಿದ್ದಾರೆ.

**ಪಾರ್ಥ**:— ಹಿಂದಣವರು ಕಣ್ಣ ಮುಂದಿಲ್ಲ. ಕಣ್ಣಿಗೆ ಗೋಚ ಸುವವನು ನೀನೊಬ್ಬನ ಗುರುದೇವ!

**ದ್ರೋಣ**:— ಈ ಸ್ಥೂಲ ದೇಹವು ಎಷ್ಟು ಕಾಲ ಕಣ್ಣಿಗೆ ಕಾಣಿಸ ಬಲ್ಲುದು? ಒಂದು ದಿನ ಕತ್ತಲೆಯಲ್ಲಿ ಮಾಯವಾಗಲೆಬೇಕಲ್ಲವೆ?

**ಪಾರ್ಥ**:— ಗುರುವೆ ನೀನು ಹೋಗುವಲ್ಲಿ ನನ್ನನ್ನು ಕೊಂಡೊಯ್ಯು.

**ದ್ರೋಣ**:— ಎಲ್ಲರೂ ತಾವೆ ಬರುತ್ತಾರೆ. ಈ ವಿಷಯದಲ್ಲಿ ಯಾರದೂ ಒತ್ತಾಯ ನಡೆಯದು.

**ಪಾರ್ಥ**:—ಆಗಲಿ ಗುರುದೇವ! ತಮ್ಮ ಜೀವನವೆ ನಮಗೆ ಮಾರ್ಗದರ್ಶಕವಾಗಿರಲಿ!

**ದ್ರೋಣ**:—ನಿಮ್ಮ ಗುರು ಯಾವುದನ್ನು ತೋರಿಸಬಲ್ಲ? ಮಾರ್ಗ ದರ್ಶಕರನ್ನಾದರೂ ಇಷ್ಟು ದೊಡ್ಡ ಪ್ರಪಂಚದಲ್ಲಿ ಎಲ್ಲಿಯಾದರೂ ಹುಡುಕಿಕೊಳ್ಳಿರಿ ಮಕ್ಕಳೆ!

**ಪಾರ್ಥ**:—ಅದಾಗದು, ಇಂದಿಗೆ ನೀವೆ ನಮ್ಮ ದೈವ.

**ದ್ರೋಣ** —ಅಂಧ ಮೂಢ ಭಕ್ತಿಯನ್ನು ಯಾರಲ್ಲಿಯೂ ಇರಿಸ ಬಾರದು. ವಿದ್ಯಾಭ್ಯಾಸದ ಪ್ರಯೋಜನವೇನೆಂದರೆ-ಅದನ್ನು ಹೊಂದುವ ವರೆಗೆ ಬರಡಾಗಿದ್ದ ಮನಸ್ಸಾಕ್ಷಿಯು ಬಳ್ಳಿ ಮತ್ತೆ ಚಿಗುರಿ ಹೂ ಬಿಡುವುದು.

**ಪಾರ್ಥ**:—ಅಗಲಿ, ನಿಮಗೂ ಒಬ್ಬರು ಗುರುಗಳಿದ್ದರಲ್ಲ!

**ದ್ರೋಣ**·—ಸಂದೇಹವೇನು ಪಾರ್ಥ?

**ಪಾರ್ಥ**:—ಅವರು ಹೇಳಿದ ಮಾತೂ ಇಷ್ಟೆ ತಾನೆ!

**ದ್ರೋಣ**:—ಅವರ ಆತ್ಮದ ಅಚ್ಚೆ ನನ್ನಲ್ಲಿಯೂ.

**ಪಾರ್ಥ**.—ತಾವೇನು ಪ್ರಪಂಚ ಪರಿಚಯದಿಂದ ಗುರು ಕೊಟ್ಟ ವಿದ್ಯಾಧನವನ್ನು ಅಭಿವೃದ್ಧಿಗೊಳಿಸಲಿಲ್ಲವೆ?

**ದ್ರೋಣ**:—ಅಭಿವೃದ್ಧಿಗೊಳಿಸಿದೆನೋ ಇಲ್ಲವೊ ಅದು ನಿಮ್ಮಲ್ಲಿ ಕಾಣಬೇಕು.

**ಪಾರ್ಥ**:—ಹಾಗೆಂದರೇನು ಗುರುವೆ?

**ದ್ರೋಣ**:—ಮತ್ತೇನು? ಅವರು ನನ್ನನ್ನು ರಾಜಗುರುವಾಗೆಂದು ಹರಸಿದರು. ಅವರ ಹರಕೆ ಫಲಿಸಿತೆಂದು ಹೇಳಬೇಕಾದರೆ ನಿಮ್ಮ ಮುಂದನ್ನು ನೋಡಬೇಕು.

**ಪಾರ್ಥ**:—ಆಗಲಿ ಗುರುಗಳೆ! ನಾವು ಹೇಗಿರಬೇಕೆಂದು ಬೋಧಿಸಿರಿ.

**ದ್ರೋಣ:**—ಬರಿಯ ಬೋಧನೆ ಫಲಕೊಡುವುದೆ? ನಾನು ಹೇಳುವುದು ಯುಕ್ತವೆಂದು ಕಂಡರೆ ಹಾಗೆಯೆ ನಡದುಕೊಳ್ಳಬೇಕು.

**ಪಾರ್ಥ:**—ಹಾಗೆಯೆ ನಡೆದುಕೊಳ್ಳುತ್ತೇವೆ. ಅನುಗ್ರಹಿಸಿರಿ.

**ದ್ರೋಣ:**—ಮಕ್ಕಳ! ನೀವು ಲೋಕರಕ್ಷಕರಾಗಿ ಹುಟ್ಟಿರುವಿರಿ.

**ಪಾರ್ಥ:**—ಹುಂ.

**ದ್ರೋಣ**·—ಎಂದರೆ ರಾಜರಾಗಿ ಹುಟ್ಟಿರುವಿರಿ

**ಪಾರ್ಥ.**—ಹುಂ.

**ದ್ರೋಣ.**—ನಿಮ್ಮ ಜೀವನ ಎಲ್ಲರದಂತಲ್ಲ.

**ಪಾರ್ಥ:**—ಹುಂ.

**ದ್ರೋಣ**·—ಹುಟ್ಟುವಾಗಲೆ ತಮ್ಮನ್ನು ಸ್ತುತಿಮಾಡುವವರಿದ್ದಾರೆ

**ಪಾರ್ಥ.**—ಹುಂ.

**ದ್ರೋಣ**·—ಅದು ಸುಳ್ಳೆಂದು ಭಾವಿಸಿರಿ, ಕಪಟವೆಂದು ಭಾವಿಸಿರಿ.

**ಪಾರ್ಥ:**—ಹಾಗೆಯೆ ಮಾಡುತ್ತೇವೆ.

**ದ್ರೋಣ:**—ರಾಜಪ್ರಶಂಸೆಯನ್ನು ಮಾಡುವ ಜಾತಿಯೆ ಒಂದಿದೆ, ಹರಿಯುವುದು ಹೇಗೆ ನೀರಿನ ಸ್ವಭಾವವೊ, ಉರಿಯುವುದು ಹೇಗೆ ಬೆಂಕಿಯ ಸ್ವಭಾವವೊ, ಹಾಗೆಯೆ ರಾಜರನ್ನು ಹೊಗಳುವುದು ಅಂಥವರ ಸ್ವಭಾವ, ಅಲ್ಲ ಧರ್ಮ

**ಪಾರ್ಥ** —ಅವರಿಂದ ವಂಚಿತರಾಗುವುದಿಲ್ಲ ಗುರುಗಳೆ!

**ದ್ರೋಣ** —ರಾಜತ್ವವೆಂಬುದು ಬರಿಯ ಒಂದು ಸ್ಥಿತಿ. ವ್ಯಕ್ತಿ ಜೀವನದಲ್ಲಿ ಬಾಲ್ಯ, ಯೌವನ, ವಾರ್ಧಕ್ಯ ಎಂಬ ಅವಸ್ಥೆಗಳಿರುವಂತೆ ಈ ಪ್ರಪಂಚದ ಸಮಷ್ಟಿ ಜೀವನದಲ್ಲಿ ರಾಜತ್ವವೆಂಬುದೊಂದು ಅವಸ್ಥೆ ಮಾತ್ರ.

**ಪಾರ್ಥ**:— ಹುಂ.

**ದ್ರೋಣ**:— ಎಂದರೆ ಆ ಅವಸ್ಥೆ ಹೋಗಿ ಇನ್ನೊಂದು ಬರಲೂ ಬಹುದು.

**ಪಾರ್ಥ**:— ಸಂದೇಹವೇನು ಗುರುವೆ?

**ದ್ರೋಣ**:— ನೀರಿನ ಅಲೆಗಳ ತಿಕ್ಕಾಟದಿಂದ ಸಣ್ಣ ಗುಳ್ಳೆಯಾಗುವಂತೆ ಪ್ರಜೆಗಳ ಸ್ವಾರ್ಥಾದಿ ದುರ್ಗುಣಗಳು ಒಂದಕ್ಕೊಂದು ಘರ್ಷಿಸುವಾಗ ಅದರ ಪರಿಣಾಮರೂಪವಾಗಿ ಪ್ರಭುತ್ವವುಂಟಾಗುತ್ತದೆ.

**ಪಾರ್ಥ**:— ಚೆನ್ನಾಗಿ ತಿಳಿಯಿತು.

**ದ್ರೋಣ**:— ಆದುದರಿಂದ ಪ್ರಭುವಾದವನು ತನ್ನ ಜೀವನವು ಪ್ರಜಾ ಜೀವನದಿಂದ ಬೇರೆ ಎಂದು ಭಾವಿಸಬಾರದು.

**ಪಾರ್ಥ**:— ಹೌದು.

**ದ್ರೋಣ**:— ತಲೆಯಲ್ಲಿ ಕಿರೀಟವಿರುವಾಗ ಅದರ ಭಾರವು ಕರ್ತವ್ಯ ಭಾರದ ಚಿಹ್ನೆಯೆಂದು ಭಾವಿಸಬೇಕು!

**ಪಾರ್ಥ**:— ಸಾಧುವಾದವನ್ನೆ ಹೇಳಿದಿರಿ.

**ದ್ರೋಣ**:— ಹಾಗೆಣಿಸದೆ ಪ್ರಜಾಪೀಡನವನ್ನು ಮಾಡುವವರು ಯಾರೆ ಇರಲಿ, ಅವರನ್ನು ನೆಲಕ್ಕೆ ತಳ್ಳಬೇಕು ಮಗು!

**ಪಾರ್ಥ**:— ಹಾಗೆಯೆ ಮಾಡುತ್ತೇವೆ.

**ದ್ರೋಣ**:— ಎಂದರೆ ಇಂದಿನ ರಾಜನು ಅಥವಾ ಮುಂದೆ ರಾಜನಾಗುವವನು, ಪ್ರಜಾ ಜೀವನದಲ್ಲಿ ಒಂದಾಗಬೇಕಲ್ಲದೆ—ಪ್ರಜೆಗಳನ್ನು ಒತ್ತಾಳುವ ರಾಜರನ್ನು ಸದೆಯಬೇಕು.

**ಪಾರ್ಥ**:— ಸಂದೇಹವಿಲ್ಲ.

**ದ್ರೋಣ**:— ಇದೆ ರಾಜಗುರುವಾಗಿ ನಾನು ಕೊಡುವ ಬೋಧನೆ.

**ಪಾರ್ಥ**:—ಹೌದು ಗುರುದೇವ. ಇದು ಬೋಧನೆಯಾಯಿತು. ಇದರಂತೆ ವರ್ತಿಸಿದೆವೊ ಇಲ್ಲವೊ? ನಿಮ್ಮ ಗುರೂಪದೇಶವು ಫಲಿಸಿತೊ ಇಲ್ಲವೋ? ನೋಡಬಹುದಾಗಿತ್ತು. ಆದರೆ . . . .

**ದ್ರೋಣ**:—ಆದರೇನು ಶಿಷ್ಯರೆ?

**ಪಾರ್ಥ**:—ನಿನ್ನ ವಿದ್ಯೋಪದೇಶದ ಸಾರ್ಥಕತೆಯನ್ನು ನಿಮ್ಮ ಕಣ್ಣ ಮುಂದೆಯೇ ತೋರಿಸುವ ಕುತೂಹಲವಿದೆ ಗುರುಗಳೆ!

**ದ್ರೋಣ**:—ಹಾಗಿದ್ದರೆ ಪ್ರಜಾದ್ವೇಷಿಗಳಾಗಿ ಸಿಂಹಾಸನಾರೋಹಣ ಮಾಡುವುದಿಲ್ಲವೆಂದು ಶಪಥ ಮಾಡಿರಿ.

**ಪಾರ್ಥ**:—ಶಪಥಮಾಡುತ್ತೇವೆ.

**ದ್ರೋಣ**:—ನೀವಿನ್ನೂ ಚಿಕ್ಕವರು. ಯುವರಾಜ ಪಟ್ಟವು ತಲೆಯನ್ನಲಂಕರಿಸಲಿಲ್ಲ. ಅದುವರೆಗೆ ನೀವೂ ಎಲ್ಲರಂತೆ ಊರ ನೆರವಿಯಲ್ಲಿ ಸೇರಿದವರು.

**ಪಾರ್ಥ**:—ಹೌದು ಗುರುಗಳೇ!

**ದ್ರೋಣ**:—ಲೋಕಕಂಟಕರಾಗಿರುವ ರಾಜರನ್ನು ಮುರಿದು ನೆಲಕ್ಕಪ್ಪಳಿಸುವುದು ಪ್ರಜಾಧರ್ಮ.

**ಪಾರ್ಥ**:—ಹೌದು ಪ್ರಭುಗಳೆ. ಆ ಕೆಲಸವನ್ನು ಸಿಂಹಾಸನವೇರಿದ ಮೇಲೂ ಮಾಡುತ್ತೇವೆ.

**ದ್ರೋಣ**:—ಆ ಮೇಲೆ ಅದಷ್ಟು ಸುಲಭ ಸಾಧ್ಯವಲ್ಲ ಪಾರ್ಥ. ಏಕೆಂದರೆ ರಾಜ್ಯತಂತ್ರವು ಅಂತಹದು. ನೀನು ಈಗ ಎಲ್ಲರಂತೆ ಇರುವೆ. ವ್ಯಕ್ತಿ ಸ್ವಾತಂತ್ರ್ಯವಿದೆ. ಮತ್ತೆ ಹಾಗಲ್ಲ; ಜನಸಮುದಾಯದ ಪ್ರತಿನಿಧಿಯಾಗುವೆ. ವ್ಯಕ್ತಿಸ್ವಾತಂತ್ರ್ಯವನ್ನು ಕಳೆದುಕೊಳ್ಳುವೆ.

**ಪಾರ್ಥ**:—ಹುಂ . . . .

**ದ್ರೋಣ**:—ಸಿಂಹಾಸನವನ್ನೇರಿದ ಮೇಲೆ ತನ್ನಂತೆಯೆ ಇನ್ನೊಬ್ಬ ರಾಜನು ಕಾಣಿಸುವನು. ಆಗ ಅವನ ಹಿಂದೊಂದು ಜನಪದ. ನಿನ್ನ

ಹಿಂದೊಂದು ಜನಾಂಗ. ನೀನು ನಿನ್ನ ಬೆಂಬಲಕ್ಕನುಕೂಲವಾಗಿ ವರ್ತಿಸ ಬೇಕಾಗುವುದು. ಅವನು ಅವನದಕ್ಕನುಸಾರ ವರ್ತಿಸಬೇಕಾಗುವುದು.

**ಪಾರ್ಥ**:—ಹೌದು ಗುರುಗಳೆ! ನಿಮ್ಮ ಅರ್ಥ ತಿಳಿಯಿತು. ದೋಣಿಯಲ್ಲಿ ಹತ್ತು ಜನರಿರುವಾಗ ಅವರು ಹೇಳಿದಲ್ಲಿಗೆ ನಡೆಯಿಸ ಬೇಕಾಗುತ್ತದೆ. ಒಬ್ಬನಾದರೆ ಗುರಿಯೆಲ್ಲಿಯೋ ಅಲ್ಲಿಗೆ ನಡೆಯಿಸಿದರೆ ಸರಿ.

**ದ್ರೋಣ**:—ಹೌದು, ಹಾಗೆಯೆ ಪಾರ್ಥ! ಇದೇ ನಿಮ್ಮ ರಾಜ್ಯ ತಂತ್ರಜ್ಞಾನದ ಪ್ರಥಮ ಪರೀಕ್ಷಾ ಕಾಲ.

**ಪಾರ್ಥ**:—ಯಶಸ್ವಿಯಾಗಿ ತೇರ್ಗಡೆ ಹೊಂದುವಂತೆ ಹರಸು ಗುರುದೇವ.

**ದ್ರೋಣ**—ಮಕ್ಕಳೆ, ಎದೆ ಕರಗಿ ಕಣ್ಣೀರು ಸುರಿಯುತ್ತಿದೆ ಮಕ್ಕಳೆ!

**ಪಾರ್ಥ**:—ಹರಸಿರಿ ಗುರುಗಳ.

**ದ್ರೋಣ**:—ಬರಿಯ ನಿರರ್ಥಕ ಪದದಿಂದ ಹರಸುವುದಿಲ್ಲ; ಕರ್ತವ್ಯ ನಿರ್ದೇಶದೊಡನೆ ಹರಸುತ್ತೇನೆ.

**ಪಾರ್ಥ** —ಅನುಗ್ರಹಮಾಡಿ ಗುರುಗಳೆ.

**ದ್ರೋಣ**:—ಇಷ್ಟೆಲ್ಲಾ ಬೋಧನೆ ಮಾಡಿದೆನಲ್ಲ! ಅದು ನಿಮ್ಮೆದೆ ಯನ್ನು ನಾಟಿದೆಯೆಂಬುದಕ್ಕೆ ನಿದರ್ಶನ ಕೊಡಿರಿ.

**ಪಾರ್ಥ**:—ಯಾವ ರಾಜ್ಯಕ್ಕೆ ದಾಳಿಯಿಡಲಿ?

**ದ್ರೋಣ**:—ನನ್ನ ಗುರುಗಳು ಹೇಳಿದ ರಾಜ್ಯಧರ್ಮದ ರಹಸ್ಯ ಗಳನ್ನು ನಿಮಗೆ ಬೋಧಿಸಿದ್ದೇನೆ. ಅವೇ ರಾಜತೆಯ ಅಂಗಾಂಗಗಳು.

**ಪಾರ್ಥ**:—ಸಂದೇಹವೇನು? ತಮ್ಮ ಆತ್ಮವನ್ನೆ ಕಾಸಿ ಕರಗಿಸಿ ನಮ್ಮೆದೆಗೆ ಎರೆದಿದ್ದೀರಿ.

**ದ್ರೋಣ:**—ಆ ಅಂಗಗಳನ್ನು ಸೇರಿಸಿ ಒಂದು ಪ್ರತಿಮೆಮಾಡಿರಿ.

**ಪಾರ್ಥ:**—ಹೌದು, ಕಾರ್ಯದ ಪ್ರತಿಮೆ!

**ದ್ರೋಣ:**—ಹಾಗೆಯೆ ಸರಿ. ಅವುಗಳನ್ನೆಲ್ಲಾ ಅಚ್ಚಿರಿದು ರಾಜಧರ್ಮದ ಸಂಪೂರ್ಣ ಮೂರ್ತಿಯೊಂದನ್ನು ನನ್ನ ಕಣ್ಣೆದಿರಲ್ಲಿ ತೋರಿಸಿರಿ.

**ಪಾರ್ಥ:**—(ಆಲೋಚನಾಪರನಾಗಿ) ಹುಂ . . . .

**ದ್ರೋಣ:**—ಅಥವಾ ಈಗ ನಿಮ್ಮ ಕಣ್ಣೆದಿರಲ್ಲಿರುವ ಪ್ರತಿಮೆಗಳಲ್ಲಿ ಏನಾದರೂ ಒಡಕುಗಳಿದ್ದರೆ ಅವುಗಳನ್ನು ತಿದ್ದಿ ಸರಿಪಡಿಸಿರಿ!

**ಪಾರ್ಥ:**—ಅರ್ಥವಾಯಿತು ಗುರುದೇವ!

**ದ್ರೋಣ:**—ಇದೇ ನೀವು ಕೊಡಬೇಕಾದ ಗುರುದಕ್ಷಿಣೆ.

**ಪಾರ್ಥ:**—ಪಾಂಚಾಲ ದೇಶಕ್ಕೆ ದಾಳಿಯಿಡುತ್ತೇವೆ ಗುರುರಾಜ.

**ದ್ರೋಣ:**—ಏಕೆ?

**ಪಾರ್ಥ:**—ಅವನು ಪ್ರಜಾಪೀಡಕನೆಂದು ಕೇಳಿದ್ದೇವೆ.

**ದ್ರೋಣ:**—ನಿಮ್ಮ ಸ್ವತಂತ್ರ ವಿವೇಕವನ್ನು ಪ್ರಯೋಗಿಸಿರಿ.

**ಪಾರ್ಥ:**—ಹೌದು ಗುರುದೇವ! ಅದು ರಾಜ ಧರ್ಮದ ವಿಕೃತ ಮೂರ್ತಿ. ನೀನು ಹೇಳಿದಂತಿಲ್ಲ. ರಾಕ್ಷಸ ರೂಪವಿದೆ ಆ ಧರ್ಮಕ್ಕೆ.

**ದ್ರೋಣ.**—ಅದನ್ನು ನಿಷ್ಕರ್ಷಿಸುವ ಅಧಿಕಾರ ನಿಮಗೆ!

**ಎಲ್ಲರೂ:**—ಹಾಗೆಯೇ ಸರಿ; ಪಾಂಚಾಲ ರಾಜ್ಯಕ್ಕೆ ಸಾಗಿ ನಡೆಯುವೆವು.

**ದ್ರೋಣ:**—ಶಿಷ್ಯರೆ! ಯಾರಿಗೆ ಈ ಉಚ್ಚ ಭಾವನೆಯುಂಟೋ ಅವರೇ ಹೋಗಿರಿ.

**ಎಲ್ಲರೂ:**—ಎಲ್ಲರಿಗೂ ಇದೇ ಸಮ್ಮತ.

**ದ್ರೋಣ:**—ಎಲ್ಲರೂ ಒಂದಾಗಿ ಹೋಗುವುದು ಉಚಿತವಲ್ಲ. ನಿಮ್ಮ ಶಕ್ತಿಯನ್ನು ಬೇರೆ ಬೇರಾಗಿ ಪರೀಕ್ಷಿಸಬೇಕು.

**ಎಲ್ಲರೂ:**— ಬೇರು ಬೇರನ್ನೂ ಪರೀಕ್ಷಿಸಿರಿ ಗುರುದೇವ.

**ದ್ರೋಣ:**— ಹಾಗಾದರೆ ಮೊದಲು ಅಭಿಯೋಗಮಾಡುವವರು ಯಾರು?

**ದುರ್ಯೋಧನ:**— ನಾನು ಗುರುದೇವ!

**ದ್ರೋಣ:**— ನೀನೆ ಆಗಬೇಕೆಂದೇನು?

**ದುರ್ಯೋಧನ:**— ಮತ್ತೇನೂ ಇಲ್ಲ. ನಾನು ಹಿರಿಯಣ್ಣನ ಮಗ. ಇವರು ತಮ್ಮನ ಮಕ್ಕಳು. ನನ್ನ ರಾಜ್ಯತಂತ್ರ ಜ್ಞಾನವನ್ನು ಪರೀಕ್ಷಿಸುವ ಕಾಲ ಬೇಗನೆ ಬರುವುದು. ಆದುದರಿಂದ . . . .

**ದ್ರೋಣ:**—(ಆತ್ಮ) ಮೊಳಕೆಯಲ್ಲೆ ಇಂತಹ ಮತ್ಸರ! (ಪ್ರಕಾಶ) ನಿನ್ನ ಅಭಿಯೋಗವು ವಿಫಲವಾದರೆ? . . . .

**ದುರ್ಯೋಧನ:**— ಹಾಗಾಗದು. ಆದರೆ ತಮ್ಮ ಪಾದಮೂಲ ದಲ್ಲಿ ಕುಳಿತು ಮತ್ತೂ ಕಲಿಯುತ್ತೇನೆ. ನಾನು ಅಕೃತಾರ್ಥನಾದರೆ ಪಾಂಡವರು ತೆರಳಲಿ!

**ದ್ರೋಣ:**— ನಿಮ್ಮ ಅಭಿಮತವೇನು ಪಾಂಡವರೆ? . . . .

**ಧರ್ಮಜ**— ದುಯೋರ್ಧನನಿಗೆ ಆ ಮರ್ಯಾದೆ ಸಂದು ಹೋಗಲಿ!

**ಪಾರ್ಥ:**— ದುರ್ಯೋಧನನು ಈ ಕಾರ್ಯವನ್ನು ಕೈಕೊಂಡು ಜಯಿಸಿದರೆ ಚೆನ್ನಾಯಿತು. ಈ ವಿಶಾಲ ಪ್ರಪಂಚದಲ್ಲಿ ಎಷ್ಟು ದುರ್ನೃಪರಿಲ್ಲ? ಅವರಲ್ಲಿಗೆ ದಾಳಿಯಿಡುವೆವು.

**ದ್ರೋಣ:**— ಮಕ್ಕಳೆ! ಇದೇ ನಿಮ್ಮ ಪರೀಕ್ಷಾ ಕಾಲ. ಇಂತಹ ಪ್ರಸಂಗದಿಂದಲೇ ನಿಮಗೆ ಪ್ರಪಂಚಾನುಭವವಾಗಬೇಕು. ನಾನು ಇದಿರಲ್ಲಿಯೆ ಕುಳಿತಿರುವಾಗ ನಿಮಗೆ ಗುರಿತಪ್ಪಿ ಹೋಗುವ ಭೀತಿಯಿಲ್ಲ; ತಪ್ಪಿದರೆ ಎಚ್ಚರಿಸಿ ಹೇಳುತ್ತೇನೆ. ಈ ಹೋರಾಟವು ಚಿಕ್ಕದು ಮಕ್ಕಳೆ! ಮುಂದೆ ಇದಕ್ಕಿಂತ ಸಾವಿರ ಪಾಲು ಕಠಿನ ಪ್ರಸಂಗ ಬಂದರೆ ಸಾವಿರ

ಮುಂದಿ ದ್ರೋಣರಿದ್ದರೆಂದು ಅವರೆಲ್ಲಾ ನಿಮಗೆ ಗುರುಗಳಾಗಿದ್ದರೆಂದೂ ಭಾವಿಸಿ ಶಸ್ತ್ರಧಾರಿಗಳಾಗಿ ಕೆಳಕ್ಕೆ ದುಮುಕಿರಿ ಮಕ್ಕಳೆ! ನಿಮಗೆ ಯಶಸ್ಸು ದೊರೆಯುವುದು.

**ಪಾರ್ಥ**:— ಧನ್ಯರಾದೆವು.

---

## ಮೂರನೆಯ ದೃಶ್ಯ.

[ದ್ರೋಣನ ಕುಟೀರ. ಒಬ್ಬನೇ ಕುಳಿತಿರುವನು.]

**ದ್ರೋಣ**:— ಎಂತಹ ಅವಿವೇಕವನ್ನು ಮಾಡಿದೆ ನಾನು? ಹಣ್ಣಾವುದು? ಕೆಂಡವಾವುದು? ಎಂದು ತಿಳಿಯದ ಬಾಲಕರಿಗೆ ಬೆಂಕಿಯಲ್ಲಾಡುವುದನ್ನು ಕಲಿಸಿಬಿಟ್ಟೆ. ದ್ರುಪದನಲ್ಲಿ ನನಗೆ ದ್ವೇಷವಿದ್ದರೆ ಅದು ಅಂದೆ ತೀರಿ ಹೋಗಬೇಕಾಗಿದ್ದಿತು. ಅಂದು ರಾಜಸಭೆಯಲ್ಲಿ ಈ ಬ್ರಾಹ್ಮಣನನ್ನು ಅವಮಾನಿಸುವುದಕ್ಕೆಂದು ಕೈಗೆ ಸಂಕಲೆಯನ್ನು ಬಿಗಿಸಿದಾಗ, ಆ ಕ್ಷತ್ರಿಯನ ಮುಂದೆ, ಅಭಿಮಾನದ ಪಿಂಡದ ಮುಂದೆ— ಅದನ್ನು ಮುರಿದು ಸೈನಿಕರನ್ನು ಕಾಲಿಂದೊದೆದು ಹೊರಟು ಬರಲಿಲ್ಲವೆ ನಾನು? ರಾಜದರ್ಪದಿಂದ ಪೊಟ್ಟಳಿಸುತ್ತಿದ್ದ ಆ ದ್ರುಪದನಿಗೆ ಇದೇ ತಕ್ಕ ಪುರಸ್ಕಾರವಾಗಿದ್ದಿತಲ್ಲವೆ? ಅದಕ್ಕಿಂತ ಹೆಚ್ಚಿನ ಅಪಮಾನ ಯಾವುದಿದ್ದಿತು? ಬ್ರಾಹ್ಮಣನಾಗಿ, ರಾಜ್ಯತಂತ್ರ ಬೋಧಕನಾಗಿ, ರಾಜಗುರುವಾಗಿ, ಶಾಂತಿಸ್ಥಾಪಕನಾಗಿ, ಮಾಡಲಾಗದ ಕೆಲಸವನ್ನು ಮಾಡಿದೆನಲ್ಲವೆ? ಈ ರಾಜಕುಮಾರರಿಗೂ ದ್ರುಪದ ವಂಶಕ್ಕೂ ಯಾವ ದ್ವೇಷವೂ ಇರಲಿಲ್ಲ. ದ್ರುಪದನು ದುರ್ಜನನೆಂಬುದೇನೋ ನಿಜ. ಆದರೆ ಅದಕ್ಕೆ ಈ ತೆರದ ಶಾಸ್ತಿಯೆ? ಇದರಿಂದಾಗುವ ಘೋರ ವಿದ್ವೇಷವು ಇನ್ನೆಲ್ಲಿ ಅವಸಾನ ಹೊಂದುವುದೋ? ಹೊಳೆಯ ಪ್ರವಾಹದಲ್ಲಿ ತೇಲುವ ಹಡಗುಗಳೆರಡು ದೂರವಾಗಿರುವುದೆ ಒಳ್ಳಿತು. ಒಂದಕ್ಕೊಂದು ತಾಗಿದರೆ— ಹಾಯಿಯೋ ಅದರ ಬಳ್ಳಿಯೋ ಕೂವಕಂಬವೊ ಒಂದೊಂದರಲ್ಲಿ ಸಿಲುಕಿಕೊಂಡು ಬಿಡಿಸುವುದಕ್ಕೆ ಸರ್ವಥಾ ಅಸಾಧ್ಯ

ವಾಗಿ ಒಂದು ಇನ್ನೊಂದನ್ನು ಮುಳುಗಿಸಿ ಬಿಡುವುದು. ಯಾವ ಹುಟ್ಟಿನಿಂದಲೂ ಅವುಗಳನ್ನು ದಡಹಾಯಿಸಲು ಸಾಧ್ಯವಿಲ್ಲ. ಈ ಎರಡು ರಾಜವಂಶಗಳ ಘರ್ಷಣವು ಹೇಗಾಗುವುದೋ ಏನೋ! ನನ್ನ ಮನಸ್ಸು ಈ ವಿಷಯದಲ್ಲಿ ತಳಮಳಿಸುತ್ತಿದೆ. ಸಾಲದು; ನನ್ನ ಅನುಭವವಿನ್ನೂ ಸಾಲದು; ಆಚಾರ್ಯಪದವಿಗೆ ಇನ್ನೂ ಯೋಗ್ಯತೆ ಬರಲಿಲ್ಲ ನನಗೆ! ಆಹಾ! ಇದರೊಳಗೆ ಇನ್ನೆಂತಹ ದ್ವೇಷಾಂಕುರಗಳು ಮೊಳೆಯಲುಂಟೊ, ಬಲ್ಲವರಾರು? ದ್ರುಪದ ನಗರಕ್ಕೆ ಅಭಿಯೋಗ ಮಾಡುವಾಗಲೆ ಪಾಂಡವ ಕೌರವರಲ್ಲಿ ಸ್ಪರ್ಧೆಯಿದ್ದಿತು. ಪಾಂಡವರು ವಿನೀತರಾದುದರಿಂದ ಮೊದಲನೆಯ ಬಾರಿಯನ್ನು ಕೌರವರಿಗೆ ಕೊಟ್ಟರು. ಹಾಗಲ್ಲದಿರುತಿದ್ದರೆ— ನನ್ನ ಕಣ್ಣ ಮುಂದೆ ಈ ರಾಜಪ್ರರೋಹಗಳು ಒಂದರ ಮೇಲೆ ಇನ್ನೊಂದು ಹಾರಿ ರಕ್ತದ ಕಾಲುವೆಯನ್ನು ಹರಿಸುತ್ತಿದ್ದುವು. ಎಂತಹ ಭೀಕರ ಗುರುದಕ್ಷಿಣೆಯು ದೊರೆಯುತ್ತಿದ್ದಿತು ನನಗೆ! ನಾನು ಕಲಿಸಿದ ಪಾಠವು ಇನ್ನೆಲ್ಲಿ ಪ್ರಲಯದಲ್ಲಿ ಪರಿಣಾಮಹೊಂದುವುದೋ ಪರಮಾತ್ಮನೊಬ್ಬನೇ ಬಲ್ಲ. ವಿದ್ಯಾವ್ಯವಸಾಯವು ಭೇದಬುದ್ಧಿಯನ್ನು ಕಿತ್ತೊಗೆಯಬೇಕು. ದ್ವೇಷದ ಕಂಟಕಗಳನ್ನು ಕಿತ್ತೊಗೆಯಬೇಕು. ನಾನು ನೀನೆಂಬ ಅಹಂಕಾರವನ್ನು ಹೋಳಬೇಕು; ಸೀಳಬೇಕು. ಆದರೆ ನನ್ನಲ್ಲಿ ಅಂಥ ಸ್ಥೈರ್ಯೆ ಇನ್ನೂ ಆಗಲಿಲ್ಲ .... ಆಗಲಿ .... ತಪ್ಪು ಮಾಡಿದ ಮೇಲೆ ಅದನ್ನು ಒಪ್ಪಿಕೊಂಡು ಅದರಿಂದಾದ ದುಷ್ಪರಿಣಾಮಗಳನ್ನು ಪರಿಹರಿಸುವುದೇ ಪ್ರಾಯಶ್ಚಿತ್ತ. ನನ್ನ ಕುರುಡುಬುದ್ಧಿಯ ಪರಿಣಾಮವಾಗಿ ಉಂಟಾದ ಈ ಹಗೆಯನ್ನು ಹೇಗಾದರೂ ನಂದಿಸಲು ಪ್ರಯತ್ನಿಸುತ್ತೇನೆ. ಈ ಎರಡು ಪ್ರಬಲ ರಾಜವಂಶಗಳ ಹೃದಯವನ್ನು ಯಾವುದಾದರೊಂದು ಬಂಧುತ್ವದಿಂದ ಕಟ್ಟಿಬಿಡುತ್ತೇನೆ. ಛೆ! ಇದೂ ಸಂಭವಕ್ಕಿಂತ ಮುಂದಾಗಿ ಹರಿವ ಮರುಳುಬುದ್ಧಿ! ಅಲ್ಲಿ ಏನೆಲ್ಲಾ ಆಗಿರುವುದೋ ಬಲ್ಲವರಾರು? .... ಎಷ್ಟೆಂದರೂ ಮಕ್ಕಳಲ್ಲವೆ? ಪೌರುಷಕ್ಕೂ ಒಂದು ಪ್ರಾಯವುಂಟು .... ಅದು ಬರಬೇಕು .... ಮತ್ತೆ ನಂಬಬಹುದದನ್ನು!

[ಅಷ್ಟರಲ್ಲಿ ಧನುರ್ಧಾರಿಯಾಗಿ ಕೈಯಲ್ಲೊಂದು ರತ್ನಕಿರೀಟವನ್ನು ಹಿಡಿದ ಅರ್ಜುನನ ಪ್ರವೇಶ.]

**ಪಾರ್ಥ**·—(ದ್ರೋಣನ ಪಾದದ ಮೇಲೆ ಬಿದ್ದು) ಗುರುದೇವ! ಮನ್ನಿಸು . . . . ವಿಲಂಬವಾಯಿತು.

**ದ್ರೋಣ**:—(ಆತ್ಮ) ಏನನಾಹುತ ಮಾಡಿದ! ಈ ಶೂನ್ಯ ಕಿರೀಟವನ್ನು ನೋಡುವಾಗ ಜೀವವು ತಲ್ಲಣಗೊಳ್ಳುತ್ತದೆ. (ಪ್ರಕಾಶ) ಅರ್ಜುನ, ಏನಿದು?

**ಪಾರ್ಥ**:— ದ್ರುಪದನ ಕಿರೀಟ, ಗುರುಗಳೆ!

**ದ್ರೋಣ**:—ಬರಿಯ ಕಿರೀಟ!

**ಪಾರ್ಥ**:— ಹೌದು ಗುರುಗಳೆ! ನಿಮ್ಮ ರಾಜಧರ್ಮ ಬೋಧನೆಯ ಫಲವಾಗಿ ಈ ಕಿರೀಟವು ಬರಿದಾಗಿ ಬಿದ್ದಿದೆ ಕಾಲಬುಡದಲ್ಲಿ! (ಎಂದು ದ್ರೋಣನ ಪಾದತಲದಲ್ಲಿಡುವನು.)

**ದ್ರೋಣ**:— ರಕ್ತಮಯ ಕಿರೀಟವಿದು!

**ಪಾರ್ಥ**:—ಇಲ್ಲ ಗುರುದೇವ! ಕೊಲೆಮಾಡಲಿಲ್ಲ.

**ದ್ರೋಣ**:—(ನಿಟ್ಟುಸಿರು ಬಿಟ್ಟು ಆತ್ಮಗತವಾಗಿ) ಬದುಕಿದೆ. ದ್ರುಪದ ನಿನ್ನೂ ಜೀವಿಸುತ್ತಿದ್ದಾನೆ! (ಪ್ರಕಾಶ) ಹಾಗೆಂದರೇನು ಅರ್ಜುನ? ರಕ್ತವರ್ಣದಿಂದ ತಳತಳಿಸುತ್ತಿದೆ ಇದು.

**ಪಾರ್ಥ**:— ಇದರಲ್ಲಿ ಕಾಣುವುದು ರಕ್ತವಲ್ಲ. ನವರತ್ನ ಕಾಂತಿ. ಇದು ದ್ರುಪದ ಕಿರೀಟ. ರಾಜಕಿರೀಟವಾದ ಕಾರಣ ಅದಕ್ಕೆ ರಕ್ತವರ್ಣ ಬಂದಿದೆ. ಈ ಕಿರೀಟರತ್ನಗಳಿಗೆ ಬಡಜನರ ರಕ್ತಹೀರಿ ಈ ಬಣ್ಣ ಬಂತು ಗುರುಗಳೆ. ಆದುದರಿಂದ ಇದು ರಕ್ತಮಯವಾಗಿರುವಂತೆ ಭಾಸವಾಗುತ್ತದೆ ನಿಮಗೆ.

**ದ್ರೋಣ**:— ಶಹಭಾಸ್ ಅರ್ಜುನ!

**ಪಾರ್ಥ**:— ನಿಮ್ಮ ಉಪದೇಶದ ಅರ್ಥವು ಹೀಗಾಯಿತು, ಗುರುಗಳೆ. ಯಾರು ಪ್ರಜಾಪೀಡಕರೋ ಅವರ ರಾಜತ್ವವು ನೆಲಸಮವಾಗ

ಬೇಕೆಂದು ಹೇಳಿದ್ದೀರಿ. ಇಂದು ದುಪ್ರದನ ಕಿರೀಟದ ಅವಸ್ಥೆ ಅದಾಯಿತು.

**ದ್ರೋಣ**:—ರಾಜತ್ವವೆಂದರೆ ಹೀಗೆಯೆ, ಅರ್ಜುನ!. . . . ನೀವು ಹೆರವರಿಗೆ ಇಂತಹ ಪಾಠ ಕಲಿಸುವುದು ಮಾತ್ರವಲ್ಲ. ನೀವೂ ಇದನ್ನರಿತು ಆಚರಿಸಬೇಕು.

**ಪಾರ್ಥ**:—ಇದರಲ್ಲಿ ಸಂದೇಹವೇನು?

**ದ್ರೋಣ**:—ಗುರುದಕ್ಷಿಣೆ ಸಂದಿತು ಅರ್ಜುನ! ಆದರೆ ದುರ್ಯೋಧನಾದಿಗಳನ್ನು ಕಾಣೆನಲ್ಲಾ! ಅವರೆಲ್ಲಿ?

**ಪಾರ್ಥ**:—(ನಿಟ್ಟುಸಿರು ಬಿಟ್ಟು) ಮತ್ತೆಲ್ಲಿ ಗುರುಗಳೆ? ಸೆರೆಮನೆಯಲ್ಲಿ!

**ದ್ರೋಣ**:—ಅವರನ್ನು ಬಿಟ್ಟು . . . .

**ಪಾರ್ಥ**:—ಇಲ್ಲ; ಬಿಟ್ಟುಬರಲಿಲ್ಲ. ಗುರುದಕ್ಷಿಣೆಯನ್ನು ಸಲಿಸಿ ಅವರನ್ನು ಸೆರೆಬಿಡಿಸಬೇಕೆಂದು ಓಡಿಬಂದೆ.

**ದ್ರೋಣ**:—ಅರ್ಜುನ! ನನ್ನನ್ನು ಆಲಿಂಗಿಸು (ಎಂದು ಆಲಿಂಗಿಸುವನು) ನಿನ್ನ ಸಹೋದರರೆಲ್ಲಿ?

**ಪಾರ್ಥ**:—ಅವರಿಗಿನ್ನೂ ಯುದ್ಧತೃಷ್ಣೆ ಮುಗಿಯಲಿಲ್ಲ . . . .

**ದ್ರೋಣ**:—ಹಾಗೆಂದರೆ? . . . .

**ಪಾರ್ಥ**:—ಕೌರವರ ಸೆರೆಯನ್ನು ಬಿಡದಿದ್ದರೆ ಪಾಂಚಾಲ ರಾಜ್ಯವನ್ನು ವಿಧ್ವಂಸಮಾಡುವುದಾಗಿ ಚಲತೊಟ್ಟು ಅಲ್ಲಿಯೆ ಸಶಸ್ತ್ರರಾಗಿ ನಿಂತಿದ್ದಾರೆ.

**ದ್ರೋಣ**:—ಕೌರವರನ್ನೂ ಕರೆದುತಂದಿದ್ದರೆ ಗುರುದಕ್ಷಿಣೆ ಮತ್ತಷ್ಟು ಪ್ರಶಸ್ತವಾಗುತ್ತಿದ್ದಿತು . . . .

**ಪಾರ್ಥ**:—ಗುರುಗಳೆ! ಅಪ್ಪಣೆ ಕೊಡಿರಿ . . . . ಈಗಲೆ ಕರೆತರುತ್ತೇನೆ.

[ಅಷ್ಟರಲ್ಲಿ ಇತರ ಪಾಂಡವರ ಮತ್ತು ದ್ರುಪದನ ಪ್ರವೇಶ,]

**ದ್ರುಪದ:**—ಭಾರದ್ವಾಜ, ಇದೋ ದ್ರುಪದನ ನಮಸ್ಕಾರಗಳು! (ಎಂದು ಸಾಷ್ಟಾಂಗ ನಮಸ್ಕಾರ ಮಾಡುವನು. ಪಾಂಡವರೂ ಪ್ರಣಾಮ ಮಾಡುವರು.)

**ದ್ರೋಣ:**—ಮಹಾರಾಜ . . . . ನಿನ್ನ ಸೇವಕರು ನಾವು . . . . ನಿನಗೆ ನಮ್ಮ ಪ್ರಣಾಮಗಳು ಮೊದಲು ಸಲಬೇಕು.

**ದ್ರುಪದ:**—ಇದರಲ್ಲಿ ಮೊದಲು ಮತ್ತೆ ಎಂಬ ಕಾಲಭೇದವಿಲ್ಲ. ಪೂಜ್ಯತೆ ಇರುವಲ್ಲಿಗೆ . . . .

**ದ್ರೋಣ:**—(ಆತ್ಮ) ಈತನು ಪಶ್ಚಾತ್ತಾಪ ಪರಿಶುದ್ಧನಾಗಿದ್ದಾನೆ. (ಪ್ರಕಾಶ) ನೃಪೋತ್ತಮ! ನನ್ನನ್ನು ಲಜ್ಜೆಪಡಿಸಬೇಡ!

**ದ್ರುಪದ:**—ಇಲ್ಲ ಗೆಳೆಯನೆ! ಲಜ್ಜೆಪಡಿಸಲು ಹೇಳಿದ ಮಾತಲ್ಲ ಇದು. ಅಥವಾ ನಿನ್ನಂಥ—ಪರಹಿತಕ್ಕಾಗಿ ದೇಹವನ್ನು ಸವೆಯಿಸುವವರಿಗೆ ತಕ್ಕ ಪುರಸ್ಕಾರ ಕೊಟ್ಟರೆ, ಅವರು ಕೊಂಡರೆ, ಅದು ಲಜ್ಜಾಸ್ಪದವಲ್ಲ.

**ದ್ರೋಣ:**—ಬೀಳುಗುಡಿಸಲು ನಮ್ಮದು, ರಾಜಯೋಗ್ಯವಾದ ಯಾವ ಸತ್ಕಾರ ಮಾಡಲೂ ಬೇಕಾದ ಅನುಕೂಲತೆಯಿಲ್ಲ, ಪ್ರಭು! ಆದರೂ ನನ್ನ ಮೇಲೆ ಅಭಿಮಾನವಿಟ್ಟು ಈ ದರ್ಭಾಸನದ ಮೇಲೆ ಕುಳಿತುಕೊ . . . .

**ದ್ರುಪದ:**—ಹಾಗೆಯೆ ಆಗಲಿ . . . . (ಎಂದು ಕುಳಿತುಕೊಳ್ಳುವನು.)

**ದ್ರೋಣ:**—ಮಹಾರಾಜ! ನನ್ನ ಅಂತೇ ವಾಸಿಗಳು ನಿಷ್ಕಾರಣವಾಗಿ ತೊಂದರೆ ಕೊಟ್ಟರು ನಿನಗೆ.

**ದ್ರುಪದ:**—ಇಲ್ಲ. ಗೆಳೆಯನೆ ಇಲ್ಲ . . . . ಅವರು ಶುದ್ಧ ಕ್ಷತ್ರಿಯ ವಂಶದಲ್ಲಿ ಹುಟ್ಟಿದವರು . . . . ಜನ್ಮಕ್ಕೆ ತಕ್ಕಂತೆ ಆಚರಿಸಿದರು.

**ದ್ರೋಣ:**— ಹಾಗಲ್ಲ ಪ್ರಭು! ನನ್ನ ಸ್ವಾರ್ಥಸಾಧನೆಯ ಆಟ ದಲ್ಲಿ ಅವರು ಬರಿಯ ಬೊಂಬೆಗಳು.

**ದ್ರುಪದ:**— ಹಾಗೆನ್ನಬಾರದು.

**ದ್ರೋಣ:**— ಹಾಗೆಂದರೇನು? ಎಷ್ಟೋ ತತ್ವಗಳನ್ನು ಆಡ ಬಹುದು. ರಾಜಧರ್ಮವನ್ನು ಬೋಧಿಸಬಹುದು. ಆದರೆ ಹೊಟ್ಟೆಗೆ ಹಸಿವೆಯಾಗದೆ ಇರುವುದಿಲ್ಲ.

**ದ್ರುಪದ:**— ಅದೇ ಈ ಲೋಕವನ್ನು ಪ್ರಲಯತಾಂಡವದಲ್ಲಿ ಕುಣಿಯಿಸುವ ಅದ್ಭುತ ಶಕ್ತಿ.

**ದ್ರೋಣ:**— ಹೌದು; ಆದರೂ ಹೊಟ್ಟೆಗಾಗಿ ಹೋರಾಡುವುದು ಕಷ್ಟ, ಪ್ರಭುವೆ! ನಮಗಿರುವುದು— ನಮ್ಮ ಜಾತಿಗಿರುವುದು, ಏನು? ದ್ರವ್ಯಸಂಪತ್ತಿಯಿಲ್ಲ ಪ್ರಭು! ಬ್ರಾಹ್ಮಣರಾದವರು ಬಡಕುಟುಂಬ ಗಳಲ್ಲೆ ಹುಟ್ಟಬೇಕೆಂದು ವಿಧಿನಿಯಮ.

**ದ್ರುಪದ:**— ರಾಜಸಂಪತ್ತು ಅವರನ್ನು ಪೋಷಿಸಬೇಕು.

**ದ್ರೋಣ:**— ಆಗಿರಬಹುದು; ಆದರೆ ಲೋಕದ ಸ್ಥಿತಿ ಹಾಗಲ್ಲ. ಇತರ ಜಾತಿಗಳಿಗೆ ಪ್ರಬಲವಾದ ದೇಹವಿದೆ. ಅದರ ಪರಿಪೋಷಕ ವಾದ ನಾನಾ ಸಂಪತ್ತಿಗಳಿವೆ. ಆ ದೇಹಕ್ಕೆ ಸಂಬಂಧಿಸಿದ ಅನೇಕ ಅನುಬಂಧಗಳು— ಸುಖಾನುಬಂಧಗಳು, ಜನ್ಮ ಮಾತ್ರದಿಂದ ದೊರೆ ಯುತ್ತವೆ. ಆದುದರಿಂದ ಅವರು ಇತರರ ಕಾಲು ಹಿಡಿದು ಉದರ ಪೋಷಣೆ ಮಾಡುವ ಸಂದರ್ಭ ಬರುವುದಿಲ್ಲ. ಬ್ರಾಹ್ಮಣರ ಮಾತು ಹಾಗಲ್ಲ.

**ದ್ರುಪದ:**— ಬ್ರಹ್ಮತೇಜವು ಇತರ ತೇಜಗಳ ಹುಟ್ಟು.

**ದ್ರೋಣ:**— ಅದೆಲ್ಲಾ ಗ್ರಂಥಗಳಲ್ಲಿ ಬರೆದಿಡಬೇಕಾದ ತತ್ವ ವಲ್ಲದೆ ಎಲ್ಲರ ಮೆಚ್ಚಿಕೆಯನ್ನು ಪಡೆವುದಿಲ್ಲ. ದೇಹಸುಖವನ್ನು ಪೋಷಿ ಸುವ ಸೌಕರ್ಯಗಳಿಲ್ಲವೆಂದಾದ ಮೇಲೆ, ಅದನ್ನು ಹೇಗಾದರೂ

ಸಂಪಾದಿಸಬೇಕು. ಆಗ ನೋಡು, ಬ್ರಾಹ್ಮಣನು ತನ್ನ ಉಚ್ಚತತ್ವಕ್ಕೆ ಮಣ್ಣೆರಚಬೇಕು.

**ದ್ರುಪದ:**—ಹೀಗಾಗದಂತೆ ಮಾಡುವುದು ರಾಜರ ಕರ್ತವ್ಯ.

**ದ್ರೋಣ:**—ಇರಬಹುದು. ಆದರೂ ಬ್ರಾಹ್ಮಣನು ಪರಪ್ರಯೋಜನಕ್ಕಾಗಿ—ತನ್ನ ಜ್ಞಾನ ವ್ಯವಸಾಯ ಮಾಡುವುದೊಂದು, ಅದರೊಡನೆ ಇಂದ್ರಿಯ ಸೇವೆಯನ್ನು ಮಾಡುವುದು ಇನ್ನೊಂದು—ಹೀಗೆ ಎರಡು ಬಗೆಯ ಸ್ವಾರ್ಥವನ್ನು ಸಾಧಿಸಬೇಕು. ಮೊದಲಿನದು ಸ್ವಾರ್ಥವಾದರೂ ಪರಾರ್ಥ; ಎರಡನೆಯದು ಹಾಗಲ್ಲ.

**ದ್ರುಪದ:**—ಒಪ್ಪಲಾರೆನು ಭಾರದ್ವಾಜ!

**ದ್ರೋಣ:**—ಜ್ಞಾನವೆಂಬ ವಸ್ತುವನ್ನು ಯಾರು ಎಲ್ಲಿ ಕಾಣುತ್ತಾರೆ? ಅದು ಸ್ಥೂಲರೂಪದ ವಸ್ತುವಲ್ಲ. ಅನುಭವ ಗಮ್ಯವಾದುದು. ಆದುದರಿಂದ ನಾವು ಬ್ರಾಹ್ಮಣರು; ಜ್ಞಾನ ದಾನ ಮಾಡುತ್ತೇವೆ, ಎಂದರೆ ಯಾರಿಗೂ ವಿಶ್ವಾಸ ಹುಟ್ಟುವುದಿಲ್ಲ. ಸಂತೆಯಿಂದ ಕೊಳ್ಳುವ ವಸ್ತುಗಳು ಪ್ರತ್ಯಕ್ಷವಾಗಿ ಕಾಣುತ್ತವೆ . . . .

**ದ್ರುಪದ:**—ದ್ರೋಣ! ನಮ್ಮನ್ನೇನು ಹಂಗಿಸುವೆಯೊ?

**ದ್ರೋಣ:**—ಇಲ್ಲ ಮಹಾರಾಜನೆ! ಇಂತಹ ನಯನಾಗೋಚರವಾದ ಜ್ಞಾನವನ್ನು ಕೊಡುತ್ತೇವೆ ನಾವು. ಆದುದರಿಂದ ನಮ್ಮ ಉದರಾಗ್ನಿಗೆ ಬೇಕಾದ ಇಂಧನಗಳನ್ನು ಹಾಕಿರಿ! ಎಂದು ಹೇಳುವ ನಾವು ಸ್ವಾರ್ಥಿಗಳೆಂದರೆ ತಪ್ಪೇನು ಮಹಾರಾಜ?

**ದ್ರುಪದ:**—ನಿಮ್ಮ ಸ್ವಾರ್ಥವು ವಿಶ್ವವ್ಯಾಪಿಯಾದುದು! ಎಂದರೆ ಪ್ರಪಂಚದ ಉಸಿರೆ ನಿಮ್ಮ ಉಸಿರು. ಅದರ ಜೀವವೆ ನಿಮ್ಮ ಜೀವ. ಆದುದರಿಂದ ನಿಮ್ಮಂಥರ ಸೇವೆ ವಿಶ್ವಸೇವೆ!

**ದ್ರೋಣ:**—ಅಯ್ಯೋ ಪ್ರಭು! ಅಂತಹ ಉಚ್ಚಸ್ಥಿತಿ ನಮಗೆಲ್ಲಿಂದ ದೊರೆಯಬೇಕು? ಆಕಾಶದಲ್ಲಿ ಚಂದ್ರನು ಥಳಥಳಿಸುತ್ತಿದ್ದರೂ ಮನಮನೆಯನ್ನು ಬೆಳಗಲು ಸಣ್ಣ ಸಣ್ಣ ಕೈದೀಪಗಳು ಬೇಕಾಗುತ್ತವೆ.

ಒಂದು ಮನೆಯ ಕತ್ತಲೆಯನ್ನು ತಣಿಸುವ ಈ ಕಿರಿಯ ಸೊಡರೊಂದು ಎಷ್ಟು ಹೆಮ್ಮೆಯನ್ನು ಪಡಬಹುದು?

**ದ್ರುಪದ:**—ಆದರೂ ಮನೆಯನ್ನು ಬೆಳಗುವ ದೀಪವೂ ಆಕಾಶ ವನ್ನು ಬೆಳಗುವ ದಿವ್ಯ ಜ್ಯೋತಿಯೂ ಒಂದೇ ತೇಜೋಮಂಡಲದಿಂದ ಬಿದ್ದ ಕಿಡಿಗಳಲ್ಲವೆ?

**ದ್ರೋಣ:**—ಮಹಾರಾಜ! ನನ್ನ ಅಪರಾಧಗಳನ್ನು—ನಿನ್ನ ಆಸ್ಥಾನದಲ್ಲಿ ತೋರಿಸಿದ ಉದ್ಧತ ವರ್ತನಗಳನ್ನು ಕ್ಷಮಿಸುವೆಯೊ?

**ದ್ರುಪದ:**—ಕ್ಷಮಾಯಾಚನೆ ಮಾಡಬೇಕಾದವನು ನಾನು. ನಾನು ಮಾಡಿದ ಅಪಮಾನ ನಿನಗಲ್ಲ. ನನ್ನ ಪ್ರಭುತ್ವಕ್ಕೆ!

**ದ್ರೋಣ:**—ನಿನ್ನ ಅಪರಾಧವೇನು ಪ್ರಭು? ನನ್ನ ಅಭಿಮಾನ ವೊಂದು ಪಾಂಚಾಲ ರಾಜ್ಯದ ಸುಖ ಶಾಂತಿಗಳಿಗಿಂತಲೂ ಅಧಿಕವೆಂದು ಬಗೆದ ನಾನೆ ಪಾಪಿ!

**ದ್ರುಪದ:**—ನನ್ನೊಬ್ಬನ ಗರ್ವವು ಭಗ್ನವಾಗಿರಬಹುದು. ಅದ ರಿಂದ ನಮ್ಮ ರಾಜ್ಯಕ್ಕಾಗುವ ಶ್ರೇಯಸ್ಸಿನ ಪ್ರಯೋಜನವೆಂಬುದು ದೊಡ್ಡ ಲಾಭವಲ್ಲವೆ?

**ದ್ರೋಣ:**—ಪರಹಿಂಸೆಯೆಂಬುದು ಪಾತಕ. ಅದನ್ನಾಚರಿಸು ವುದು ನಮ್ಮ ಧರ್ಮವಲ್ಲ.

**ದ್ರುಪದ:**—ಪ್ರಜಾಪಾಲನೆ ಮಾಡುವ ಎರಡು ವಿಧದ ಕರ್ತವ್ಯ ಗಳೂ ಅವಶ್ಯ. ದುಸ್ಸತ್ವಗಳನ್ನು ಧ್ವಂಸಮಾಡುವುದೊಂದು; ಸತ್ಸಂತಾನ ವನ್ನು ಪೋಷಿಸುವುದೊಂದು.

**ದ್ರೋಣ:**—ಧ್ವಂಸಮಾಡುವ ಪ್ರಸಂಗವನ್ನು ತಾರದೆ ಲೋಕ ವನ್ನು ತಿದ್ದುವುದೂ ನೇರ್ಪಡಿಸುವುದೂ ಬ್ರಹ್ಮಧರ್ಮ.

**ದ್ರುಪದ:**—ಆ ಮಾತು ಹಾಗಿರಲಿ! ನನ್ನನ್ನು ಕ್ಷಮಿಸು ಮಿತ್ರನೆ.

**ದ್ರೋಣ:**—ನೋಡು ನನ್ನ ಕಣ್ಣಿನಿಂದ ನೀರು ಸುರಿಯುತ್ತದೆ. ಇನ್ನಾವ ಕ್ಷಮೆ?

**ದ್ರುಪದ:**—ಆ ಕಣ್ಣೀರು ನನ್ನ ಹೃದಯವನ್ನು ತೊಳೆಯಲಿ. ನನ್ನ ಭಾವನೆಗಳನ್ನು ಶುದ್ಧೀಕರಿಸಲಿ!

**ದ್ರುಪದ:**—ಇಗೋ! ನಿನ್ನ ಕಿರೀಟ. ನನ್ನ ದುರಭಿಮಾನಕ್ಕೆ ಆಹುತಿಯಾದ ಕಿರೀಟ! ನನ್ನ ಅಭಿಮಾನದರ್ಪಗಳಿಂದ ಭಗ್ನವಾದ ಕಿರೀಟ. ಅದರ ರತ್ನಗಳೆಷ್ಟೋ ಕಳಚಿ ಬಿದ್ದಿರಬಹುದು. ನನ್ನ ಹೃದಯ ತಲದಿಂದ ಉಕ್ಕಿ ಬಂದ ಆಶೀರ್ವಾದ ರತ್ನಗಳನ್ನು ಅವುಗಳಲ್ಲಿ ಕೀಲಿಸಿ ನಿನ್ನ ಶಿರಸ್ಸಿನ ಮೇಲೆ ಇಡುತ್ತೇನೆ. ಅದನ್ನು ಧರಿಸಿಕೊ. (ಎಂದು ಕೊಡುವನು.)

**ದ್ರುಪದ:**—ಇದಕ್ಕೆ ನಾನು ಅನರ್ಹನು.

**ದ್ರೋಣ:**—ಎಂದೂ ಅಲ್ಲ.

**ದ್ರುಪದ:**—ಹುಟ್ಟುವಾಗಲೆ ತಲೆಯಲ್ಲಿ ಕಿರೀಟವು ಮಿರುಗುತ್ತಿದ್ದು, ಅದನ್ನು ಇದುವರೆಗೆ ಧರಿಸಿದ್ದು, ರಾಜಮದದಿಂದ ಕೊಬ್ಬಿದಾಗ ಅದನ್ನು ಧರಿಸುವ ಯೋಗ್ಯತಾಯೋಗ್ಯತೆಗಳನ್ನು ವಿಚಾರಿಸುವ ಪ್ರವೃತ್ತಿ ಬರಲಿಲ್ಲ. ಈಗ ಆ ಆಲೋಚನೆ ಹುಟ್ಟಿದೆ. ನನ್ನ ಮನಸ್ಸು ಅದರ ಸ್ವೀಕಾರಕ್ಕೆ ಹಿಂಜರಿಯುತ್ತದೆ.

**ದ್ರೋಣ:**—ಲೋಕದಲ್ಲಿ ಸರ್ವಗುಣ ಪರಿಪೂರ್ಣವಾದ ವಸ್ತುವಿಲ್ಲ.

**ದ್ರುಪದ:**—ವಸ್ತು ನಿರ್ಗುಣವಾಗಿದ್ದರೆ?

**ದ್ರೋಣ:**—ಇಲ್ಲದ ಗುಣವನ್ನು ಸಂಪಾದಿಸಬಹುದು.

**ದ್ರುಪದ:**—ಅಂತಹ ಸಾಮರ್ಥ್ಯವಿಲ್ಲದಿದ್ದರೆ?

**ದ್ರೋಣ:**—ಸಾಮರ್ಥ್ಯವಿಲ್ಲವೆಂದಿಲ್ಲ ಪ್ರಭು! ತನ್ನಲ್ಲಿರುವ ಗುಣಾಭಾವವನ್ನು ತಿಳಿದವನು ಮತ್ತೆ ಗುಣವಂತನಾಗಿ ಬಾಳುತ್ತಾನೆ.

**ದ್ರುಪದ:**—ಬೇಡ ದ್ರೋಣ. ಮಕುಟಾಧಿಕಾರವನ್ನು ದುರುಪಯೋಗಿಸಿದವನು ನಾನು!

**ದ್ರೋಣ:**—ಇನ್ನು ಅದರ ಸದುಪಯೋಗಮಾಡು.

**ದ್ರುಪದ:**—ಮನಸ್ಸಿಗೆ ಅಂಜಿಕೆಯಾಗುತ್ತದೆ. ಅರ್ಜುನನಿಗೆ ಕೊಡಿಸು ಅದನ್ನು!

**ದ್ರೋಣ:**—ಇದು ಭೀರುತ್ವ, ದ್ರುಪದ! ಶಕ್ತಿವಂತರೂ ಹೀಗೆ ಮಾಡಬಾರದು. ಆತ್ಮೋತ್ಕರ್ಷವನ್ನು ಬಯಸುವವರೂ ಹೀಗೆ ಮಾಡಬಾರದು. ಮಕುಟಧಾರಣದೊಡನೆ ಬರುವ ಕರ್ತವ್ಯಭಾರ ವನ್ನು ವಹಿಸುವುದಕ್ಕೆ ಹಿಂಜರಿಯಬಾರದು ಗೆಳೆಯ!

**ದ್ರುಪದ:**—ಶಕ್ತಿಯೊದಗುವ ವರೆಗೆ ಹಿಂಜರಿವುದು!

**ದ್ರೋಣ:**—ಇದು ಪ್ರಜೆಗಳ ಪ್ರೇಮಚಿಹ್ನವೆಂದು ಭಾವಿಸಿಕೊ; ಪ್ರಜಾಪಾಲನ ಕರ್ತವ್ಯದ ಚಿಹ್ನವೆಂದು ಭಾವಿಸಿಕೊ, ಇಂತಹ ಭಾವನೆ ಯಿಂದ ಇದನ್ನು ಧರಿಸಿದರೆ ಇಂದಲ್ಲ ನಾಳೆ ಶಕ್ತಿವಂತನಾಗುವೆ.

**ದ್ರುಪದ:**—ಶಕ್ತಿವಂತರು ಕಣ್ಣಮುಂದೆ ಇರುವಾಗ ಅವರೆ ವಹಿಸಬಹುದಲ್ಲ.

**ದ್ರೋಣ:**—ಅವರು ಧರಿಸುವ ಕಿರೀಟ ಬೇರೆ ಇದೆ.

**ದ್ರುಪದ:**—ಈ ಜನ್ಮದಲ್ಲಿ ಬೇಡ. ಮುಂದಿನದರಲ್ಲಿ ಧರಿಸು ವೆನು.

**ದ್ರೋಣ:**—ಪುನರ್ಜನ್ಮವೆಂದರೇನು? ಸತ್ಪುತ್ರನೆ ಪಿತನ ಪುನರ್ಜ ನ್ಮದ ಮೂರ್ತಿ. ಅಂತಹ ಪುತ್ರರತ್ನವನ್ನು ಪಡೆಯಲು ತಂದೆಯ ಹೃದಯಕ್ಷೇತ್ರದ ವ್ಯವಸಾಯವನ್ನು ಮಾಡಬೇಕು. ಆ ಮೇಲೆ ತನ್ನ ಆತ್ಮವನ್ನು ಮಗನ ಆತ್ಮದಲ್ಲಿ ಒತ್ತಬೇಕು. ಇದಕ್ಕಿಂತ ಹೆಚ್ಚಿನ ಜನ್ಮವಾ ವುದು? ಇಂತಹ ಪರಂಪರೆಯಿಂದಲೆ ಮನುಷ್ಯನ ಸಾತ್ವಿಕ ಗುಣವು ಚಿರಸ್ಥಾಯಿಯಾಗುವುದು.

**ದ್ರುಪದ:**—ನಿನ್ನ ಜನಕನಾದ ಭರದ್ವಾಜನಂತೆ ನೀನೂ ನನ್ನ ಗುರುವಾದೆ.

**ದ್ರೋಣ:**—ಹಾಗಾದರೆ ಈ ಕಿರೀಟವನ್ನು ಧರಿಸು. ಗುರ್ವಾಜ್ಞೆ ಯನ್ನು ಮೀರಬೇಡ.

**ದ್ರುಪದ:**—(ಆಲೋಚಿಸುತ್ತಾ ಸುಮ್ಮನಿರುವನು.)

**ದ್ರೋಣ:**—ನಾನೆ ಮುಕುಟವಿಡುತ್ತೇನೆ; ಸ್ನೇಹಬಾಷ್ಪದಿಂದ ಅಭಿಷೇಕ ಮಾಡುತ್ತೇನೆ.

**ದ್ರುಪದ:**—ನನ್ನ ಅಹಂಕಾರವನ್ನು ತಿದ್ದಿದೆ.

**ದ್ರೋಣ:**—ನಾನೇನೂ ತಿದ್ದಲಿಲ್ಲ. ಅದು ತಾನಾಗಿ ಪರಿಶುದ್ಧ ವಾಯಿತು.

**ದ್ರುಪದ:**—ನನ್ನ ಬಾಳನ್ನು ಬೆಳಗಿಸಿದೆ.

**ದ್ರೋಣ:**—ಅರ್ಜುನ! ಪಾಂಡವರೆ! ಇವನ ಪಾದಕ್ಕೆರಗಿರಿ.

(ಎಲ್ಲರೂ ಅಡ್ಡಬೀಳುವರು.)

**ದ್ರುಪದ**·—ಗುರುವರ್ಯ! ನಾನು ಪಾರ್ಥನೊಡನೆ ಹೋರಾಡಿ ಸೋತರೂ ಆತ್ಮಸಾಮ್ರಾಜ್ಯ ವಿಜಯವನ್ನು ನೀನು ಕರುಣಿಸಿದೆ!

**ದ್ರೋಣ**·—ದ್ರುಪದ! ಹೋಗು, ನಿನ್ನ ಪಾಂಚಾಲ ರಾಜ್ಯಕ್ಕೆ ಹೋಗು, ಸುಖವಾಗಿ ಬಾಳು.

**ದ್ರುಪದ:**—ಅಪ್ಪಣೆಯಾದಂತೆ.

**ದ್ರೋಣ:**—ಹಿಂದಿನದೆಲ್ಲಾ ವಿಸ್ಮರಣೆಯಲ್ಲಿ ಅಡಗಿಹೋಗಲಿ!

**ದ್ರುಪದ:**—ಎಲ್ಲವೂ ಮರವೆಯಲ್ಲಿ ಅಡಗಿಹೋಗುವುದೆ? ನಾವು ಮಾಡಿದ ಕೆಲಸಗಳ ಪರಿಣಾಮವು ಇಷ್ಟೆ ತಾನೆ?

**ದ್ರೋಣ**·—ನಮ್ಮ ಸ್ನೇಹವೆ—ಸ್ಮಾರಕವು.

**ದ್ರುಪದ:**—ಇದು ಆಂತರಿಕವಾದುದು.

**ದ್ರೋಣ.**—ಹೌದು, ಬಾಹ್ಯಚಿಹ್ನವು ಬೇಕು. ನಿನಗೆ ಪುತ್ರೀ ಸಂಪತ್ತು ಮುಂದೆ ಎಂದಾದರೂ ಲಭಿಸಿದರೆ ಪಾರ್ಥನಿಗೆ ಅದನ್ನೊಪ್ಪಿಸು!

**ದ್ರುಪದ:**—ಧನ್ಯನಾದೆನು!

**ದ್ರೋಣ**:—ಅರ್ಜುನಾ! ನೀನೀತನನ್ನು ಬಹಳವಾಗಿ ಪೀಡಿಸಿದೆಯಲ್ಲವೆ?

**ಪಾರ್ಥ**:—(ಕಣ್ಣೀರು ಸುರಿಸುತ್ತಾ) ಹೌದು ಗುರುಗಳೆ!

**ಯುಧಿಷ್ಠಿರ**:—ಹೌದು, ಅಪರಾಧ ಮಾಡಲು ಪ್ರಾರಂಭಿಸಿದರೆ ಅದಕ್ಕೆ ಅಂತ್ಯವಿಲ್ಲ ಗುರುಗಳೆ! ದ್ರುಪದ ರಾಜ್ಯಕ್ಕೆ ನಾವೆಲ್ಲರೂ ಅಭಿಯೋಗಮಾಡಿದುದಾಯಿತು; ಕೌರವರು ಸೆರೆಯಾದರು; ಅವರನ್ನು ಬಿಡಿಸಲೆಂದು ನಾವು ಊರೂರು ಪೀಡೆಗೊಟ್ಟೆವು; ಕೌರವರು ಬಂಧವಿಮುಕ್ತರಾಗುವ ಸಮಯಕ್ಕೆ ನಗರವೆಲ್ಲಾ ರಕ್ತಮಯವಾಯಿತು, ಗುರುಗಳೇ!

**ದ್ರುಪದ**—ಇಲ್ಲ ಮಕ್ಕಳೇ! ನಿಮ್ಮ ವೀರಕ್ರೀಡೆಗಳನ್ನು ನೋಡಿ ಆನಂದಿತನಾದೆನು. ಕ್ಷತ್ರಧರ್ಮವೆ ಅಂತಹುದು. ಅದರ ಆ ಕಡೆಯೂ ಈ ಕಡೆಯೂ ಮೃತ್ಯು! ಯಾರೇನು ಮಾಡಲಿ? ಬನ್ನಿ; ನೀವೇನೂ ತಪ್ಪು ಮಾಡಲಿಲ್ಲ. ನನ್ನನ್ನು ಬೇರೆ ಬೇರೆ ಆಲಿಂಗಿಸಿರಿ! (ಎಲ್ಲರೂ ಆಲಿಂಗಿಸುವರು.) ಮಹಾತೇಜ! ನನಗಿನ್ನು ಅಪ್ಪಣೆ ಕೊಡುವೆಯೊ?

**ದ್ರೋಣ**:—ನಮ್ಮಿಬ್ಬರ ಬೇರೆ ಬೇರೆ ಧರ್ಮಗಳು ಬೇರೆ ಬೇರೆ ಸ್ಥಳಗಳಿಗೆ ನಮ್ಮನ್ನು ಒಯ್ಯುವುವು. ಆದುದರಿಂದ ನಾವು ಅಗಲಬೇಕು.

**ದ್ರುಪದ**·—ಈಗಿನ ಅಗಲುವಿಕೆಯು ತೀವ್ರ ವೇದನೆಯನ್ನು ಕೊಡುತ್ತಿದೆ ದ್ರೋಣ!

**ದ್ರೋಣ**:—ಹೌದು, ಅಂದು ಹುಡುಗರಾಗಿದ್ದಾಗ, ಒಟ್ಟಿಗೆ ಅಭ್ಯಾಸಮಾಡಿಕೊಂಡಿದ್ದಾಗ, ನಮ್ಮಿಬ್ಬರ ಸುಖದುಃಖಗಳು ಹೇಗೆ ಹೆಣೆದುಕೊಂಡಿದ್ದುವೋ ಹಾಗೆಯೆ ಇಂದೂ.

**ದ್ರುಪದ**:—ಒಮ್ಮೆ ಪಾಂಚಾಲ ರಾಜ್ಯಕ್ಕೆ ಆಗಮನವಾಗಬೇಕು.

**ದ್ರೋಣ**:—ಅವಶ್ಯವಾಗಿಯೂ ಬರುತ್ತೇನೆ.

**ದ್ರುಪದ**:—ನನ್ನನ್ನು ಹರಸಿ ಬೀಳ್ಕೊಡು.

**ದ್ರೋಣ:**— ಹರಸುವ ಗೌರವವು ನನ್ನ ಜಾತಿಯ ಫಲ. ಪ್ರಾಯದಲ್ಲಿ, ವಿದ್ಯೆಯಲ್ಲಿ, ಬುದ್ಧಿಯಲ್ಲಿ ನಾವು ಸಮಾನರು ದ್ರುಪದ!

**ದ್ರುಪದ:**— ಪ್ರಾಯದಲ್ಲಿ ಸಮಾನರೆಂಬುದು ನಿಜ. ಹರಸು ಬ್ರಾಹ್ಮಣೋತ್ತಮ ನನ್ನನ್ನು.

**ದ್ರೋಣ:**— ನನ್ನ ಹರಕೆಯೇನು? ಹಾಡೇನು? ಪ್ರಜೆಗಳು ನೆಮ್ಮದಿ ಯಿಂದಿರಬೇಕೆಂಬುದು ಹರಕೆ. ರಾಜಧರ್ಮವು ನೀತಿ, ಶ್ರೇಯಸ್ಸು, ಎಂಬೀ ಎರಡು ದಡಗಳ ನಡುವೆ, ಅಲೆಯಿಲ್ಲದೆ ವಲಿಯಿಲ್ಲದೆ ಶಾಂತ ವಾಗಿ ಮೃದುಶಬ್ದದಿಂದ ಕಿವಿಗಿಂಪನ್ನು ಸುರಿಸುತ್ತಾ ಹರಿಯುತ್ತಿರ ಬೇಕು, ಎಂಬುದೆ ಹಾಡು.

**ದ್ರುಪದ:**— ಹಾಗೆಯೆ ಆಗಲಿ!

**ದ್ರೋಣ:**— ಅಂಥ ಧಾರ್ಮಿಕ ಪ್ರಭುತ್ವವು ಚಿರಕಾಲ ಬಾಳಲಿ! ಎಂಬುದು ಹಾರೈಕೆ.

**ದ್ರುಪದ:**— ನಾನು ಧನ್ಯನಾದೆನು! (ಎಂದಿಬ್ಬರೂ ಹೋಗುವರು.)

# ತಾಂಡವನ ಮರಣ

## ಪಾತ್ರವರ್ಗ.

**ತಾಪಸ**<br>**ತಾಪಸಿ** } — ವೃದ್ಧ ದಂಪತಿಗಳು.

**ತಾಂಡವ** — ಅವರ ಪುತ್ರನು; ಯುವಕನು.

**ದಶರಥ** — ಕೋಸಲದ ಯುವರಾಜನು.

## ದೃಶ್ಯ—ಕಾಡು

**ತಾಂಡವ**—ಇನ್ನರೆಗಳಿಗೆ ತಾತ! ಇನ್ನರೆಗಳಿಗೆಯೊಳಗೆ ಜೀವನಾಧಾರವನ್ನು ಸೇರುವೆವು. ಪರಮೇಶ್ವರನು ಕರುಣಿಸಿದಂತೆ ತೋರುತ್ತದೆ. ಬಳಿಯಲ್ಲೆ ನೀರಿನಾಶ್ರಯವು ಇರಬೇಕು. ಬೀಸುತ್ತಿರುವ ಗಾಳಿಯಲ್ಲಿ ತಂಪಿನೊಸಗೆಯ ತೆರೆಗಳು ಕಟ್ಟೆಟ್ಟ ಸುಖಸಾರದೊಂದೊಂದು ಹುರಿಯೊಡನೆ, ತೇಲಿ ಬರುತ್ತಿರುವವು. ಪರಮಪುರುಷನ ಕರುಣ ದೊರತೆಯ ನೀರಿನಾಶ್ರಯವು ಬಳಿಯಲ್ಲಿಯೇ ಇರಬೇಕು. ಸೈರಿಸಪ್ಪಾ.

**ತಾಪಸ**—ಪುತ್ರಾ, ಬಹಳ ಬಳಲಿದೆ. ನಿನ್ನ ಮುಖವನ್ನು ಕಂಡೊಡನೆ, ನನ್ನ ಆಯಾಸವು ನೀಗುವುದು, ನನ್ನ ಬಾಯಾರಿಕೆ ಆರುವುದು; ಹಸಿವು ಮಾಯುವುದು. ಸಹಿಸುವೆನು; ಸಹಿಸುವೆನು ಕಲ್ಪಕಲ್ಪಾಂತಪರ್ಯಂತಕ್ಕು. ಆದರೆ, ಈ ನಿನ್ನ ಬಡತಾಯಿ ಬಳಲಿದುದು ಮುಗಿದಿಲ್ಲ; ನೂರಾರು ಬಡಬಗ್ಗರನ್ನು, ಸಾವಿರಾರು ಅತಿಥಿಗಳನ್ನು ಎಂದೆಂದು ಮನ್ನಿಸಿದವಳಿಂದು ಹಸಿಹನಿಯ ನೀರಿಗೆ ಹಂಬಲಿಸಿ, ಘೂರ್ಣಿಸುವ ಕಾಡಿನಲ್ಲಿ ತೊರೆತೊರೆಯ ಹುಡುಕುವಂತಾಯಿತೆ? ಕಷ್ಟಪಟ್ಟವಳಲ್ಲವಿವಳು; ಆದರೆ, 'ಸಂಸಾರದಲ್ಲಿ ನೋಯಲಿದೆ, ಸವೆಯಲಿದೆ, ಸಂಕಟದಿ ಸವೆಯಲಿದೆ.'

**ತಾಂಡವ**—ಅವ್ವಾ, ನಡೆನಡೆದು ಬಳಲಿದೆ; ಬಳಬಳಲಿ ಬಾಯಾರಿದೆ; ಬಾಯಾರಿ ಬೆಂಡಾದೆ. ಈ ತನಕ ಸಹಿಸಿದಂತೆಯೆ ಗಂಟಲನ್ನು ಇನ್ನೆರಡುಗಳಿಗೆ ಆಶೆಯ ತಂಪಿಂದ ತಣಿಸು; ಈಶ್ವರನ ನೆನಪಿಂದ ಶಮಿಸು.

**ತಾಪಸಿ**—ಮಗೂ, ತಾಂಡವಾ, ನಮಗಾಗಿ ಊರಿಂದೂರಿಗೆ ಪಯಣವನ್ನು ಬೆಳೆಸಿದೆ. ನಾಡಿನ ರಾಜನಿಗೆ ಹೆದರದೆ ಕಾಡಿನ ಕಳ್ಳನಿಗೆ ಬೆದರದೆ ನಮ್ಮನ್ನು ಸಲಹಿದೆ. ಬಳಕುವ ಬಳ್ಳಿಯ ಮರೆಯಲ್ಲಿ, ನಡುಗುವ ಮರಗಳ ಅಡಿಯಲ್ಲಿ ಅಡಗಿಸಿ, ಲಾಲಿಸಿ ರಕ್ಷಿಸಿದೆ; ಹಕ್ಕಿಯ ತೆರದಲ್ಲಿ ಸಲಹಿದೆ. ಕರುಣಾ ಪೂರ್ಣನಾದ ಈಶ್ವರನು ನಿನ್ನನ್ನು ತುಂಬಿದ ಮನಸ್ಸಿನಿಂದ, ಅರಳುವ ಕಣ್ಣುಗಳಿಂದ, ಬಾಗುವ ಕೈಗಳ ಬೆರಳಿಂದ ತುಂಬಾ ಸುಖಿಸೆಂದು ಹರಸಲಿ.

**ತಾಪಸ**—ಮಗೂ, ಒಂದು ತಟಕು ನೀರನ್ನು ಹಳೆದಿನದ ತಾಯ್ತಂದೆಗಳಿಗಾಗಿ ತರುವೆಯಾ?

**ತಾಂಡವ**—ಅಪ್ಪಾ, ಕೊಂಚ ಸೈರಿಸು. ದೂರದಲ್ಲಿ ಹುಲುಸಾಗಿ ಬೆಳೆದ ಗಿಡಬಳ್ಳಿ ಹೂದಳಿರ ಬೀಸಣಿಗೆಯನ್ನು ಬೀಸಿ ಹೊರಡಿಸಿದ ತಂಗಾಳಿ, ಸುರಭಿ ಗಂಧಗಳೊಡನೆ ತೀಡುತ್ತಿದೆ. ನೀರಿನಾಶ್ರಯವು ಅಲ್ಲಿರಬೇಕು. ಕೇಳು, ತಾತ, ನಾವಲ್ಲಿ ಸೇರಿದೊಡನೆಯೆ ಎಲೆಮನೆಯ ನೆಳಲಿನಲ್ಲಿ ಕಿರಿಬುಗ್ಗೆಯೊಂದು ಉಕ್ಕಿ ಬಂದು, ನಿನ್ನ ಚರಣಯುಗಲವನ್ನು ತೊಳೆತೊಳೆದು ಮನ್ನಿಸುವುದು; ಹೂದಳಿರ ಗೊಂಚಲಿನ ಚೆಲುವಿಂದ ಮೆರೆಯುತ್ತಿರುವ ಮಾಮರನ ಗೆಲ್ಲೊಂದು ಕೆಳಬಾಗಿ ಆಸನವನ್ನೀಯುವುದು; ಕೋಗಿಲೆಯು ಸ್ವಾಗತವನ್ನಿತ್ತು, ಮಾತಿನ ಬೆಲ್ಲವನ್ನು ಕೊಟ್ಟು, ಸಂತೈಸಿ ಮಾತಾಡಿಸುವುದು. ಬಾ, ಮುಂದು ಬಾ, ಮುಂದುವರಿಯು.

**ತಾಪಸ**—ಆಹಾ! ಕೋಗಿಲೆಯು ಈ ಕಾಡಿನಲ್ಲಿಯೂ ಇರುವುದೆ? ಎಲೈ ನೃಪವಸಂತನ ರಾಣಿ, ನನ್ನ ಕಾಡಿನ ಗೆಳತಿ! ಇಲ್ಲೊವ್ವೆ

ನೀನು ಹಾಡು. ಇನ್ನೊಮ್ಮೆ ಮುದಗೊಳಿಸು. ‘ಯಾವ ಜನ್ಮದಲ್ಲಿ ಭಾಷೆಯ ಮರೆತು’, ನಾಚಿಕೆಗೆ ಬಲಿ ಬಿದ್ದು, ಮಾನವರ ಸಮ್ಮುಖದಲ್ಲಿ ಮೋರೆ ತೋರಿಸದೆ ಮರೆಯಾಗಿ ನಿಲ್ಲುವೆಯ ನೀನು? ಮರೆ ಬಿಸುಟು, ಮುಖದೋರಿ, ಪದ ಹಾಡು; ಸುಖಿಸುವೆನು ನಾನು ಪೂರ್ವದಲ್ಲಿ, ಜವ್ವನದ ಸುಗ್ಗಿಯಲ್ಲಿ, ಶೈಶವದ ಮಾಗಿಯಲ್ಲಿ, ಮತ್ತೆ ವಾರ್ಧಕದ ಕಾಲದಲ್ಲಿ ನಿನ್ನ ಗಾನದ ರಸವನ್ನು ಕುಡಿದಿದ್ದೆ; ಮರಮರದ ಹೂದ ಳಿರ ಮರೆಯಲ್ಲಿ ನೀನಡಗಿ ಹಾಡುತಿಹ ವೇಳೆ, ನಾನು ದುಃಖವನ್ನು ಮರೆತು, ಸುಖದಲ್ಲಿ ಬೆರೆಯುತ್ತಿದ್ದೆ. ನಿನ್ನ ಕಂಠಕ್ಕೆ ಮರುಳಾದ ಬೆಟ್ಟ ಗಳೊಡನೆ ತಲೆದೂಗಿ, ನಲಿದಾಡುತ್ತಿದ್ದೆ. ಎಳಲತೆಯೊಡಗೂಡಿ ಕಿರು ನಕ್ಕು ಲಘುವಾಗಿ ತೇಲುತ್ತಿದ್ದೆ. ತಡೆತಡೆದು ಹರಿಯುತಿಹ ತೊರೆಯೊ ಡನೆ ಹರಿದು ನಿನ್ನನ್ನು ಹೊಗಳುತ್ತಿದ್ದೆ. ನಿನ್ನ ಗಾನಕ್ಕೆ ಮನಸೋತ ‘ಕಾನನದ ಮೌನದಲ್ಲಿ ವೇದ ವೇದಾಂತಗಳ ಹೀರಿ, ಶಾಂತಿಯನ್ನು ಬಯಸುತ್ತಿದ್ದೆ. ಇನ್ನೆಲ್ಲಿ ವೇದಾಂತ ಇನ್ನೆಲ್ಲಿ ಬೋಧಾಂತ?’ ಭೂತ ಕಾಲದ ಒಡಲನ್ನು ಸೀಳಿ, ದುಃಖದ ಹೃದಯವನ್ನು ಬಿರಿದು, ಹೊರ ಬರುವ ಸುಖಶಾಂತಿಯ ನೆನಪೊಂದು ನನಗಿಂದು ಕೈದೀಪವು. ತಾಂಡವಾ, ಹೆಣ್ಣು ಕೋಗಿಲೆಯು ನನ್ನ ಕಾಡಿನ ಗೆಳತಿಯು; ಮರೆ ಯಲ್ಲಿ ನಿಂತು ಮಾತಾಡಿದಳಲ್ಲದೆ, ಮೋರೆ ತೋರಿಸಿದವಳಲ್ಲ.

**ತಾಂಡವ**—ಅವ್ವಾ, ಅಲ್ಲಿ ತೊರೆಯು ಹರಿಯುವಲ್ಲಿ ಕೋಗಿ ಲೆಯ ಇಂಪಾದ ಗಾನವನ್ನು ಕೇಳಿ, ಭೂತ ಭಾವೀ ವರ್ತಮಾನ ಗಳನ್ನು ಕೊಡು, ಹಿಂದೆಂದು ಮುಂದೆಂದು, ಹಾಳೆಂದು ಒಳ್ಳಿತೆಂದು ಒಪ್ಪೆಂದು ತಪ್ಪೆಂದೆಲ್ಲವನ್ನು ಮರೆಯುವೆವು. ಬಾ, ಬಾರೊ, ಮುಂದು ವರಿಯುವ!

**ತಾಪಸಿ**—ಮಗೂ, ತಾಂಡವಾ, ತಡೆ, ತಡೆ. ಕಾಲಿಗೊಂದು ಮುಳ್ಳು ಚುಚ್ಚಿತವ್ವಾ.

**ತಾಂಡವ**—ಅಮ್ಮಾ, ನೋವಾಯಿತೆ? ಮುಳ್ಳು ಕಾಣುತ್ತಿ ದೆಯೆ? ಅಯ್ಯೋ, ಕಣ್ಣಿಲ್ಲದ ಜನನಿಗೆ ಕಾಣುವುದುಂಟೇ? (ಮುಳ್ಳು

ತೆಗೆಯುವನು.) ಅಮ್ಮಾ, ನನ್ನ ಹೆಗಲ ಮೇಲೆ ತೋಳನ್ನಿಟ್ಟು ಮುನ್ನಡೆಯು, ಬೀಳಲಾರೆಯಮ್ಮ.

**ತಾಪಸ**—ಈ ಮರದ ಕೊಂಬೆಯೊಂದು ನನಗೆ **ಎಟಕಿತು.** ಮುಂಚೆ ಕೊಳುಗುಳದಲ್ಲಿ ಶತ್ರುಗಳ ಬಾಣಗಳ ನೋವಿಗೆ ಹೆದರದವ ನಿಂದು ಮರದ ರೆಂಬೆಗೆ ಬಾಗಬೇಕಾಯಿತೆ? ದೇವರ **ಮಾಯೆ!** ಬಲವೆಂದೂ ಗೆಲವೆಂದೂ, ಸ್ಥಿರವಲ್ಲ. ಮಗೂ, ಕಾಲ್ದಾರಿ ತಪ್ಪಿರುವೆನು, ದಾರಿ ಕಾಣಿಸಪ್ಪಾ!

**ತಾಂಡವ**—ಅಪ್ಪಾ, ದಾರಿಯಲ್ಲೆ ನಡೆಯುತ್ತಿರುವೆ. **ಅನೇ** ಕರು ನಡೆನಡೆದ ಈ ದಾರಿ ಮುಂದಕ್ಕೆ ಸಾಗುತ್ತಿದೆ; ಹಿಂದಕ್ಕೆ **ತೋರು** ತ್ತಿದೆ. ಬದಿಯಲ್ಲಿ ಗಿಡಬಳ್ಳಿ ಬೆಳೆದು ಕಾಡೆಲ್ಲ ನಿಂತಿದೆ. **ಬಾ. ನನ್ನ** ಹೆಗಲಲ್ಲಿ ಕೈಯಿಟ್ಟು ಬಿಡು. ಆಧಾರವಿದ್ದರೆ ತಪ್ಪಲಾರೆ.

**ತಾಪಸ**—ನಮ್ಮ ಕುಲದ ಏಕಮಾತ್ರ ಆಧಾರ **ಸ್ವರೂಪನೆ,** ನಮ್ಮ ವೃದ್ಧಾಪ್ಯದ ಆಧಾರಸ್ತಂಭನೆ, ನಮಗಾಗಿ **ಬಳಲುವೆಯಾ?** ನಮಗಾಗಿ ತೊಳಲುವೆಯಾ?

**ತಾಪಸಿ**—ತಾಂಡವಾ, ಹುಲಿಯ ಆರ್ಭಟವನ್ನು **ಕೇಳಿದೆಯಾ?** (ಎಂದು ಅಪ್ಪಿಕೊಳ್ಳುವಳು.) ಹಿಂದೆ ಬಾಲ್ಯದಲ್ಲಿ ಹುಲಿಗೆ ಬೆದರಿ ತಂದೆಯನ್ನು ಅಪ್ಪಿಕೊಂಡಿದ್ದೆ. ಕಡೆಗೆ ಈ ವೃದ್ಧಾಪ್ಯದಲ್ಲಿ ನಿನ್ನನ್ನು **ಅಪ್ಪಿ** ಕೊಂಡು ಭಯದಲ್ಲೂ ಪುಲಕಗೊಂಡೆ. ಸಾವಿನಲ್ಲೂ ಸಂತಸಗೊಂಡೆ.

**ತಾಪಸ**—ತಾಂಡವಾ, ಕೇಳಿದೆಯಾ? ನಾವು ಈ ವೃದ್ಧಾಪ್ಯದಲ್ಲಿ ಎಲ್ಲವನ್ನೂ ತ್ಯಜಿಸಿ, ಯಾತ್ರೆಗೆ ತೆರಳಿರುವೆವು. ಈ ಲೋಕದಲ್ಲಿ ನಮ್ಮದಾಗಿ ಇರುವುದಾದರೂ ಏನಿದೆ? ಹಿಂದೆ ರಾಜರ್ಷಿಯಾದ **ಜನಕನ** ರಾಜಧಾನಿಗೆ ಉರಿ ಬಿತ್ತು. ಆಗ ಆ ಮಹಾನುಭಾವನು **ಒಂದೆಡೆ** ನಿಂತು, "ಮಿಥಿಲೆಯು ಉರಿಯುವಾಗ ನನ್ನದೇನೂ ಸುಡಲಿಲ್ಲ." **ಎಂದು** ಹೇಳಿದನು. ತಾಂಡವಾ! ನೀರು ಇನ್ನೆಷ್ಟು ದೂರವಿರಬಹುದಯ್ಯಾ?

**ತಾಂಡವ**—ಅಪ್ಪಾ, ತಂಪಾದ ಗಾಳಿಯ ಸ್ಪರ್ಶವನ್ನು ತಿಳಿಯ ಲಾರೆಯಾ? ಇನ್ನೊಂದು ಮುಹೂರ್ತದಲ್ಲಿ ನಾವು ಜಲಾಶ್ರಯವನ್ನು ಹೊಂದುವೆವು. ಅಲ್ಲಿ ಮಿಂದು, ಪರಮಾತ್ಮನನ್ನು ವಂದಿಸಿ, ನೀರನ್ನು ಕುಡಿದು, ದಣುವಾರಿಸಿ, ಮುಂದಕ್ಕೆ ನಡೆಯುವೆವು. ಇನ್ನು ಕೆಲದಿನ ಗಳಲ್ಲಿಯೆ, ನಾವು ಕಾಶಿಯ ಪುಣ್ಯಕ್ಷೇತ್ರವನ್ನು ಸೇರಿ ಗಂಗೆಯ ದರ್ಶನ ಲಾಭವನ್ನು ಪಡೆಯುವೆವು.

**ತಾಪಸಿ**—ಮಗೂ, ಇದಾವ ದೇಶವು?

**ತಾಂಡವ**—ಅಮ್ಮಾ, ಇದು ಕೋಸಲ ದೇಶವು. ಇಲ್ಲಿಯ ಅರಸನು ಅಜನೆಂಬವನು. ಆತನ ಮಗನಾದ ದಶರಥನು ಯುವ ರಾಜನು. ಇಬ್ಬರೂ ಪರಮ ಧಾರ್ಮಿಕರು, ಪರಮ ಧೈರ್ಯಶಾಲಿಗಳು.

**ತಾಪಸಿ**—ಇರಲಪ್ಪಾ, ಬಹುಕಾಲ ಬಾಳಿ, ಅರಸು ಗೈಯಲಿ. ಊರಿಗೆ ದೊರೆ ರೂಪು; ಕೋಗಿಲೆಗೆ ಸ್ವರ ರೂಪು, ಎನ್ನುವರಲ್ಲವೆ?

**ತಾಂಡವ**—ಅಪ್ಪಾ, ಅಸ್ತಮಾನವಾಗುತ್ತ ಬಂದಿತು. ಸೂರ್ಯನು ಮುಳುಗುತ್ತಿರುವನು. ಕತ್ತಲೆಯು ಕೂಡುತಿದೆ. ಬೇಗನೆ ಮುನ್ನಡೆಯುವ.

**ತಾಪಸ**—ಅಯ್ಯೋ, ರವಿಯು ಮುಳುಗುವನೆ? ಎಲೈ ಸೂರ್ಯ ದೇವನೆ, ಇನ್ನೊಂದು ಮುಹೂರ್ತ ಹೆಚ್ಚಿಗೆ ಬೆಳಗಲಾರೆಯಾ? ಕತ್ತಲಿ ನಲ್ಲಿ ನಾವೆಂತು ನಡೆಯುವೆವು? ಈ ಸುಕುಮಾರನು ಎಂತು ಸಹಿಸಿ ಕೊಳ್ಳುವನು? ಈ ನನ್ನ ಸಹಧರ್ಮಿಣಿಯು ಹೇಗೆ ಸೈರಿಸುವಳು? ಕತ್ತಲು, ಕತ್ತಲಿನ ಕಾಡು, ಕತ್ತಲಿನ ಆರ್ಭಟೆ, ಅಂಧಕಾರ . . . . ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋ ರ್ಮಾ ಮಮೃತಂ ಗಮಯ, ಆವೀರಾವೀರ್ಮ ಏಧಿ ರುದ್ರ ಯತ್ತೇ ದಕ್ಷಿಣಂ ಮುಖಂ ತೇನ ಮಾಂ ಪಾಹಿ ನಿತ್ಯಮ್ ॥

**ತಾಂಡವ**—ಅಪ್ಪಾ, ವಿಧಿಯ ನಿಯಮವಿದು. ಮೂಡಿದ ರವಿಯು ಮುಳುಗುವನು. ಹುಟ್ಟಿದವನು ಸಾಯುವನು. ಅಪ್ಪಾ, ಬಹಳ

ಬಳಲಿದೆ, ಇದೋ, ಇಲ್ಲೊಂದು ಬಳ್ಳಿಮನೆಯಿದೆ. ಬಳ್ಳಿಗಳು ಬಳುಕಿ, ಮನೋಹರವಾಗಿ ಕಾಣುತ್ತಿವೆ. ಬಳ್ಳಿಗಳ ಕೈಗಳು ಒಂದ ಕ್ಕೊಂದು ಅಪ್ಪಿಕೊಂಡು, ಮಂದಮಾರುತನಲ್ಲಿ ನಲಿಯುತಿವೆ. ವಿಶ್ರ ಮಿಸು; ಅಮ್ಮಾ! ನೀನಿಲ್ಲಿ ವಿಶ್ರಮಿಸು. ತಾತ! ನೀನಿಲ್ಲಿ ಕುಳಿತು ಕೊಂಡಿರು. ತ್ವರ್ಯದಲ್ಲಿಯೆ ನೀರನ್ನು ತರುವೆನು.

**ತಾಪಸ**—ಆದೀತು,. ಇನ್ನೆಷ್ಟು ನಡೆಯುವುದು? ಇಲ್ಲಿಯೆ ಭೂಮಿಗೊರಗಿ ಹಗಲನ್ನು ಕಾಯುವಾ. ಬಾ, ಹೋಗಿ ಬಾ; ನೀರು ತಾ.

**ತಾಪಸಿ**—ಮಗೂ, ಬಹುದೂರ ಹೋಗಬೇಡ. ಸಂಜೆಯೊಳಗೆ ಹಿಂತಿರುಗು. ನೀರಿಲ್ಲದಿದ್ದರೂ ಚಿಂತೆಯಿಲ್ಲ.

**ತಾಂಡವ**—ಅಮ್ಮಾ, ನೀರು ತಂದೇ ತರುವೆನು. ಹುಟ್ಟಿಸಿದ ದೇವರು ನೀರನ್ನು ಕೊಡಲಾರನೆ? ಹೋಗಿ ಬರುವೆನು. (ಹೋಗುವನು, ಮತ್ತೆ ಹಿಂತಿರುಗಿ) ಅಪ್ಪಾ, ಹಿಂದಕ್ಕೆ ಕರೆದೆಯಾ?

**ತಾಪಸ**—ಇಲ್ಲ. ಮಗೂ, ನಾನು ಕರೆಯಲಿಲ್ಲ. ನಾನು ಹೆದರು ವುದಿಲ್ಲ. ಆದರೆ, ಬಾ . . . . ಒಮ್ಮೆ ನನ್ನೀ ಅರಿವೆಯನ್ನು ಸರಿಪಡಿಸು. (ತಾಂಡವನು ಬಂದು ಅರಿವೆಯನ್ನು ಸರಿಪಡಿಸುವನು.) ಅಪ್ಪಾ, ನಿನ್ನ ಕರ ಸ್ಪರ್ಶವು ಚಂದನ ಶೀತಲವಾಗಿದೆ. ಬಹಳ ಬಳಲಿದೆ. ನಿನ್ನ ದುಂಡ ಗಿನ ಕೈ ಕೃಶವಾಗಿದೆ; ಹಣೆಯು ಬೆವರಿದೆ; ಕೆನ್ನೆಯು ಮುಳುಗಿದೆ; ಮಗೂ ಕಷ್ಟಬಟ್ಟೆ.

**ತಾಪಸಿ**—ಮಗೂ, ನನ್ನ ಮನಸ್ಸು ಅಂಜುತಿದೆ. ನಿನ್ನ ತಂದೆಯ ಸನ್ನಿಧಿಯಲ್ಲೂ ಶೂನ್ಯಗೊಳ್ಳುತಿದೆ. ಬಾ, ಬಾ, ನನ್ನ ಮನಸ್ಸನ್ನು ತುಂಬಿಸು. ನನ್ನ ಕೈಯನ್ನು ಹಿಡಿಯು.

**ತಾಂಡವ**—ಅಮ್ಮಾ, ಆಗ ಕಂಡ ಹುಲಿಯ ಹೆದರಿಕೆಯಿರ ಬಹುದು. ನಿಮಿಷದಲ್ಲೆಯೇ ಹಿಂತಿರುಗುವೆನು. (ಹೋಗುವನು.)

**ತಾಯ್ತಂದೆ**—ಅಯ್ಯೋ, ತಾಂಡವಾ, ನೀರು ತಾ; ಬೇಗ ಬಾ; ಹೋಗಿ ಬಾ!

**ತಾಪಸ**—ಸುಕುಮಾರನು ಬಹಳ ಬನ್ನಬಟ್ಟನು. ವಿಹಾರವೆಲ್ಲಿ? ಕೋಸಲವೆಲ್ಲಿ? ಹಗಲಲ್ಲಿ ನಡೆದು, ಇರುಳಲ್ಲಿ ತಡೆದು, ಇಂತಿಷ್ಟು ದೂರವನ್ನು ಕ್ರಮಿಸಿದೆವು. ಗಂಗಾಮಾತೆಗೆ, ಈ ದೇಹವನ್ನು-ಈ ನಿಷ್ಪಿಷ್ಟಗಾತ್ರವನ್ನು ವಿಸರ್ಜಿಸಲು ತಾಂಡವನಿರದಿದ್ದರೆ, ಬರಲಾಗುತಿತ್ತೆ?

**ತಾಪಸಿ**—ಆರ್ಯ, ಕಟ್ಟಿರುಳ ಕತ್ತಲೆಗೆ ಹೆದರಿದವಳಲ್ಲ; ಕಾಡಾಡಿ ಮೃಗಗಳಿಗೆ ಅಂಜಿದವಳಲ್ಲ. ಆದರೆ, ನನ್ನ ಹೃದಯವಿಂದು ಭೇದಿಸುತಿದೆ. ಕಣ್ಣುಗಳು ಒಡೆಯುತಿವೆ. ಕೈಕಾಲು ಉಗಿಯುತಿವೆ. ಅಹಾ! ಗಂಗೆಯ ಪಾವನ ದರ್ಶನವನ್ನು ನೋಡುವಷ್ಟು ಸುಕೃತವನ್ನು ಕಾಣಲಾರೆ.

**ತಾಪಸ**—ಹೆದರದಿರು, ಗೌತಮಿ ಹೆದರದಿರು. ಬಾಯಾರಿ ಕಂಗೆಟ್ಟಿರುವೆ. ಸೈರಿಸು.

**ತಾಪಸಿ**—ಪುತ್ರಾ, ಯೌವನದ ಸುಖವನ್ನು ತ್ಯಜಿಸಿ, ಪಟ್ಟಣದ ವಾಸವನ್ನು ಬಿಟ್ಟು, ಇಂದೋ ನಾಳೆಗೋ ಸಾಯುವ ಮುದಿ ಹಿರಿಯರೊಡನೆ, ಪಯಣಬೆಳಸಿದೆ. ಎಲೆಬಿದ್ದು, ಒರಟೊರಟಾದ ನೀರನ್ನು ಕುಡಿದು, ಹಣ್ಣುಹಂಪಲುಗಳಿಂದ ದಿನ ನೂಕಿದೆ. ನಡೆಯಲಾರದೆ ನಾವು ಕೂತಾಗ ಹೆಗಲಲ್ಲಿ ಕಾವಡಿಯೊಳಗೆ ಹೊತ್ತು ನಾನಾ ತೀರ್ಥಯಾತ್ರೆಗಳಲ್ಲಿ ತೊಳಲಿದೆ. ಕಲ್ಲುಮುಳ್ಳುಗಳಿಂದ ನಿಬಿಡವಾದ ಮಾರ್ಗವನ್ನು ಸರಿಪಡಿಸಿ, ಮೈತುಂಬ ಗಾಯುವಟ್ಟೆ. ಹುಲಿ ಕರಡಿಗಳೊಡನೆ ಕಾದಾಡಿ ನಮ್ಮನ್ನು ರಕ್ಷಿಸಿದೆ. ನಿನ್ನೀ ಉಪಕಾರವನ್ನು ಇನ್ನೆಷ್ಟು ಕಾಲ ನಾವು ಸ್ಮರಿಸಲಿ? ನಮ್ಮ ಕಾಲವು ಮುಗಿಯಬಂತು, ಗಳಿಗೆಯ ಬಟ್ಟಲು ತುಂಬಿ ಬಂತು. ಸಂಸಾರದ ಸುಖದುಃಖಗಳಲ್ಲಿ ಉರುಳಾಡಿ, ಶತ್ರುಮಿತ್ರರ ನೀತಿಯೊಳಗೆ ಸಿಲುಕಾಡಿ, ಕಾಲಚಕ್ರದ ತುಳಿತಕ್ಕೆ ಮೈಯೊಡ್ಡಿಯಾಯಿತು. ತೆರಳುವವರು ನಾವು. ಪರಮಾತ್ಮನು ನಿನ್ನನ್ನು ಸಲಹಲಿ.

**ತಾಪಸ**—ಗೌತಮಿಾ, ತಾಂಡವನೆಂದರೆ ನನ್ನ ಜೀವನದ ಕುಸುಮವು. ಅವನ ಚಮತ್ಕಾರವು ಅಸದೃಶವಾದುದು. ಅವನ ನಡತೆಯು ಅದ್ವಿತೀಯವಾದುದು. ಅವನ ನಡೆಗೆ ಸಾಟಿಯಿಲ್ಲ; ಮಾತಿಗೆ ಕೊಂಕಿಲ್ಲ. ಪರಮಾತ್ಮನು ಅವನನ್ನು ಹರಸುವನು. ಅವನು ಇಷ್ಟರೊಳಗೆ ನೀರನ್ನು ಕಂಡು, ಹಿಂತಿರುಗಿ ಬರುತಿರಬಹುದೆ? ಗೌತಮಿಾ, ಸುಖವಾಗಿರುವೆಯ?

**ತಾಪಸಿ**—ಆರ್ಯ, ಜಗತ್ತು ಶೂನ್ಯವೆನಿಸುತ್ತಿದೆ. ಹುಲಿಗಳ ಆರ್ಭಟೆಯಿಲ್ಲ. ಹರಿಯುವ ಗಾಳಿಯಿಲ್ಲ. ನಿಂತ ನೆಲವಿಲ್ಲ; ತೂಗುವ ಬಾನಿಲ್ಲ. ಅಹಾ! ಇದೇನು ಪ್ರಳಯಕಾಲದ ಬೆದರಿಕೆಯೆ? ಜಗತ್ತೆಲ್ಲ ತಾಂಡವವಾಡುತಿದೆ. ಗುಡುಗು ಹೊಡೆಯುತ್ತಿದೆ. ಮಿಂಚು ಹೊಳೆಯುತ್ತಿದೆ. ಅಹಾ! ಸೈರಿಸಲಾರೆ. ತಾಂಡವ, ಹೋಗಿಬಂದೆಯಾ? ನೀರು ತಂದೆಯಾ? ಬೇಗ ಬಂದೆಯಾ?

---

## ಎರಡನೇ ದೃಶ್ಯ.

(ರಂಗಸ್ಥಳದ ಮೇಲೆ ನಸು ಬೆಳಕು. ತಾಂಡವನು ತೋಳ ತಲೆಗಿಂಬಿನಲಿ ಮಲಗಿರುವನು. ಒಂದೆಡೆ ದಶರಥನು ಚಿಂತಾಕ್ರಾಂತನಾಗಿ ತೋರುವನು, ಇನ್ನೊಂದೆಡೆ ತಾಂಡವನ ತಂದೆತಾಯ್ಗಳು ಕುಳಿತಿರುವರು.)

**ದಶರಥ**—ಕಣ್ಣಿಲ್ಲದ ವೃದ್ಧ ಮುನಿಗಳ ಕಣ್ಣನ್ನು ಕೀಳುವಂತಾಯಿತೆ? ನಡೆಯಲಾರದ ಮುದಿಸಿಂಹನ ಊರುಗೋಲನ್ನು ಕೀಳುವಂತಾಯಿತೆ? ಅಯ್ಯೊ ವಿಧಿಯೆ! ನನಗೇಕೆ ಮೃಗಬೇಟೆ ಬೇಕಾಯಿತು?

**ತಾಂಡವ**—ದಶರಥನೆ, ತಂದೆತಾಯ್ಗಳನ್ನು ಹೊತ್ತು ಇಳೆಯೊಳುಳ್ಳ ಸಮುಸ್ತ ತೀರ್ಥಕ್ಷೇತ್ರಗಳನ್ನು ತೊಳಲಿದೆನು. ಆದರೆ ಉಳಿದುದೊಂದೇ ಕಾಶಿ; ಹಿಮಾಲಯದ ಮಹತ್ವವು ಯೋಗಿಗಳ ತಪಃಪ್ರಭಾವಕ್ಕೆ ಕರಗಿ ನೀರಾಗಿ ಹರಿಯುತ್ತಿರುವ ಗಂಗೆಯ ಪಾವನವಾದ ಕಾಶೀ ಕ್ಷೇತ್ರವು. ದಶರಥ, ನನ್ನದೊಂದು ಕೋರಿಕೆಯಿದೆ.

**ದಶರಥ**—ಅವಶ್ಯವಾಗಿ ತಿಳಿಸಬೇಕು. ಪವಿತ್ರವಾದ ಕರ್ತವ್ಯವೆಂದು ಬಗೆದು ಪ್ರಾಣಪಣವಾಗಿ ನೆರವೇರಿಸುವೆನು.

**ತಾಂಡವ**—ಹಳೆದಿನದ ತಾಯ್ತಂದೆ—ಇವರನ್ನು ಕಾಶಿಯೊಳು ಇಳಿಸಿ ಧನ್ಯರನ್ನಾಗಿ ಮಾಡಬೇಕು, ಕಂಡೆಯಾ? ಭಾಗ್ಯಹೀನನು ನಾನು. ತಾಯಿ, ನನ್ನ ತೋಳ ತಲೆಗಿಂಬನ್ನು ಸರಿಪಡಿಸಮ್ಮಾ . . . .

**ತಾಪಸಿ**—ತೋಳ ತಲೆಗಿಂಬು . . . . ಹುಲ್ಲಿನ ಹಾಸು . . . . ಮುಗಿಲ ನೆರಳು! ಅದೃಷ್ಟವು ಹೀಗೆ ಸುಟ್ಟು ಹೋಗಬೇಕಾಯಿತೆ? ತಾಂಡವಾ, ನಿರ್ಗತಿಕರ ಗತಿಯಾಗಿದ್ದೆ; ಕಣ್ಣಿಲ್ಲದ ತಂದೆತಾಯ್ಗಳ ಕಣ್ಣಾಗಿದ್ದೆ. ಇನ್ನೇಕೆ ಕಾಶಿ? ಇನ್ನಾವ ಪುಣ್ಯ ಸಂಪಾದನೆಯು?

**ತಾಂಡವ**—ತಾತ, ನನ್ನನ್ನು ಹೋಗಗೊಡು. ಮುದ್ದಿನ ತಾಯಿ! ತೋಳ ತಲೆಗಿಂಬು ಸರಿಯಾಗಲಿಲ್ಲ. ನಿನ್ನ ತೊಡೆಗೆ ಒರಗುವೆನಮ್ಮಾ. (ಹಾಗೆಯೇ ಮಾಡುವನು.) ದಶರಥ, ಕಂಡೆಯಾ? ಬಹಳ ಮಾತಿಂದೇನು? ನನ್ನ ಮಾತೆಯ ಸಲಹು; ತಾತನ ರಕ್ಷಿಸು.

**ದಶರಥ**—ಮುನಿಪುತ್ರ, ಚಿಂತಿಸದಿರು. ಮಾಡಿದ ಅಪರಾಧದ ಪ್ರಾಯಶ್ಚಿತ್ತವೆಂದು ನೆನೆದು, ರಾಜವೈಭವವನ್ನು ಬಿಟ್ಟು, ಜವ್ವನದ ಪರಿಮಳಿತ ಲಿಖಿತವನ್ನು ತೊರೆದು, ತೀರ್ಥಯಾತ್ರೆಯಲ್ಲಿ ನಿನ್ನ ತಂದೆ ತಾಯ್ಗಳೊಡನೆ ತೊಳಲುವೆನು.

**ತಾಂಡವ**—ಅಮ್ಮಾ, ವೇದನೆಯ ಸಹಿಸಲಾರೆ. ನಿಮ್ಮ ಗತಿಯನ್ನು ಕಂಡು, ದುಃಖವು ಉಕ್ಕಿಬರುತಿದೆ; ಪ್ರಾಣವು ಕುಗ್ಗಿ ಹೋಗುತಿದೆ.

**ತಾಪಸ**—ಮಗನೆ, ಈ ವೃದ್ಧಮಾತೆಯನ್ನೂ ಮುದಿ ತಂದೆಯನ್ನೂ ಬಿಟ್ಟು ಹೋಗುವೆಯಾ? ನಮ್ಮನ್ನು ಅಗಲಿ ಬಾಳಿದವನಲ್ಲ; ನಮ್ಮನ್ನು ಮರೆತು ಸುಖಿಸಿದವನಲ್ಲ; ಈಗೆಂತು ನಮ್ಮನ್ನು ಬಿಟ್ಟು, ಕಾಣದ ದೇಶದ ಮರವೆಯ ಊರಿಗೆ ತೆರಳುವಿ? ಅಯ್ಯೋ, ತೀರ್ಥಯಾತ್ರೆಯಲ್ಲಿ ತೊಳಲಿ ಗಳಿಸಿದ ಪುಣ್ಯರಾಶಿಯೂ ಕೈ ಬಾರದಂತಾಯಿತೆ?

**ತಾಂಡವ**—ತಾತ! ಈ ದಿನದ ಮುಚ್ಚಂಜೆ ಬಳಿಗೈದುತಿದೆ. 'ಮತ್ತೆ ಸೇರುವುದದು ನೂರ್ಕ್ಕೋಟಿ ನಿನ್ನೆಗಳ ಜತೆಗೆ'. ಮರವೆಯ ಶೂನ್ಯದೊಳು ನನ್ನನ್ನು ಮರೆಯು; ನಿನ್ನೆಗಳ ಜತೆಯಲ್ಲಿ ಎಲ್ಲವನ್ನು ಗಣಿಸು. ತಾಯಿ, ಪರಮಾತ್ಮನನ್ನು ನೆನೆದು, ಸಂಸಾರವನ್ನು ಮರೆಯು.

**ತಾಪಸ**—ಅಯ್ಯೋ, ತಾಂಡವಾ, ನಿನ್ನ ಕಣ್ಣಿನಲ್ಲಿ ಪರಮೇಶ್ವರನ ಸನ್ನಿಧಾನವಿದೆ. ಗೌತಮಿ, ನೋಡು, ನೋಡು . . . . ಪುತ್ರಕನ ಕಣ್ಣುಗಳು ಬೆಳಗುತಿವೆ.

**ತಾಂಡವ**—ಅಯ್ಯೋ, ಎದೆಯೊಡೆಯುತಿದೆ. ಬಾ . . . . ನನ್ನ ಕೈ ಮುಟ್ಟಿರಿ . . . . ಒಂದು ತಟಕು ನೀರು . . . . ಒಂದು ತಟಕು ನೀರು.

**ತಾಪಸ**—ಅಯ್ಯೋ, ತಂದೆತಾಯ್ಗಳಿಗಾಗಿ ತಂದ ನೀರನ್ನು ಕುಡಿಯು; ಅಪ್ಪಾ, ನೀರನ್ನು ಕುಡಿಯುವ ಮುಂಚೆಯೆ ಕೂರಾದ ಬಾಣಕ್ಕೆ ಗುರಿಯಾದೆಯಾ? ಅಯ್ಯೋ ತಾಂಡವಾ!

**ತಾಂಡವ**—ಬಾ, ಅಮ್ಮ! ಬಾ, ತಾತ! ಅಯ್ಯೋ, ಪರಮೇಶ್ವರ! . . . . (ತೀರುವನು.)

**ತಾಪಸ**—ಅಯ್ಯೋ ತಾಂಡವಾ! ನಮ್ಮನ್ನು ಬಿಟ್ಟುಹೋದೆಯಾ? ಇನ್ನು ಕಂದಮೂಲಗಳನ್ನು ತಂದುಕೊಡುವವರಾರು? ಮಧುರವಾಗಿ ಶಾಸ್ತ್ರವನ್ನು ಓದಿ ತಿಳಿಸುವರಾರು? ಅಯ್ಯೋ, ಈ ಪುತ್ರಗರ್ಧಿನಿಯನ್ನು ಸಂತೈಸುವರಾರು? ಮಗೂ ತಾಂಡವಾ, ನಿನ್ನನ್ನು ಕಂಡು, ನಿನ್ನನ್ನು ಮೈತುಂಬ ಮುಟ್ಟಿ, ನಾವೂ ನಿನ್ನ ಹಿಂದೆಯೇ ಬರುವೆವು. ಗೌತಮಿ, ಅಳಬೇಡ.

**ತಾಪಸಿ**—ಆರ್ಯ! ಮಗನು ನೀರಿಗಾಗಿ ಪ್ರಾಣಬಿಟ್ಟನು. ಗಂಗಾಸ್ನಾನದ ಪವಿತ್ರ ಪುಣ್ಯಕ್ಕಾಗಿ ಅಲ್ಲಿಂದ ಇಲ್ಲಿಯ ವರೆಗೆ ನಡೆ ನಡೆದು, ಮರುಳುಕಾಡಿನ ಬಿಸಿಲುಕುದುರೆಯ ಹಿಂದೆ ಬೆಂಬತ್ತಿದೆವು. ನೀರು, ನೀರು ಎಂದು ಹಂಬಲಿಸಿ, ಮಗನನ್ನು ಮೃತ್ಯುವಿನ ದಾಡೆಯೊಳಗೆ, ಯಮಧರ್ಮನ ತೆರೆದ ಮುಖದೊಳಗೆ ಅಟ್ಟಿದೆವು. ಎದೆ

ಯೊಡೆದು, ಗುಡುಗಾಡಿ, ನೆಲನಡುಗಿ, ಮಳೆಸುರಿದು, ನೆರೆಯಾಗಿ ಊರೂರು ತೇಲಿಹೋಯಿತು. ಇದೋ, ಕಣ್ಣೀರ ಧಾರೆಯಲ್ಲಿ ಗಂಗೆಯ ಪವಿತ್ರವಾದ ಸನ್ನಿಧಾನವಿದೆ. ಕಣ್ಣೀರ ಗಂಗೆಯಲ್ಲಿ ಮಿಂದು, ಕಣ್ಣೀರ ಗಂಗೆಯನ್ನು ಕುಡಿದು, ಕಂಬನಿಯ ಗಂಗೆಯಲ್ಲಿ ಕರಗಿ, ಕಂಬನಿಯ ಗಂಗೆಯಲ್ಲಿ ತೇಲಿ, ಕಣ್ಣೀರ ಗಂಗೆಯೊಡನೆ ಹುರಿಯಂತೆ ಹರಿದು ಅನಂತದೊಡನೆ ಕೂಡುತಿರುವೆವು. ಅಯ್ಯೋ, ದೇವರೆ, ಅಯ್ಯೋ ದೇವರೆ! ನೀನೂ ಮನುಷ್ಯರಂತೆ ಪಾಷಾಣ ಹೃದಯುದವನೆ?

**ತಾಪಸ**—ಗೌತಮಿ, ನೋಡು. ನಮ್ಮಾ ಪುತ್ರಕನು ರಕ್ತ ಸಿಕ್ತಾಂಗನಾಗಿ, ಯಮಧರ್ಮನ ವಶನಾಗಿ ಪವಡಿಸಿರುವನು. ಮೃಗ ಗಳ ಕ್ರೌರ್ಯವನ್ನು ಕೊರೆಯುವ ಬಾಣವು ಇವನ ಹೃದಯವನ್ನು ಹೊಕ್ಕೊಡನೆ, ಚಿಳ್ಳೆಂದು ಮೇಲಕ್ಕೆ ಹಾರಿದ ರಕ್ತದ ಕಣಗಳು ಎದೆ ಯಲ್ಲಿ ಎದ್ದುತೋರುತಿವೆ. ಈ ಧಾರೆಯಾಗಿ ಬಸಿದ ರಕ್ತದೊಡನೆ ಇವನ ಪ್ರಾಣವಾಯುವೂ ಹರಿದುಹೋಯಿತು. ಗೌತಮಿ, ನೋಡು. ನೋಡು.

**ದಶರಥ**—ಮಹಾತ್ಮನೆ, ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ತಾಯೆ! ಚಿಂತಿಸದಿರು.

**ತಾಪಸ**—ಅಯ್ಯೋ ತಾಂಡವಾ, ಸಮರದ ಲೀಲೆಯಲಿ ಕುಣಿ ದಾಡಿ, ಬಸವಳಿದು ಹಿಂತಿರುಗದ ಶೂರರು ನಡೆಯುವ ಪರಮ ಸ್ಥಾನಕ್ಕೆ ನೀನು ತೆರಳು. ಶಿಬಿ, ಸಗರ, ಜನಮೇಜಯ, ದಿಲೀಪ ಮೊದಲಾದವರು ಹೊಂದಿದ ಪರಮಪದವನ್ನು ಹೊಂದು. ಸರ್ವದಾತೃ ಗಳ, ಸರ್ವಸಾಧುಗಳ, ಸರ್ವತಪಸ್ವಿಗಳ ಗತಿಯನ್ನು ಹೊಂದು. ದಶ ರಥ, ಇನ್ನೇನು ಗತಿಯೆಮಗೆ?

**ದಶರಥ**—ಮಹಾತ್ಮನೆ, ಕುಗ್ಗಿ ಹೋಗುವ ಪ್ರಾಣದೊಡನೆ, ಎದ್ದು ಬರುವ ಶಕ್ತಿಯೊಡನೆ, ತಡೆಯುವ ಮಾತಿನಿಂದ, ಉಮ್ಮಳಿಸುವ

ಕಂಠದಿಂದ ಯಾವ ಆಜ್ಞೆಯನ್ನು ಮುನಿಪುತ್ರನು ಕೊಟ್ಟನೊ, ಅದನ್ನು ಶಿರಸಾವಹಿಸಿರುವೆನು. ಮಹಾತ್ಮನೆ, ನನ್ನಿಂದೇನು ಆಗಬಹುದೋ, ಸಿದ್ಧನಿರುವೆನು.

**ತಾಪಸ**—ರಾಜಪುತ್ರನೆ, ನಿನ್ನಿಂದ ನಮಗೇನಾಗಬೇಕು? ಪಟ್ಟಣದ ವಾಸದಲ್ಲಿ, ವೈಭವದ ಹಾಸಿನಲ್ಲಿ ಮೆರೆದಿರುವ ನೀನು ನಮ್ಮೊಡನೆ ತೊಳಲುವೆಯಾ? ಬೇಡ, ಬೇಡ. ತಾಂಡವನಂತಹ ಪವಿತ್ರ ಮೂರ್ತಿಯು ಇನ್ನೊಂದು ಸಿಗಲಾರದು; ನಮ್ಮೊಡನೆ ತೊಳಲಲಾರದು.

**ದಶರಥ**—ಮಹಾತ್ಮನೆ, ಶೋಕಿಸದಿರು. ತಂದೆಗೆ ಮಗನಂತೆ ನಿಮ್ಮನ್ನು ಸಾಕಿ ಸಲಹುವೆನು. ತೀರ್ಥಯಾತ್ರೆಗಳಿಂದ ನಿಮ್ಮ ಜನ್ಮವನ್ನು ಸಫಲಗೊಳಿಸುವೆನು. ಶೋಕಿಸದಿರು,—

**ತಾಪಸ**—ಆಹಾ! ತಂದೆಗೆ ಮಗನಂತೆ ವರ್ತಿಸುವಿಯಾ? ತಾಂಡವನಂತಹ ಅದ್ವಿತೀಯ ಪುತ್ರನು ಮತ್ತೊಬ್ಬನಿರಲಾರನು; ಮತ್ತೊಬ್ಬ ಸಿಗಲಾರನು. ದಶರಥ, ನಮ್ಮ ಮಗನಾಗಲೊಲ್ಲೆ, ನಮ್ಮ ಮಗನಂತೆ ಪವಿತ್ರನಾಗಲೊಲ್ಲೆ.

**ದಶರಥ**—ಮಹಾತ್ಮನೆ, ಕ್ಷಮಿಸಬೇಕು! ವಿಶ್ವಾಸದಲ್ಲಿ, ಭಕ್ತಿಯಲ್ಲಿ ಊನನಾಗಲಾರೆ.

**ತಾಪಸ**—ಮಿಗಿಲಾಗಲಾರೆ, ಬಳಿ ಬರಲಾರೆ. ದಶರಥ, ಮಾತಾಡದಿರು.

**ದಶರಥ**—ಮಹಾತ್ಮನೆ, ಅಳಿದ ಮಗನೋಪಾದಿ ನಿಮ್ಮನ್ನು ಸಲಹುವೆನು; ನಂಬುವುದು ನೀವು.

**ತಾಪಸ**—ದಶರಥ, ಸಲಹುವವನು ನೀನಾರು? ಸಲಹುವವನು ಬಾಯೊಳು ಮಣ್ಣನ್ನು ಹೊಯ್ದಿಹನು; ನೋಡುವ ಕಣ್ಣೊಳು ಸುಣ್ಣವ ಹೊಯ್ದಿಹನು. ಜನರು, ಮಾಯಾ ಪ್ರಪಂಚದ ಅಜ್ಞಾನದಲ್ಲಿ ತೊಳಲುವ ತಿಳಿಗೇಡಿಗಳು ನಿನ್ನ ರಕ್ಷಣೆಗೆ ಅರ್ಹರು. ದಶರಥ, ರತ್ನ ಕಂಭವನ್ನು ಮುರಿದೆ; ಹೊನ್ನ ಕಳಶವನ್ನು ಕೆಡೆದೆ. ಸಲಹುವನು ನೀನಾರು?

**ದಶರಥ**—ಮಹಾತ್ಮನೆ, ಇಂದಿನ ತನಕ ಪಾಪವನ್ನಾಚರಿಸಿದವನಲ್ಲ. ಅದೃಷ್ಟವಶದಿಂದ, ಬೇಟೆಯ ಬಲೆಗೆ ಸಿಕ್ಕಿ, ಇಂತಹ ಅಕೀರ್ತಿಕರವಾದ ಕಾರ್ಯಕ್ಕೆ ಕೈಯೊಡ್ಡಬೇಕಾಯಿತು. ನಿಮ್ಮೊಡನೆ ತೀರ್ಥಯಾತ್ರೆಗೆ ಹೊರಡುವೆನೆಂದರೆ, ನನ್ನ ಜನಕನು ಅಲ್ಲಗಳೆಯಲಾರನು. ಪ್ರಾಯಶ್ಚಿತ್ತವೆಂದು, ನಿಮ್ಮ ನೆಳಲಾಗಿ, ನೀವು ಕುಳಿತಲ್ಲಿ ಕೂತು, ನಡೆದಲ್ಲಿ ನಡೆದು, ನಿಂತಲ್ಲಿ ನಿಂತು, ಆಜ್ಞಾಧಾರಕನಾಗುವೆನು.

**ಗೌತಮಿ**—ದಶರಥ, ಯಾರ ನೆಳಲಾಗಿ, ಯಾರ ಆಧಾರದಿಂದ ಜೀವಿಸಿದ್ದೆವೋ, ಅಂತಹವನೇ ಮಾಯವಾದಾಗ, ನಮ್ಮ ಅಸ್ತಿತ್ವವಾದರೂ ಉಳಿದಿರುವುದೇ? ದಶರಥ, ನೀನು ಹರೆಯದವನು; ಊರಿಗೆ ತೆರಳಿ, ಪ್ರಜಾರಂಜನೆಯನ್ನು ಮಾಡು. ಹೋಗು, ಹೋಗು—

**ದಶರಥ**—ಅಮ್ಮಾ, ನಿಜವಾಗಿಯೂ ನನ್ನಲ್ಲಿ ಕಪಟವಿಲ್ಲ; ನಾನು ಮಾಯಾವಿಯಲ್ಲ. ಉತ್ತಾನ ಹೃದಯನು ನಾನು. ನನ್ನನ್ನು ನಂಬಿ, ನನ್ನ ಮಾತನ್ನು ನಂಬಿ, ನನ್ನ ಆತಿಥ್ಯವನ್ನು ಕೈಗೊಂಡು ಮುನಿಪುತ್ರನ ಆಜ್ಞಾವ್ರತದಿಂದ ಮುಕ್ತನನ್ನಾಗಿ ಮಾಡಬೇಕು. ಕ್ಷಮಿಸಬೇಕು. ಸೆರಗೊಡ್ಡಿ ಬೇಡುವೆನು.

**ತಾಪಸ**—ದಶರಥ, ಸೆರಗೊಡ್ಡಿ ಬೇಡಲಿಕ್ಕೆ ಇದೇನು ಅರಸನ ಆಸ್ಥಾನವಲ್ಲ. ಅಯ್ಯೋ, ಗೌತಮಿ, ತಾಂಡವನ ಪವಿತ್ರವಾದ ಮೂರ್ತಿಯ ಸನ್ನಿಧಾನದಲ್ಲಿ ಹೊಲಸು ಮಾಡುವನಿವನು. ದಶರಥ, ಪಾಪದ ಬೀಡಲ್ಲವಿದು; ಸೆರಗೊಡ್ಡಲಿಕ್ಕೆ ದರ್ಪದ ಸ್ಥಾನವಲ್ಲವಿದು. ಪವಿತ್ರವಾದ ಜೀವನದ ಪರಮಾವಧಿಯ ಕೋಟೆಯಿದು. ತಾಂಡವಾ, ತಾಂಡವಾ, ಅದೃಷ್ಟವು ಹಾಳಾಗಬೇಕಾಯಿತೆ? ಸಹಿಸಲಾರೆ, ನಾನೀ ಪುತ್ರಶೋಕವನ್ನು ಸಹಿಸಲಾರೆ. ಗೌತಮಿ, ನನ್ನೀ ಹೃದಯವು ಪುಟದಲ್ಲಿ ಉರಿಯುತ್ತಿದೆ. ಕಣ್ಣೀರ ಶೋಕದ ಜಲತಂತುಗಳಿವು! ನಯನಗಳ ನೂತನ ವರ್ಷಾರಂಭದ ತುಂತುರುಗಳು. ಅಹಾ! ಹೃದಯದ ಶೋಕವು ನಯನಗಳಿಂದ ಉಕ್ಕಿ ಕರತಲಗಳನ್ನು ಮೀರುತ್ತಿವೆ. ಗೌತಮಿ, ಸಹಿಸಲಾರೆ. ದಶರಥ, ಈ ಕಣ್ಣೀರ ಗಂಗೆ . . . .

**ದಶರಥ**—ಮಹಾತ್ಮನೆ, ಕ್ಷಮಿಸು—ಮಾಡಿದ ಅಪರಾಧಕ್ಕಾಗಿ ಜೀವವನ್ನು ಕೊಡಲೂ ಸಿದ್ಧನಿರುವೆನು. (ತಾಪಸನ ಪಾದಗಳ ಮೇಲೆ ಬೀಳುವನು.)

**ತಾಪಸ**—ದಶರಥ, ಹೃದಯದ ಶೋಕಗಂಗಾ ಪ್ರವಾಹವಿದು, ನಿನ್ನ ಶಿರಸ್ಸಿನ ಮೇಲೆ ಹರಿಯುವಂತೆ ಹರಿಯುವಂತಾಗಲಿ! ಪುತ್ರವಿಯೋಗದಿಂದ, ಅಳಿವು ಸೇರಲಿ ನಿನಗೆ!

(ಸುತ್ತಲೂ ದೃಷ್ಟಿಯನ್ನು ಬೀರಿ, ನಿಶ್ವಾಸದೊಡನೆ.)

ಅಹಾ! ಏಳದಿರು, ಮುಳುಗುವ ಸೂರ್ಯನೆ! ಇನ್ನೊಮ್ಮೆ ಮೂಡದಿರು. ಪೆಂಪಿನ ವಸಂತನೆ! ಮುಗನೊಡನೆ ಮುಗಿಯು. ಹರಿಯುವ ತೊರೆಯೆ! ನಿಸ್ಸಾರ ಜಗತ್ತನ್ನು, ಸಮಸ್ತ ಲೋಕವನ್ನು ಕೊಚ್ಚಿಕೊಂಡು, ಬೆಟ್ಟಗಳ ತುದಿಯಿಂದ ಪಾತಾಳದ ಗನಿಗಳಿಗೆ ಧುಮ್ಮಿಕ್ಕಿ ಹಾರು! ಬೀಸುವ ಗಾಳಿ! ಬಿರುಸಾಗಿ ಬೀಸಿ, ಬೆಟ್ಟಗಳನ್ನು ಕಳಚಿ, ಮನೆಮರವನ್ನುರುಳಿಸಿ ಸಾಗು. ತಾಂಡವನಿಲ್ಲ; ತಾಂಡವ ನೃತ್ಯದೊಡನೆ ಪ್ರಳಯವಾಗುತ್ತಿದೆ, ನೋಡು. ಪ್ರಳಯವಾಗುತ್ತಿದೆ, ನೋಡು. ಮಗೂ, ತಾಂಡವಾ, ರುದ್ರಾವತಾರದ ತಾಂಡವದ ಧಿಮಿಧಿಮಿಯು ಪ್ರಳಯಕಾಲದ ಜಗತ್ತಿನೊಡನೆ ನನ್ನ ಹೃದಯವನ್ನು ಪುಡಿಗೈಯುತ್ತಿದೆ. ನಾನಿದನ್ನು ಸಹಿಸಲಾರೆ. ಹೃದಯವಿಂದು ಲಹರಿ ಲಹರಿಯಾಗಿ ಪ್ರವಹಿಸಲಿ! ಅಹಾ! ಅಂಧಕಾರ! ತುಂಬಿದ ವಿಸ್ತಾರದೊಡನೆ, ಶೂನ್ಯದ ಬಿಂದು; ಗೌತಮಿ, ಗೌತಮಿ, . . . . (ತೀರುವನು.)

**ತಾಪಸಿ**—ಆರ್ಯ, ಆರ್ಯ, . . . . (ತೀರುವಳು.)